ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 4 ಮಂಗಳವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 196 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರತೀ ಕಾವ್ಯದಲ್ಲಿ ಸೃಜನಶಕ್ತಿ ಅಡಗಿದೆ

- ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅಭಿಮತ
- 'ಸಿನಿಮಾ, ಸಾಹಿತ್ಯ, ಸಂಸ್ಕೃತಿಯ ಸಂಗಮ' ಕುರಿತ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

ಮೈಸೂರು, ನ.3(ಎಂಕೆ)– ಸಂಸ್ಕೃತಿ, ಸಾಹಿತ್ಯ ಮತ್ತು ಸಿನಿಮಾ ಒಟ್ಟಿಗೆ ಸಾಗುವ ಜ್ಞಾನದ ನದಿಯಾಗಿದ್ದು, ಕಾವ್ಯದಲ್ಲಿ ಸೃಜನಶಕ್ತಿ ಅಡಗಿದೆ ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂಗ್ಲಿಷ್ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ 'ಸಿನಿಮಾ, ಸಾಹಿತ್ಯ ಮತ್ತು ಸಂಸ್ಕೃತಿಯ ಸಂಗಮ' ಕುರಿತ ಎರಡು ದಿನ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಹಿತ್ಯವು ಸಮಾಜದ ಸಂಸ್ಕೃತಿಯ ಏಕೀಕರಣವಾಗಿದ್ದು, ಭಾಷೆಯ ಮೂಲಕ ಆ ಸಮುದಾಯದ ಮೌಲ್ಯಗಳು, ಪರಂಪರೆ ಮತ್ತು ಬದುಕಿನ ವಾಸ್ತವದ ಚಿತ್ರಣ ನೀಡುತ್ತದೆ ಎಂದರು.

ಆಧುನಿಕ ಯುಗದಲ್ಲಿ ಸಿನಿಮಾ ದೃಶ್ಯ ಕಲೆಗಳು, ಸಂಗೀತ ಮತ್ತು ಸಾಹಿತ್ಯದ ಕಥೆಗಳನ್ನು ವಿಭಿನ್ನ ಮಾಧ್ಯಮಗಳಲ್ಲಿ ಪ್ರಸ್ತುತ ಪಡಿಸುವ ಮೂಲಕ ಹೊಸ ಸಾಂಸ್ಕೃತಿಕ ಚರ್ಚೆಗಳಿಗೆ ದಾರಿ ಮಾಡಿ ಕೊಡಲಾಗುತ್ತಿದೆ. ಕನ್ನಡ ಚಿತ್ರರಂಗದಲ್ಲಿ ಅನೇಕ ಕಲಾತ್ಮಕ, ಸಮಾಜಮುಖಿ ಕಥೆಗಳು ಸಾಹಿತ್ಯದಿಂದ ಪ್ರೇರಿತವಾಗಿ ಮೂಡಿಬಂದಿವೆ. ಇವುಗಳು ಕನ್ನಡ ಸಂಸ್ಕೃತಿ, ಪರಿಚಯ ಮತ್ತು ಸಂತುಷ್ಟಿಯ ಅನೇಕ ಮುಖಗಳನ್ನೂ, ಸಾಮಾಜಿಕ ಸಮಸ್ಯೆಗಳನ್ನೂ ಚಿತ್ರಜಗತ್ತಿಗೆ ಪರಿಚಯಿಸಿವೆ ಎಂದು ತಿಳಿಸಿದರು.

ಸಾಹಿತ್ಯ, ಸಂಸ್ಕೃತಿ ಮತ್ತು ಸಿನಿಮಾ ಸಮ್ಮಿಲನದ ಮೂಲಕ ಹೊಸ ಆಲೋಚನೆಗಳನ್ನು, ಸಮಾಜಮುಖಿ ಸಂದೇಶ ಹಾಗೂ ಕಲಾತ್ಮಕ ಅರ್ಥ ವ್ಯಾಖ್ಯಾನವನ್ನು ಒದಗಿಸುವ ಮೂಲಕ ಅಭಿವ್ಯಕ್ತಿಯ ಮೇಲುಗೈ ಸಾಧಿಸಲಿವೆ. ಇವುಗಳ ಸಮ್ಮಿಲನದ ಅಧ್ಯಯನದಿಂದ ವಿದ್ಯಾರ್ಥಿಗಳು ದೇಶೀಯ ಪರಂಪರೆ, ಜಾನಪದ ಹಾಗೂ ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ಸಮರ್ಥವಾಗಿ ಗ್ರಹಿಸಬಹುದು ಎಂದರು.

ಬಳಿಕ ಹೈದರಾಬಾದ್‌ನ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿವಿ ಫಿಲ್ಮ್ ಸ್ಟಡೀಸ್ ವಿಭಾಗದ ಪ್ರೊ. ಎಸ್.ನಿಖಿಲಾ 'ಸಿನಿಮಾ, ಸಾಹಿತ್ಯ ಮತ್ತು ಸಂಸ್ಕೃತಿಯ ಸಂಗಮ' ಕುರಿತು ಮಾತನಾಡಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಸ್.ಕೆ. ನವೀನ್‌ಕುಮಾರ್, ಡೀನ್(ಅಕಾಡೆಮಿ) ಪ್ರೊ.ಎಂ.ನಾಮನಾಥಂ ನಾಯ್ಡು, ಇಂಗ್ಲಿಷ್ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಎಸ್.ಶ್ರೀಕಾಂತ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂಗ್ಲಿಷ್ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ 'ಸಿನಿಮಾ, ಸಾಹಿತ್ಯ ಮತ್ತು ಸಂಸ್ಕೃತಿಯ ಸಂಗಮ' ಕುರಿತ ಎರಡು ದಿನದ ಅಂತರರಾಷ್ಟ್ರೀಯ ಸಮ್ಮೇಳನವನ್ನು ಜ್ಞಾನಪೀಠ ಪುರಸ್ಕೃತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಉದ್ಘಾಟಿಸಿದರು.

ಕಾವ್ಯಕ್ಕೆ ನಾನಾ ಅರ್ಥಗಳು

"ಕಾವ್ಯದಲ್ಲಿ ಸೃಜನಶಕ್ತಿ ಅಡಗಿದೆ. ರಚನಕಾರನ ಕಲ್ಪನೆಯಿಂದ ಕಾವ್ಯ ಸೃಷ್ಟಿಯಾದರೂ ಓದುಗರ ಮೂಲಕ ನಾನಾ ಅರ್ಥಗಳನ್ನು ಪಡೆದುಕೊಳ್ಳಲಿದೆ. ಅಲ್ಲದೆ ಕಾವ್ಯದಲ್ಲಿರುವಂತೆಯೇ ನೈಜ ಚಿತ್ರಣ ಸೃಷ್ಟಿಸುವುದು ಅಸಾಧ್ಯ. ಮೊದಲೆಲ್ಲಾ ಎರಡರಿಂದ ಮೂರು ಅರ್ಥಗಳನ್ನು ಕೊಟ್ಟು ಉಲ್ಲೇಖಿಸಲಾಗುತ್ತಿತ್ತು. ಆದರೆ ಈಗ ಹತ್ತಾರು ಅರ್ಥಗಳು ಸೃಷ್ಟಿಯಾಗುತ್ತವೆ. ಇದೊಂದು ಉತ್ತಮ ಬೆಳವಣಿಗೆಯೂ ಕೂಡ ಆಗಿದೆ.

–ಡಾ.ಚಂದ್ರಶೇಖರ ಕಂಬಾರ

ಜ.15ರಿಂದ 20ರವರೆಗೆ ಸುತ್ತೂರು ಜಾತ್ರೆ; ವಿಶಿಷ್ಟ ವಸ್ತುಪ್ರದರ್ಶನ



ಮೈಸೂರು: ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವು 2026ರ ಜನವರಿ 15ರಿಂದ 20ರವರೆಗೆ ಜರುಗಲಿದ್ದು, ಇದರ ಅಂಗವಾಗಿ ವಸ್ತುಪ್ರದರ್ಶನ ಏರ್ಪಡಿಸಲಾಗಿದೆ.

ವಸ್ತು ಪ್ರದರ್ಶನದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ವತಿಯಿಂದ ಕೃಷಿ, ವೈದ್ಯಕೀಯ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಆರೋಗ್ಯ ಮತ್ತು ಕಲೆಗೆ ಸಂಬಂಧಿಸಿದಂತೆ ಪ್ರದರ್ಶನವಿರುತ್ತದೆ. ಸರ್ಕಾರದ ಅಭಿವೃದ್ಧಿ ಇಲಾಖೆಗಳು, ಕೈಗಾರಿಕೆಗಳು, ಕೈಮಗ್ಗ/ಜವಳಿ ನೇಕಾರರ ಸಹಕಾರ ಸಂಘಗಳು, ಮಹಿಳಾ ಅಭಿವೃದ್ಧಿ ನಿಗಮ ಮತ್ತು ನಬಾರ್ಡ್ ಪ್ರಾಯೋಜಿತ ಉದ್ಯಮಿಗಳು ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಗೃಹೋಪಯೋಗಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಇರುತ್ತದೆ. ಪ್ರತಿ ದಿನ ಬೆಳಗ್ಗೆಯಿಂದ ಸಂಜೆವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತದೆ.

450ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶವಿದೆ. ಉದ್ಯಮಿಗಳು, ಕರಕುಶಲ ಕರ್ಮಿಗಳು, ಪುಸ್ತಕ ಪ್ರಕಾಶಕರು ಮತ್ತು ಮಾರಾಟಗಾರರು ವಸ್ತುಪ್ರದರ್ಶನದಲ್ಲಿ ಪಾಲ್ಗೊಂಡು ಮಳಿಗೆಗಳನ್ನು ತೆರೆಯಬಹುದಾಗಿದೆ. ಮಳಿಗೆಗಳನ್ನು ಪಡೆಯಲಿಚ್ಛಿಸುವವರು ಹೆಚ್ಚಿನ ಮಾಹಿತಿಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವ ಕಾರ್ಯಾಲಯ ಅಥವಾ ಸಂಚಾಲಕರಾದ ಕೆ.ಎಸ್.ಬಸಪ್ಪ ಹಾಗೂ ಬಿ.ಎಂ.ಸದಾಶಿವಮೂರ್ತಿ ಅವರನ್ನು 0821–2548212–122, 94494 89864, 9900504023 ದೂರ ವಾಣಿಗಳಲ್ಲಿ ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಅಭಿನಂದನೆ...



ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಅಭಿನಂದಿಸಲಾಯಿತು. ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಹೊಸಳ್ಳಿ ಪುಟ್ಟರಾಜ್, ಉಪನ್ಯಾಸಕ ರಾಘು, ವಕೀಲ ಸಿ.ಎಸ್.ಲೋಕೇಶ್, ಸಹಶಿಕ್ಷಕರಾದ ಕಲ್ಯಾಣಪುರ ರಾಜಶೇಖರ್, ಫಾಲಾಕ್ಷ, ಬಸವಾಪಟ್ಟಣ ಯೋಗೇಶ್ ಇನ್ನಿತರರಿದ್ದರು.

ಗ್ಯಾರಂಟಿ ಯೋಜನೆಗಳ ಸಂಶೋಧನಾ ಫಲಿತಾಂಶ ಸಂಬಂಧ ನಾಳೆ ಕಾರ್ಯಕ್ರಮ

ಸಂಬಂಧಪಟ್ಟ ಇಲಾಖೆ, ಶೈಕ್ಷಣಿಕ ಸಂಸ್ಥೆಗಳ ತಜ್ಞರೊಂದಿಗೆ ವಿಚಾರ ವಿನಿಮಯ

ಬೆಂಗಳೂರು, ನ.3(ಕೆಎಂಶಿ)–ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಸಂಶೋಧನಾ ಫಲಿತಾಂಶವನ್ನು ಸಂಬಂಧಪಟ್ಟ ಇಲಾಖೆ ಹಾಗೂ ಶೈಕ್ಷಣಿಕ ಸಂಸ್ಥೆಗಳ ತಜ್ಞರೊಂದಿಗೆ ಹಂಚಿಕೊಳ್ಳಲು ನ.5ರಂದು ಬೆಂಗಳೂರಿನಲ್ಲಿ ಒಂದು ದಿನದ ಕಾರ್ಯಕ್ರಮ ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉದ್ಘಾಟನಾ ಭಾಷಣ ಮಾಡಲಿದ್ದು, ಎಂ.ಎಸ್.ಸ್ವಾಮಿನಾಥನ್ ಸಂಶೋಧನಾ ಸಂಸ್ಥೆ ಅಧ್ಯಕ್ಷೆ ಡಾ.ಸೌಮ್ಯ ಸ್ವಾಮಿನಾಥನ್ ಪ್ರಧಾನ ಭಾಷಣ ಮಾಡಲಿದ್ದು, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಗ್ಯಾರಂಟಿ ಯೋಜನೆಗಳ ಕಾರ್ಯನೀತಿ ಸನ್ನಿವೇಶ ವಿವರಿಸಲಿದ್ದಾರೆ. ಬೆಂಗಳೂರಿನಲ್ಲಿನ ರಾಜ್ಯ ವಿತ್ತೀಯ ಕಾರ್ಯನೀತಿ ಸಂಸ್ಥೆ (ಎಫ್.ಪಿ.ಐ) ಆರ್ಥಿಕ ಇಲಾಖೆ ಅಧೀನದ ನಿರ್ದೇಶನಾಲಯವಾಗಿದ್ದು, ಗ್ಯಾರಂಟಿ ಯೋಜನೆಗಳ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಾತ್ಮಕ ಮೌಲ್ಯಮಾಪನಕ್ಕೆ ಐದು ಸಂಶೋಧನಾ ಸಂಸ್ಥೆಗಳ ಜೊತೆ ಸಹಭಾಗಿತ್ವ ಹೊಂದಿದೆ.

ಲಂಡನ್‌ನ ಕಿಂಗ್ಸ್ ಕಾಲೇಜ್, ಮುಂಬೈನ ಎಕ್ಸ್‌ಕೆಡಿಆರ್ ಫೋರಂ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಲೋಕ್ ನೀತಿ–ಸಿಎಸ್‌ಡಿಎಸ್, ಇಂಡಸ್ ಆಕ್ಷನ್ ಹಾಗೂ ಜಸ್ಟ್ ಜಾಬ್ಸ್ ನೆಟ್ ವರ್ಕ್ಸ್ ಸಂಶೋಧನಾ ಸಂಸ್ಥೆಗಳು ಗ್ಯಾರಂಟಿ ಯೋಜನೆಗಳ ಕುರಿತು ಅಧ್ಯಯನ ಕೈಗೊಂಡಿವೆ.

ಕಾರ್ಯಕ್ರಮವು ವಿವಿಧ ತಾಂತ್ರಿಕ ಅಧಿವೇಶನಗಳನ್ನು ಒಳಗೊಂಡಿರುತ್ತದೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಇ–ಆಡಳಿತದ ಪಾತ್ರ, ಶಕ್ತಿ ಯೋಜನೆ ಸೇರಿದಂತೆ ಇತರ ಗ್ಯಾರಂಟಿ ಯೋಜನೆಗಳ ಪರಿಣಾಮಾತ್ಮಕ ಮೌಲ್ಯಮಾಪನ ನಡೆಯಲಿದೆ. ಪ್ರತಿ ಅಧಿವೇಶನದಲ್ಲಿ ಸರ್ಕಾರದ ಉನ್ನತಾಧಿಕಾರಿಗಳು, ಪ್ರಮುಖ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ ತಜ್ಞರು ಪಾಲ್ಗೊಳ್ಳಲಿದ್ದಾರೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಸಮಾರೋಪ ಭಾಷಣ ಮಾಡಲಿದ್ದು, ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸನ್ಮಾನ...



ಮೈಸೂರಿನ ರಾಮಕೃಷ್ಣನಗರದ ಸಾಯಿಬಾಬಾ ದೇವಸ್ಥಾನಕ್ಕೆ ಆಗಮಿಸಿದ ಮಹಾರಾಷ್ಟ್ರ ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನದ ಪ್ರಧಾನ ಅರ್ಚಕರಾದ ದಿಲೀಪ್ ಸುಲಾಖೆ ಮಹಾರಾಜ್ ಅವರನ್ನು ವಾಸುದೇವ ಮಹಾರಾಜ ಫೌಂಡೇಶನ್ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ದಿಲೀಪ್ ಸುಲಾಖೆ ಮಹಾರಾಜ್‌ರ ಧರ್ಮಪತ್ನಿ ಶ್ರೀಮತಿ ಮಂಜು ಸುಲಾಖೆ, ಫೌಂಡೇಶನ್ ಅಧ್ಯಕ್ಷ ಎಂ.ವಿ.ನಾಗೇಂದ್ರಬಾಬು, ಸಂಚಾಲಕ ಡಾ.ಆರ್.ಚಕ್ರಪಾಣಿ, ಡಾ.ರಘುರಾಮ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಸಾಯಿಬಾಬಾ ದೇವಸ್ಥಾನದ ನಿರ್ದೇಶಕಿ ಡಾ.ಲಕ್ಷ್ಮಿದೇವಿ, ಎನ್.ಎಂ.ಪ್ರವೀಣ್‌ಕುಮಾರ್, ಎಸ್.ಬಿ. ವಾಸುದೇವಮೂರ್ತಿ, ಸತ್ಯನಾರಾಯಣ್, ಸಂಗೀತ ಶಿಕ್ಷಕಿ ಎಂ.ವಿ.ಅನಿತಾ ಇದ್ದರು.

ನಾಳೆಯಿಂದ 'ರಾಜ್ಯ ಸಂಗೀತ ಸಮ್ಮೇಳನ'

ಮೈಸೂರು,ನ.3(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತೀ ರಮಾಗೋವಿಂದ ಕಲಾ ವೇದಿಕೆಯಲ್ಲಿ ಕರ್ನಾಟಕ ಗಾನಕಲಾ ಪರಿಷತ್ ಸಂಯುಕ್ತಾಶ್ರಯದಲ್ಲಿ ನ.5ರಿಂದ 9ರವರೆಗೆ 54ನೇ ಹಿರಿಯ ಸಂಗೀತ ವಿದ್ವಾಂಸರ ಹಾಗೂ 36ನೇ ಯುವ ಸಂಗೀತ ವಿದ್ವಾಂಸರ 'ರಾಜ್ಯ ಸಂಗೀತ ಸಮ್ಮೇಳನ'ವನ್ನು ಆಯೋಜಿಸಲಾಗಿದೆ ಎಂದು ಗಾನಕಲಾ ಪರಿಷತ್ ಅಧ್ಯಕ್ಷ ಡಾ. ಆರ್.ಕೆ. ಪದ್ಮನಾಭ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಹಿರಿಯ ಸಂಗೀತ ವಿದ್ವಾಂಸರ ಸಂಗೀತ ಸಮ್ಮೇಳನಕ್ಕೆ ವಿದ್ವಾನ್ ಡಾ.ಸಿ.ಎ. ಶ್ರೀಧರ ಹಾಗೂ ಯುವ ಸಂಗೀತ ವಿದ್ವಾಂಸರ ಸಮ್ಮೇಳನಕ್ಕೆ ವಿದ್ವಾನ್ ಮತ್ತೂರು ಆರ್.ಶ್ರೀನಿಧಿ ಅಧ್ಯಕ್ಷರಾಗಿದ್ದು, ನ.5ರಂದು ಬೆಳಗ್ಗೆ 10.30ಕ್ಕೆ ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದರು.

ಐದು ದಿನಗಳ ಕಾಲ ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 10ರವರೆಗೆ ಸಂಗೀತ ಕಾರ್ಯಕ್ರಮಗಳು ನಡೆಯಲಿದ್ದು, ನ.9ರಂದು ನಡೆಯುವ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಹಾಗೂ ವಾಣಿ ವಿದ್ಯಾಕೇಂದ್ರದ ಟ್ರಸ್ಟಿ ಆರ್.ಹೆಚ್.ಶಾರದಾ ಪ್ರಸಾದ್ ಭಾಗವಹಿಸಲಿದ್ದಾರೆ ಎಂದರು. ಗಾನಭಾರತಿ ಕಾರ್ಯದರ್ಶಿ ರವಿಶಂಕರ್, ಸಂಗೀತ ವಿದ್ವಾಂಸ ಮಾನಸ ನಯನ ಇದ್ದರು.

ಗರ್ಭ ಸಂಸ್ಕಾರ, ಒಣ ಕಣ್ಣಿನ ಆರೋಗ್ಯ ಶಿಬಿರ

ಮೈಸೂರು: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆ.ಬಿ.ಎಲ್ ಲೇಔಟ್, ಮೈಸೂರು ಇಲ್ಲಿ ನ.30ರವರೆಗೆ ಗರ್ಭ ಸಂಸ್ಕಾರ ಉಚಿತ ತಪಾಸಣೆ, ಒಣಕಣ್ಣಿನ ಆರೋಗ್ಯ ಶಿಬಿರ ಹಾಗೂ ರಿಯಾಯಿತಿ ದರದಲ್ಲಿ ಚಿಕಿತ್ಸೆ ಶಿಬಿರ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 9731799317, 0821–2970619 ಸಂಪರ್ಕಿಸಬಹುದು.

ಮೈಸೂರು ಬಂಜಾರ ಸೇವಾ ಸಂಘಕ್ಕೆ ತಾತ್ಕಾಲಿಕ ಅಡಾಕ್ ಕಮಿಟಿ ರಚನೆ

ಮೈಸೂರು, ನ.3(ಎಂಕೆ)– ಮೈಸೂರು ಬಂಜಾರ(ಲಂಬಾಣಿ) ಸೇವಾ ಸಂಘಕ್ಕೆ ತಾತ್ಕಾಲಿಕ ಅಡಾಕ್ ಕಮಿಟಿ ರಚನೆಯಾಗಿದ್ದು, ಸಂಘದ ಕಾರ್ಯಚಟುವಟಿಕೆಗಳಿಗೆ ಯಾರು ಅಡ್ಡಿಯುಂಟುಮಾಡಬಾರದು ಎಂದು ಮೈಸೂರಿನ 9ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಆದೇಶಿಸಿದೆ ಎಂದು ವಾದಿಗಳಾಗಿದ್ದ ಡಾ.ಡಿ.ಸೀತಾ ನಾಯ್ಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಸಂಘಕ್ಕೆ ಈ ಹಿಂದೆ ಚುನಾವಣೆ ನಡೆಯಬೇಕಾಗಿತ್ತು. ಆದರೆ ಮತದಾರರ ಪಟ್ಟಿಯಲ್ಲಿ ಉಂಟಾದ ಗೊಂದಲದಿಂದಾಗಿ ಚುನಾವಣೆ ನಡೆಯಲಿಲ್ಲ. ಈ ನಡುವೆ ಎಂ.ಸುಂದರ್ ಎಂಬುವವರು ಗಲಾಟೆ ಮಾಡಿದ್ದರು. ಬಳಿಕ ನ್ಯಾಯಾಲಯದ ಮೊರೆ ಹೋದ ಕಾರಣ ಈ ಆದೇಶ ಹೊರಬಂದಿದೆ ಎಂದರು. ಕೋಟೆ ಕೃಷ್ಣ ನಾಯಕ್, ಡಾ.ವಾಸುದೇವನಾಯಕ್ ಇದ್ದರು.

ಕನ್ನಡ ರಾಜ್ಯೋತ್ಸವ



ಮೈಸೂರು ತಾಲೂಕು ಡಿಎಂಜಿ ಹಳ್ಳಿ ಗ್ರಾಮ ಪಂಚಾಯತಿ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಪಿಡಿಓ ರುಕ್ಮಾಂಗದ, ಗ್ರಾಪಂ ಅಧ್ಯಕ್ಷೆ ಚಿಕ್ಕಮ್ಮ, ಉಪಾಧ್ಯಕ್ಷೆ ಲತಾ ಪ್ರಸನ್ನ ಆಚಾರಿ, ರವಿ, ಸೋಮೇಶ, ಗ್ರಂಥಪಾಲಕ ಪುಟ್ಟೇಗೌಡ, ಮನು, ಬಸವರಾಜ್, ಮಾದಪ್ಪ, ಗುರುನಂಜಪ್ಪ, ಭಗವಂತಸ್ವಾಮಿ, ರಾಜಣ್ಣ, ಸೋಮನಾಯಕ, ಸಿದ್ದಯ್ಯ, ಶಿವಕುಮಾರ್, ಚಾಮಯ್ಯ ಇನ್ನಿತರರಿದ್ದರು.

ರಾಜ್ಯ ಮಟ್ಟದ ವಿಚಾರ ಸಂಕಿರಣ



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಲದಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರಸಂಕಿರಣದಲ್ಲಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎಸ್‌ಬಿಎಂ ಮಂಜು, ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ಹರೀಶ್‌ಕುಮಾರ್ ಭಾಗವಹಿಸಿದ್ದರು.

ಮಕ್ಕಳ ಯೋಗ ಶಿಕ್ಷಕರ ತರಬೇತಿ

ಮೈಸೂರು, ನ.3(ಎಂಕೆ)– ಮೈಸೂರು ಯೋಗೀಸ್ ಟ್ರಸ್ಟ್ ಮತ್ತು ಸ್ವಾಸ್ಥ್ಯ ಯೋಗ ಕೇಂದ್ರದ ವತಿಯಿಂದ ನ.23ರಿಂದ 21 ದಿನಗಳ ಕಾಲ ಮಕ್ಕಳ ಯೋಗ ಶಿಕ್ಷಕರ ತರಬೇತಿ ಪ್ರಮಾಣ ಪತ್ರ ಕೋರ್ಸ್ ನಡೆಸಲಾಗುವುದು ಎಂದು ಟ್ರಸ್ಟ್ ಸಂಸ್ಥಾಪಕ ಯೋಗ ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಶ್ರೀಮತಿ ಅಕ್ಕಮ್ಮಣ್ಣಿ ಉದ್ಯಾನದಲ್ಲಿನ ಟ್ರಸ್ಟ್ ಸಭಾಂಗಣದಲ್ಲಿ ಕೋರ್ಸ್ ಸಂಬಂಧ ತರಗತಿಗಳು ನಡೆಯಲಿದ್ದು, ಎಸ್‌ಎಸ್‌ಎಲ್‌ಸಿ ತೇರ್ಗಡೆ ಆಗಿರುವವರು ಕೋರ್ಸ್ ಪ್ರವೇಶಕ್ಕೆ ಅರ್ಹರಾಗಿದ್ದಾರೆ ಎಂದರು.

ತರಬೇತಿ ಪಡೆದವರಿಗೆ ಯೋಗ ಶಿಕ್ಷಣ ವಿವಿಯಿಂದ ಅಂಗೀಕೃತವಾದ ಪ್ರಮಾಣ ಪತ್ರ ನೀಡಲಾಗುವುದು. ಎಲ್ಲಾ ಶಾಲೆಗಳಲ್ಲಿ ಯೋಗ ಶಿಕ್ಷಣ ಕಡ್ಡಾಯವಾಗಿರುವುದರಿಂದ ಕಡಿಮೆ ಖರ್ಚಿನಲ್ಲಿ ನಿರುದ್ಯೋಗಿ ಯುವಕ–ಯುವತಿಯರು ಈ ಕೋರ್ಸ್ ಅನುಕೂಲವಾಗಲಿದೆ. ಹೆಚ್ಚಿನ ಮಾಹಿತಿಗೆ ಮೊ.ನಂ.7259027880 ಸಂಪರ್ಕಿಸಬಹುದು ಎಂದರು. ಬಿ.ಎಸ್.ಸೀಮಾ, ಡಾ.ಸುನಿಲ್‌ರಾಜ್ ಇನ್ನಿತರರು ಇದ್ದರು.

ನಿಧನ

ಎಂ.ಎಸ್.ಶೈಲಜಾ



ಮದ್ದೂರು ತಾಲೂಕಿನ ಚಾಮನಹಳ್ಳಿ ಗ್ರಾಮದ ಸಿ.ಕೆ. ಜಯಕಾಂತ ಅವರ ಧರ್ಮಪತ್ನಿ ಶ್ರೀಮತಿ ಎಂ.ಎಸ್. ಶೈಲಜಾ ಸೋಮವಾರ ನಿಧನರಾದರು. ಮೃತರು ಮಕ್ಕಳಾದ ಐಶ್ವರ್ಯ, ಕಿರಣ್, ಸೋನು ಪ್ರಿಯಾ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ನ.4)ರಂದು ಮಂಗಳವಾರ ಸ್ವಗ್ರಾಮದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರೋಜಮ್ಮ



ಮೈಸೂರು,ನ.3– ಮೈಸೂರು ನಜರ್‌ಬಾದ್ ನಿವಾಸಿ ಲೇಟ್ ರಾಮಲಿಂಗಯ್ಯನವರ ಪತ್ನಿ 85 ವರ್ಷದ ಸರೋಜಮ್ಮ (ಸಾಕಮ್ಮ) ಸೋಮವಾರ ನಿಧನರಾದರು.

ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂದು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.11.2025 ಮಂಗಳವಾರ, ಮಳೆ ನಕ್ಷತ್ರ: ಸ್ವಾತಿ 24.10.2025ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಮೈಸೂರು, ಯುವರಾಜ ಕಾಲೇಜು, ಆಹಾರ ವಿಜ್ಞಾನ ಮತ್ತು ಪೌಷ್ಟಿಕ ವಿಭಾಗ ಮೈಸೂರು:** 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ–2025, ಉದ್ಘಾಟನೆ ಮತ್ತು ಆಯುಷ್4ಯು ವಿಶೇಷ ಸಂಚಿಕೆ ಬಿಡುಗಡೆ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ.ಸವಿತಾ, ಅಧ್ಯಕ್ಷತೆ: ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಮಹಾದೇವಮೂರ್ತಿ, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಧ್ಯಾಪಕಿ ಡಾ.ಜಮುನಾ ಪ್ರಕಾಶ್, ಡಾ.ಶ್ರೀವತ್ಸ, ನಾಗೇಶ್‌ಬಾಬು, ಪ್ರೊ.ಕೆ. ಅಜಯ್‌ಕುಮಾರ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 10ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು (ಕನ್ನಡ ವಿಭಾಗ):** ಶ್ರೀ ಶಿವ ಸ್ಮರಣಾರ್ಥ ದತ್ತಿ ಉಪನ್ಯಾಸ, 'ಬಸವ ಚಿಂತನೆ', ದಿವ್ಯ ಸಾನ್ನಿಧ್ಯ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಉಪನ್ಯಾಸ: ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್, ಡಾ.ಹೆಚ್.ಎಂ.ಕಲಾಶ್ರೀ, ಉಪಸ್ಥಿತಿ: ಡಾ.ಕೆ.ಎಸ್.ರಾಜಶೇಖರ್, ಡಾ.ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಕನ್ನಡ ಜಾನಪದ ಪರಿಷತ್ ಮೈಸೂರು:** 70ನೇ ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರಕವಿ ಕುವೆಂಪು ರಚಿತ ನಾಡಗೀತೆಗೆ ನೂರರ ಸಂಭ್ರಮ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಉಪಸ್ಥಿತಿ: ವಂ. ಗುರು. ನವೀನ್‌ಕುಮಾರ್, ಸೆಬಿ ಮಾವೇಲಿ, ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಪ್ರಾಂಶುಪಾಲರಾದ ಚಂದ್ರಶೇಖರ್, ಡಾ.ಆಂಟೋ ರಿಚರ್ಡ್, ಸ್ಥಳ: ಸಂತ ಜೋಸೆಫರ ಶಾಲಾ ಮೈದಾನ, ಜಯಲಕ್ಷ್ಮೀಪುರಂ, ಮಧ್ಯಾಹ್ನ 3 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಗರ್ಭ ಸಂಸ್ಕಾರ, ಒಣ ಕಣ್ಣಿನ ಆರೋಗ್ಯ ಶಿಬಿರ ಮತ್ತು ತಪಾಸಣೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ಕದಂಬ ರಂಗವೇದಿಕೆ, ಮೈಸೂರು, ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾ ವಿದ್ಯಾಲಯ:** ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಸಂಗ್ರಹಿಸಿರುವ ಮೈಸೂರು ರಂಗ ತಂಡಗಳ ಭಿತ್ತಿಪತ್ರಗಳ ಪ್ರದರ್ಶನ, ಕದಂಬ ರಂಗವೇದಿಕೆ ಇಣಕು ನೋಟ, ಸ್ಥಳ: ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಹೆಚ್. ಎಂ.ಕಲಾಶ್ರೀ, 6.50–ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40–ಪ್ರಾಯೋಜಿತ ಕಾರ್ಯಕ್ರಮ– ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು–ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತು ಮಾನ್ಯ ಕುಲಪತಿ ಪ್ರೊ. ಶರಣಪ್ಪ ವಿ ಹಲಸೆ ಅವರೊಂದಿಗಿನ ಸಂವಾದದ ಮೊದಲ ಭಾಗ, ಪ್ರಸ್ತುತಿ–ಎನ್.ಕೇಶವಮೂರ್ತಿ, 8.30–ವಿಶೇಷ ಕಾರ್ಯಕ್ರಮ ಸರಣಿ–ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿ ತೊಂಬತ್ತು–ನೆನಪುಗಳ ಹೊತ್ತು–ವಿಶೇಷ ಕಾರ್ಯಕ್ರಮ ಸರಣಿ–ಕೃಷಿ ಇಲಾಖೆ ನಿವೃತ್ತ ಅಪರ ಕೃಷಿ ನಿರ್ದೇಶಕ ಮೈಸೂರಿನ ಡಾ.ವಿಷಕಂಠ ಅವರೊಂದಿಗೆ ಸಂವಾದ, ಭಾಗವಹಿಸುತ್ತಾರೆ–ಎನ್.ಕೇಶವಮೂರ್ತಿ, 9.00–ಕರೆಗೊಂದು ಗೀತೆ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಹರಿಣಿ–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಹೊಂಗಿರಣ, ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, ಆರ್.ಲೋಕೇಶ್ವರಿ ಹಾಗೂ ಬಿ.ಜಿ.ಕವಿತಾ, **ಮಧ್ಯಾಹ್ನ** 12.05–ವನಿತಾ ವಿಹಾರ, 12.35–ದೇವರನಾಮ, 12.45–ಕನ್ನಡದಲ್ಲಿ ಭಾಷಣ, 1.00–ಪ್ರಗತಿ ಪಥ, 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ದ್ವಾರಂ ವೆಂಕಟಸ್ವಾಮಿ ನಾಯ್ಡು–ವಯೋಲಿನ್ ವಾದನ, 4.00–ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್ ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ– ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಪ್ರಧಾನಮಂತ್ರಿ ಮತ್ಸಸಂಪದ ಯೋಜನೆ ಕುರಿತು ಮೀನುಗಾರಿಕಾ ಇಲಾಖೆ ಉಪನಿರ್ದೇಶಕ ಪಿ.ಎಸ್.ಸಚಿನ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಮೈಸೂರು ಜಂಕ್ಷನ್ ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ಬಿ.ದಿಗ್ವಿಜಯ್, 8.00–ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಅಲಿ ಅಕ್ಬರ್ ಖಾನ್–ಸರೋದ್ ವಾದನ, 8.30–ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಎ.ಪದ್ಮಾವತಿ–ವೀಣಾವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30–ಸವಿನೆನಪು.

ತಿ.ನರಸೀಪುರದಲ್ಲಿಂದು

- **ಗ್ರಾಮ ವಿದ್ಯೋದಯ ಸಂಘ, ತಿ.ನರಸೀಪುರ: ಎಂ.ಸಿ.ಶಿವಾನಂದ ಶರ್ಮ ಸ್ಮಾರಕ ಪ್ರವೇಶ ದ್ವಾರ, ದಾಸೋಹ ಭವನ, ಡಾ. ಶ್ರೀ ಶಿವಕುಮಾರ ಸ್ವಾಮಿಗಳ ಬಯಲು ರಂಗಮಂದಿರ ಉದ್ಘಾಟನೆ, ಕೆ.ಪಿ.ಮಹದೇವಸ್ವಾಮಿ ಅಮೃತ ಮಹೋತ್ಸವ,** ದಿವ್ಯ ಸಾನ್ನಿಧ್ಯ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾ ಸ್ವಾಮೀಜಿ, ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಬಯಲು ರಂಗಮಂದಿರ ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಪ್ರವೇಶ ದ್ವಾರ ಉದ್ಘಾಟನೆ: ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಅಭಿನಂದನಾ ನುಡಿ: ಡಾ.ಹೆಚ್.ಸಿ.ಮಹದೇವಪ್ಪ, ಗ್ರಂಥ ಬಿಡುಗಡೆ: ಸಚಿವ ಕೆ.ವೆಂಕಟೇಶ್, ದಾಸೋಹ ಭವನ ಉದ್ಘಾಟನೆ: ಸಂಸದ ಯದುವೀರ್ ಒಡೆಯರ್, ಶರ್ಮರ ಭಾವಚಿತ್ರ ಅನಾವರಣ: ಸಂಸದ ಸುನೀಲ್ ಬೋಸ್, ಸ್ಥಳ: ವಿದ್ಯೋದಯ ಶಿಕ್ಷಣ ಸಂಸ್ಥೆ, ಬೆಳಗ್ಗೆ 10.30ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 4 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 196 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಗ್ರೇಟರ್ ಮೈಸೂರು ಭಾಗ್ಯ

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಭೆಯಲ್ಲಿ ಮಹತ್ವದ ನಿರ್ಧಾರ

● ಗ್ರೇಟರ್ ಬೆಂಗಳೂರು ಮಾದರಿಯಲ್ಲಿ ಗ್ರೇಟರ್ ಮೈಸೂರು ● ಮುಂದಿನ ಸಚಿವ ಸಂಪುಟದಲ್ಲಿ ಅನುಮೋದನೆ ● ಎಂಡಿಎನಲ್ಲಿರುವ 500 ಕೋಟಿ ಬಳಕೆಗೆ ನಿರ್ಣಯ ● ಪಾಲಿಕೆ ವ್ಯಾಪ್ತಿ 86.31 ನಿಂದ 333.46 ಚದರ ಕಿಲೋಮೀಟರ್‌ಗೆ ಹೆಚ್ಚಳ ● ಲೋಕಲ್ ಪ್ಲಾನಿಂಗ್ ಏರಿಯಾ 500 ರಿಂದ 1 ಸಾವಿರ ಚದರ ಕಿಲೋಮೀಟರ್‌ಗೆ ಏರಿಕೆ

ಮೈಸೂರು, ನ.3(ಬಿಎಲ್‌ಯು)– ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಮಾದರಿಯಲ್ಲಿ ಗ್ರೇಟರ್ ಮೈಸೂರು ಮಾಡಲು ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ. ಮುಂದಿನ ಸಂಪುಟ ಸಭೆಯಲ್ಲಿ ಗ್ರೇಟರ್ ಮೈಸೂರು ಜಾರಿಗೆ ಅನುಮೋದನೆ ಪಡೆಯಲು ನಿರ್ಧಾರ ಮಾಡಲಾಗಿದೆ.

ಮೈಸೂರಿನ ಶಾರದಾದೇವಿ ನಗರದ ನಗರ ಪಾಲಿಕೆಯ ವಲಯ ಕಚೇರಿಯಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗ್ರೇಟರ್ ಮೈಸೂರು ರಚನೆ ಕುರಿತು ಸುಮಾರು ಮೂರು ಗಂಟೆಗಳ ಕಾಲ ಸುದೀರ್ಘ ಹಾಗೂ ಸಮಗ್ರ ಚರ್ಚೆ ನಡೆಸಲಾಯಿತು.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಬಗ್ಗೆ ಸಭೆ ಬಳಿಕ ಪತ್ರಕರ್ತರಿಗೆ ವಿವರಿಸಿದರು. ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗ್ರೇಟರ್ ಮೈಸೂರು ರಚನೆ ಬಗ್ಗೆ ಚರ್ಚೆ ನಡೆಸಿದ್ದೇವೆ. ಅಲ್ಲದೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಅನುಮೋದನೆ ಕೂಡ ಪಡೆಯಲಾಗುವುದು ಎಂದರು..

ಗ್ರೇಟರ್ ಮೈಸೂರು ರಚನೆಯಾದರೆ ಎಷ್ಟು ಕೋಟಿ ಹಣದ ಅವಶ್ಯಕತೆ ಇದೆ, ಏನೇನು ಮೂಲಭೂತ ಸೌಲಭ್ಯ ಕಲ್ಪಿಸಬೇಕು ಎಂಬ ಬಗ್ಗೆ ಚರ್ಚೆ ನಡೆಸಿದ್ದೇವೆ ಎಂದು ಹೇಳಿದರು.

ಈಗಿರುವ ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಹೂಟಗಳ್ಳಿ ನಗರಸಭೆ ಶ್ರೀರಾಂಪುರ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ಕಡಕೊಳ ಪಟ್ಟಣ ಪಂಚಾಯಿತಿ, ಬೋಗಾದಿ ಪಟ್ಟಣ ಪಂಚಾಯಿತಿ, ಇಲವಾಲ ಗ್ರಾಮ ಪಂಚಾಯಿತಿ, ಸಿದ್ಧಲಿಂಗಪುರ ಗ್ರಾಮ ಪಂಚಾಯಿತಿ, ಚಾಮುಂಡಿ ಬೆಟ್ಟ ಗ್ರಾಮ ಪಂಚಾಯಿತಿ, ನಾಗನಹಳ್ಳಿ ಗ್ರಾಮ ಪಂಚಾಯಿತಿ, ನಾಗವಾಲ ಗ್ರಾಮ ಪಂಚಾಯಿತಿ, ಧನಗಳ್ಳಿ ಗ್ರಾಮ ಪಂಚಾಯಿತಿ, ಬೀರಿಹುಂಡಿ ಗ್ರಾಮ ಪಂಚಾಯಿತಿ ಹಾಗೂ ಆಲನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಸೇರ್ಪಡೆ ಮಾಡಲಾಗುವುದು ಎಂದು ವಿವರಿಸಿದರು.

ಪಾಲಿಕೆ ವ್ಯಾಪ್ತಿ 333.46 ಚದರ ಕಿಮೀಗೆ ಹೆಚ್ಚಳ: ಪ್ರಸ್ತುತ ಮೈಸೂರು ನಗರ ಪಾಲಿಕೆ ಒಟ್ಟು 86.31 ಚದರ ಕಿಲೋಮೀಟರ್ ವ್ಯಾಪ್ತಿ ವಿಸ್ತೀರ್ಣ ಹೊಂದಿದ್ದು, ಗ್ರೇಟರ್ ಮೈಸೂರಿನಲ್ಲಿ ಇದನ್ನು 333.46 ಚದರ ಕಿಲೋಮೀಟರ್‌ಗೆ ಹೆಚ್ಚಿಸಲಾಗುವುದು. ಈ ಮೂಲಕ ▶ 9ನೇ ಪುಟಕ್ಕೆ



ಮೈಸೂರಿನ ಶಾರದಾದೇವಿ ನಗರದ ನಗರ ಪಾಲಿಕೆಯ ವಲಯ ಕಚೇರಿಯಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗ್ರೇಟರ್ ಮೈಸೂರು ರಚನೆ ಬಗ್ಗೆ ಚರ್ಚಿಸಲಾಯಿತು.

ಮೈಸೂರಿನ ಸಂಸ್ಕೃತಿ, ಪರಂಪರೆ, ಘನತೆಗೆ ಧಕ್ಕೆಯಾಗಬಾರದು

ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು

■ ವೈಜ್ಞಾನಿಕವಾದ ಬ್ಲೂ ಪ್ರಿಂಟ್ ತಯಾರಿಸಿ ■ ಬೆಂಗಳೂರಿನಂತೆ ಟ್ರಾಫಿಕ್ ಜಾಮ್ ಸಮಸ್ಯೆ ತಲೆದೋರಬಾರದು ■ 15 ರಿಂದ 20 ವರ್ಷದ ಬೆಳವಣಿಗೆಯ ದೃಷ್ಟಿಕೋನವಿರಬೇಕು ■ ಆಧುನಿಕ ತಂತ್ರಜ್ಞಾನ ಸಮಗ್ರ ರೀತಿ ಬಳಸಿಕೊಳ್ಳಿ ■ ಗ್ರೇಟರ್ ಮೈಸೂರಿನಿಂದ ಆದಾಯ ಹೆಚ್ಚಾಗಬೇಕು

ಮೈಸೂರು, ನ.3(ಬಿಎಲ್‌ಯು)– ಗ್ರೇಟರ್ ಮೈಸೂರು ರಚನೆಯಾದರೂ ಈಗಿನ ಮೈಸೂರಿನ ಸಂಸ್ಕೃತಿ, ಪರಂಪರೆ, ಘನತೆ ಹಾಗೂ ವಿಶಾಲತೆಗೆ ಧಕ್ಕೆಯಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಗ್ರೇಟರ್ ಮೈಸೂರು ರಚನೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಗ್ರೇಟರ್ ಮೈಸೂರು ಯಾವ ರೀತಿ ಇರಬೇಕೆಂದು, ತಮ್ಮದೇ ಸ್ಪಷ್ಟ ಪರಿಕಲ್ಪನೆಯನ್ನು ಅಧಿಕಾರಿಗಳಿಗೆ ವಿವರಿಸಿದರು. ಅಲ್ಲದೆ ಇದೇ ಮಾದರಿಯಲ್ಲಿ ಮೈಸೂರನ್ನು ಅಭಿವೃದ್ಧಿ ಮಾಡಬೇಕೆಂದು ಸೂಚಿಸಿದರು.

ಬೆಂಗಳೂರು ರೀತಿ ಟ್ರಾಫಿಕ್ ಸಮಸ್ಯೆ, ಒಳಚರಂಡಿ, ಫುಟ್‌ಪಾತ್, ಕುಡಿಯುವ ನೀರು, ಎಸ್‌ಟಿಪಿ ಸೇರಿದಂತೆ ಯಾವುದೇ ರೀತಿಯ ಸಮಸ್ಯೆಗಳು ತಲೆದೋರಬಾರದು. ಈ ಮೂಲಕ ಗ್ರೇಟರ್ ಮೈಸೂರ್ ನ ವೈಜ್ಞಾನಿಕವಾದ ಬ್ಲೂ ಪ್ರಿಂಟ್ ಸಿದ್ಧಪಡಿಸಬೇಕು ಎಂದು ಹೇಳಿದರು. ಗ್ರೇಟರ್ ಮೈಸೂರು ಸುಸಜ್ಜಿತವಾಗಿರಬೇಕು, ವ್ಯವಸ್ಥಿತವಾಗಿರಬೇಕು ಎಂದು ಸಲಹೆ ನೀಡಿದ ಸಿದ್ದರಾಮಯ್ಯ, ಈಗಿನ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಯೋಜನೆ ರೂಪಿಸದೆ ಇನ್ನು 15 ರಿಂದ 20 ವರ್ಷದ ಮೈಸೂರಿನ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಗೆ ರೂಪ ನೀಡಬೇಕು. ಈ ಮುಂದಾಲೋಚನೆ ವೈಜ್ಞಾನಿಕವಾಗಿರಬೇಕು ಎಂದು ಸೂಚನೆ ನೀಡಿದರು. ▶ 9ನೇ ಪುಟಕ್ಕೆ

ಅಧಿಕಾರ ಹಸ್ತಾಂತರ; ಹೈಕಮಾಂಡ್ ತೀರ್ಮಾನವೇ ಅಂತಿಮ

ಮೈಸೂರು, ನ.3(ಬಿಎಲ್‌ಯು)– ಅಧಿಕಾರ ಹಸ್ತಾಂತರ ಕುರಿತಂತೆ ಯಾರು ಏನೇ ಹೇಳಿದರೂ ಅದು ಮುಖ್ಯವಲ್ಲ. ಹೈಕಮಾಂಡ್ ಹೇಳುವುದಷ್ಟೆ ಮುಖ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿ ಎಂಬ ಬಿಹಾರ ಮುಖಂಡರೊಬ್ಬರ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಅಧಿಕಾರ ಹಸ್ತಾಂತರ ಕುರಿತಂತೆ ಪದೇ ಪದೆ ಅದನ್ನೆ ಮಾತಾಡುತ್ತೀರಾ, ಈ ವಿಚಾರದ ಬಗ್ಗೆ ಜನ ಮಾತನಾಡುತ್ತಿಲ್ಲ, ಆದರೆ ಮಾಧ್ಯಮದವರೇ ಪದೇ ಪದೆ ಮಾತನಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸಿದ್ದರಾಮಯ್ಯ, ಕಾಂಗ್ರೆಸ್ ಪಕ್ಷಕ್ಕೆ ಹೈಕಮಾಂಡ್ ಇದೆ. ಇಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಪುನರುಚ್ಚರಿಸಿದರು. ಬಿಹಾರ ಚುನಾವಣೆ ತರುವಾಯ ನಾನು, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಮಾತನಾಡುತ್ತೇನೆ. ಸಂಪುಟ ಪುನಾರಚನೆ ಬಗ್ಗೆ ಅಂದು ಚರ್ಚೆ ನಡೆಸುತ್ತೇನೆ. ಈ ಕಾರಣಕ್ಕಾಗಿಯೇ ನವೆಂಬರ್ 15 ಕ್ಕೆ ದೆಹಲಿ ಭೇಟಿ ನಿಗದಿ ಮಾಡಿದ್ದೇನೆ ಎಂದರು. ▶ 10ನೇ ಪುಟಕ್ಕೆ

ಕಾಡಂಚಿನ ಅಕ್ರಮ ರೆಸಾರ್ಟ್‌ಗಳಿಗೆ ಕಡಿವಾಣ

ಕಾಡಂಚಿನಲ್ಲಿ ಅಕ್ರಮ ರೆಸಾರ್ಟ್‌ಗಳು ಹೆಚ್ಚಾಗಿದ್ದು, ಅವುಗಳಿಗೆ ಕಡಿವಾಣ ಹಾಕುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು. ಮೈಸೂರು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಇಬ್ಬರು ಸಾವನ್ನಪ್ಪಿರುವ ಪ್ರಕರಣ ಕುರಿತಂತೆ ಪ್ರತಿಕ್ರಿಯೆ ನೀಡಿದ ಅವರು, ಸಫಾರಿಗಳ ಸಂಖ್ಯೆ ಕೂಡ ಹೆಚ್ಚಾಗಿರುವುದು ನನ್ನ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಅವುಗಳ ಕಡಿಮೆ ಮಾಡುತ್ತೇವೆ ಎಂದು ತಿಳಿಸಿದರು. ▶ 10ನೇ ಪುಟಕ್ಕೆ

ಮೈಸೂರು ಚಿತ್ರ ನಗರಿ ಯೋಜನೆ ಅತೀ ಶೀಘ್ರ ಆರಂಭ

● ಡಿಸೆಂಬರ್ ಅಂತ್ಯಕ್ಕೆ ಡಿಪಿಆರ್ ಸಿದ್ಧ: ಸಿಎಂ ಸಿದ್ದರಾಮಯ್ಯ ವಿಶ್ವಾಸ ● ಮೈಸೂರಲ್ಲಿ 2018, 2019ನೇ ಸಾಲಿನ ಚಲನಚಿತ್ರ ಪ್ರಶಸ್ತಿ ಪ್ರದಾನ

ಮೈಸೂರು, ನ.3(ಎಸ್‌ಬಿಡಿ)– 'ಮೈಸೂರು ಚಿತ್ರ ನಗರಿ' ಸಮಗ್ರ ಯೋಜನಾ ವರದಿ(ಡಿಪಿಆರ್)ಯು ಡಿಸೆಂಬರ್ ಅಂತ್ಯದೊಳಗೆ ಸಿದ್ಧವಾಗಲಿದ್ದು, ನಂತರ ವಿಳಂಬ ಮಾಡದೆ ಪ್ರಕ್ರಿಯೆ ಮುಂದುವರೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಸೋಮವಾರ ನಡೆದ 2018 ಹಾಗೂ 2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿದ ಅವರು, ಕನ್ನಡ ಭಾಷೆ ಹಾಗೂ ಚಿತ್ರೋದ್ಯಮದ ಬೆಳವಣಿಗೆಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

ಮೈಸೂರಲ್ಲಿ ಚಿತ್ರನಗರಿ ಮಾಡಲು ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಮಾಡಿದೆ. ಇದಕ್ಕಾಗಿ 160 ಎಕರೆ ಭೂಮಿಯನ್ನು ಈಗಾಗಲೇ ವಾರ್ತಾ ಇಲಾಖೆಗೆ ಹಸ್ತಾಂತರಿಸಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಡಿಪಿಆರ್ ಸಿದ್ಧವಾಗುತ್ತಿದ್ದು, ನಂತರ ಸಾರ್ವಜನಿಕ–ಖಾಸಗಿ ಸಹಭಾಗಿತ್ವ(ಪಿಪಿಪಿ) ಮಾದರಿಯಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗುವುದು. ಶೀಘ್ರ ಟೆಂಡರ್ ಕರೆದು, ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು. ಹೈದರಾಬಾದ್ ಫಿಲ್ಮ್ ಸಿಟಿ ಮಾದರಿಯಲ್ಲಿ 'ಮೈಸೂರು ಚಿತ್ರ ನಗರಿ'ಯನ್ನು ಖಂಡಿತ ಮಾಡುತ್ತೇವೆ ಎಂದು ತಿಳಿಸಿದರು.

ಸಬ್ಸಿಡಿ ವಿತರಣೆ: ಸದಭಿರುಚಿ ಕನ್ನಡ ಚಿತ್ರಗಳಿಗೆ ಸರ್ಕಾರ ನೀಡುವ ಸಬ್ಸಿಡಿ, ಮೂರು ವರ್ಷದಿಂದ ಬಾಕಿ ಇರುವ ಬಗ್ಗೆ ಮಾತನಾಡಿದ ಮುಖ್ಯಮಂತ್ರಿಗಳು, ಬಾಕಿ ಸಬ್ಸಿಡಿ ಹಣವನ್ನು ಒಮ್ಮೆಲೆ ನೀಡುತ್ತೇವೆ. ಆದರೆ ಸಬ್ಸಿಡಿಗೋಸ್ಕರ ಸಿನಿಮಾ ನಿರ್ಮಾಣ ಮಾಡಬಾರದು. ಎಲ್ಲರೂ ವೀಕ್ಷಿಸುವಂತಹ, ಸಮಾಜದ ಮೇಲೆ ಪರಿಣಾಮ ಬೀರುವ ಉತ್ತಮ ಗುಣಮಟ್ಟದ ಸಿನಿಮಾಗಳನ್ನು ನಿರ್ಮಿಸಬೇಕು ಎಂದು ಸಲಹೆ ನೀಡಿದರು.

ಆಯಾಯ ವರ್ಷವೇ ಪ್ರದಾನ: ಇಂದು 2018 ಮತ್ತು 2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯುತ್ತಿದೆ. ಹಿಂದಿನ ಸರ್ಕಾರದವರು ಪ್ರಶಸ್ತಿ ಪ್ರದಾನ ಮಾಡಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾಗಿದ್ದು ಕಾರಣಾಂತರಗಳಿಂದ ನಮ್ಮಿಂದಲೂ ವಿಳಂಬವಾಯಿತು. ಆದರೆ ಮುಂದೆ ಹೀಗಾಗದಂತೆ ಕ್ರಮ ವಹಿಸುವ ಸಂಬಂಧ ವಾರ್ತಾ ಇಲಾಖೆಯೊಂದಿಗೆ ಚರ್ಚೆ ನಡೆಸಿದ್ದೇನೆ. ಶೀಘ್ರದಲ್ಲೇ 2020 ಹಾಗೂ 2021ನೇ ಸಾಲಿನ ಚಲನಚಿತ್ರ ಪ್ರಶಸ್ತಿ ಪ್ರದಾನವೂ ಜರುಗಲಿದೆ. ಹೀಗೆ ನಾಲ್ಕೈದು ವರ್ಷ ತಡವಾಗಿ ಪ್ರಶಸ್ತಿ ನೀಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಇನ್ನು ಮುಂದೆ ಆಯಾಯ ವರ್ಷದಲ್ಲೇ ಪ್ರಶಸ್ತಿ ಪ್ರದಾನ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಪರಿಣಾಮಕಾರಿ ಮಾಧ್ಯಮ: ಎಲ್ಲಾ ಮಾಧ್ಯಮಗಳಿಗಿಂತ ಸಿನಿಮಾ ಅತ್ಯಂತ ಹೆಚ್ಚು ಪ್ರಭಾವಯುತ ಮಾಧ್ಯಮ. ಜನ ಹಾಗೂ ಸಮಾಜದ ಮೇಲೆ ಪರಿಣಾಮ ಬೀರುತ್ತವೆ. ಹಿಂದೆ ಸಿನಿಮಾಗಳಿಂದ ಜನರು ಪರಿವರ್ತನೆಯಾಗಿದ್ದಾರೆ. ನಾಯಕ ನಟರಿಂದ ಪ್ರಭಾವಿತರಾಗಿ ತಾವೂ ಅವರಂತೆ ನಡೆದುಕೊಂಡಿರುವ ಉದಾಹರಣೆಗಳಿವೆ. ಆದರೆ ಈಗಿನ ಪರಿಸ್ಥಿತಿ ಹಾಗಿಲ್ಲ. ಸಿನಿಮಾ ನೋಡಿ ಬದಲಾಗುವವರು ಕಡಿಮೆ. ▶ 10ನೇ ಪುಟಕ್ಕೆ

ಇನ್ನೂ 'ಕಾಂತಾರಾ' ನೋಡೋಕ್ಕಾಗಿಲ್ಲ...

ವಿದ್ಯಾರ್ಥಿಯಾಗಿದ್ದಾಗ ದಿನ ಸಿನಿಮಾ ನೋಡುತ್ತಿದ್ದೆ. ಇತ್ತೀಚಿನ ದಿನಗಳಲ್ಲಿ ಸಿನಿಮಾ ಬಿಡುಗಡೆ ಜಾಸ್ತಿಯಾಗಿದ್ದು, ನಾನು ನೋಡುವುದನ್ನೇ ಬಿಟ್ಟಿದ್ದೇನೆ. ಯಾರಾದರೂ ತುಂಬಾ ಒತ್ತಾಯಿಸಿದರೆ ಅಪರೂಪವಾಗಿ ಹೋಗುತ್ತೇನೆ. ಇನ್ನೂ 'ಕಾಂತಾರಾ' ಸಿನಿಮಾ ನೋಡಿಲ್ಲ. ಸಿನಿಮಾ ಚೆನ್ನಾಗಿದೆ, ಹಣ ಗಳಿಸಿದೆ, ಸಮಾಜದ ಮೇಲೆ ಪರಿಣಾಮವನ್ನೂ ಬೀರುತ್ತದೆ ಎಂದು ಅನೇಕರು ಹೇಳಿದ್ದಾರೆ. ಆದರೆ ಸಮಯದ ಅಭಾವದಿಂದ ಸಿನಿಮಾ ನೋಡಿಲ್ಲ. ಒಂದು ದಿನ ಖಂಡಿತವಾಗಿ ನೋಡುತ್ತೇನೆ.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ನಿವಾಸಿಗಳಿಗೆ ನೆಮ್ಮದಿ ಸಿಗಲಿದೆ

ಮೈಸೂರು, ನ.3– 'ಗ್ರೇಟರ್ ಮೈಸೂರು' ಅನುಷ್ಠಾನದಿಂದ ನಗರದ ಸುತ್ತಲಿನ ಬಡಾವಣೆಗಳ ನಿವಾಸಿಗಳಿಗೆ ನೆಮ್ಮದಿ ಸಿಗಲಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಅಭಿಪ್ರಾಯಿಸಿದ್ದಾರೆ.



'ಬೃಹತ್ ಮೈಸೂರು' ರೂಪಿಸಬೇಕೆಂದು ಹಲವು ವರ್ಷಗಳಿಂದ ನಿರಂತರವಾಗಿ ಸರ್ಕಾರಗಳ ಮೇಲೆ ಒತ್ತಡ ಹೇರುತ್ತಾ ಬಂದಿರುವ ಜಿಟಿಡಿ ಅವರು, ಮುಂದಿನ ಸಂಪುಟದಲ್ಲಿ ಗ್ರೇಟರ್ ಮೈಸೂರು ಜಾರಿಗೆ ಅನುಮೋದನೆ ಪಡೆಯಲು ನಿರ್ಧಾರ ಕೈಗೊಂಡಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರದ ಸುತ್ತ ಗೃಹ ನಿರ್ಮಾಣ ಸಹಕಾರ ಸಂಘಗಳು ಹಾಗೂ ಖಾಸಗಿ ಡೆವಲಪರ್‌ಗಳು ನಿರ್ಮಾಣ ಮಾಡಿರುವ ಬಹುತೇಕ ಬಡಾವಣೆಗಳಲ್ಲಿ ಸೆಪ್ಟಿಕ್ ಟ್ಯಾಂಕ್, ಶಾಶ್ವತ ರಸ್ತೆ, ಉದ್ಯಾನವನ ಸೇರಿದಂತೆ ಯಾವುದೇ ಸೌಲಭ್ಯ ಕಲ್ಪಿಸಿಲ್ಲ. ಇರುವ ರಸ್ತೆಗಳೂ ಗುಂಡಿಮಯವಾಗಿವೆ. ಯುಜಿಡಿ ಸಮಸ್ಯೆಯಂತೂ ಗಂಭೀರವಾಗಿದೆ. ಅತ್ಯಂತ ಆಸೆಯಿಂದ ಮನೆ ನಿರ್ಮಾಣ ಮಾಡಿಕೊಂಡಿರುವ ಜನ, ನರಕಯಾತನೆ ಅನುಭವಿಸುತ್ತಿದ್ದಾರೆ. ಸಕಲ ಸೌಲಭ್ಯವನ್ನೂ ಕಲ್ಪಿಸಿಕೊಡುವ ಮೂಲಕ ಜನರಿಗೆ ನೆಮ್ಮದಿ ನೀಡಬೇಕೆಂದು ಬಹಳ ವರ್ಷಗಳಿಂದ ಮನವಿ ಮಾಡುತ್ತಲೇ ಬಂದಿದ್ದೇನೆ. ಇಂದಿನ ಸಭೆಯಲ್ಲೂ ನಾನು ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳೂ ಇದನ್ನೇ ಒತ್ತಾಯಿಸಿದೆವು. ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ಸುತ್ತಲೂ ಇರುವ ಪ್ರದೇಶಗಳನ್ನೆಲ್ಲಾ ಸೇರಿಸಿಕೊಂಡು ಬೃಹತ್ ಮೈಸೂರು ರೂಪಿಸಿ, ಎಲ್ಲಾ ರೀತಿಯ ಅಭಿವೃದ್ಧಿ ಕೆಲಸ ಮಾಡಬೇಕು ಎಂಬ ನಮ್ಮ ಮನವಿಗೆ ಮುಖ್ಯಮಂತ್ರಿಗಳು ಸ್ಪಂದಿಸಿದ್ದಾರೆ. ಸುಂದರ ಬೃಹತ್ ಮೈಸೂರು ರೂಪಿಸಲು ಅಗತ್ಯ ಯೋಜನೆ ರೂಪಿಸಲು ಸೂಚಿಸಿದ್ದಾರೆ. ಮೈಸೂರಿನ ಸಮಗ್ರ ಅಭಿವೃದ್ಧಿ ಯೋಜನೆಗಾಗಿ ತಜ್ಞರ ಸಮಿತಿ ರಚಿಸಿ, ಅಗತ್ಯ ▶ 9ನೇ ಪುಟಕ್ಕೆ



ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಸೋಮವಾರ 2018ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಜೆ.ಕೆ.ಶ್ರೀನಿವಾಸಮೂರ್ತಿ (ಡಾ.ರಾಜ್‌ಕುಮಾರ್ ಪ್ರಶಸ್ತಿ), ಪಿ.ಶೇಷಾದ್ರಿ (ಪುಟ್ಟಣ್ಣ ಕಣಗಾಲ್ ಪ್ರಶಸ್ತಿ), ಬಿ.ಎಸ್.ಬಸವರಾಜು (ಡಾ.ವಿಷ್ಣುವರ್ಧನ್ ಪ್ರಶಸ್ತಿ), 2019ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಉಮಾಶ್ರೀ (ಡಾ.ರಾಜ್‌ಕುಮಾರ್ ಪ್ರಶಸ್ತಿ), ಎನ್.ಆರ್.ನಂಜುಂಡೇಗೌಡ (ಪುಟ್ಟಣ್ಣ ಕಣಗಾಲ್ ಪ್ರಶಸ್ತಿ) ಹಾಗೂ ರಿಚರ್ಡ್ ಕ್ಯಾಸ್ಟಲಿನೋ (ಡಾ.ವಿಷ್ಣುವರ್ಧನ್ ಪ್ರಶಸ್ತಿ) ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರದಾನ ಮಾಡಿದರು.

2018, 2019ನೇ ಸಾಲಿನ ಕನ್ನಡ ಚಲನಚಿತ್ರ ಪ್ರಶಸ್ತಿ ಪ್ರದಾನ

2018ನೇ ಸಾಲಿನ ಡಾ.ರಾಜ್‌ಕುಮಾರ್, ಪುಟ್ಟಣ್ಣ ಕಣಗಾಲ್, ಡಾ.ವಿಷ್ಣುವರ್ಧನ್ ಪ್ರಶಸ್ತಿ ಕ್ರಮವಾಗಿ ಶ್ರೀನಿವಾಸಮೂರ್ತಿ, ಪಿ.ಶೇಷಾದ್ರಿ, ಬಿ.ಎಸ್.ಬಸವರಾಜು; 2019ನೇ ಸಾಲಿನ ಡಾ.ರಾಜ್‌ಕುಮಾರ್, ಪುಟ್ಟಣ್ಣ ಕಣಗಾಲ್, ಡಾ.ವಿಷ್ಣುವರ್ಧನ್ ಪ್ರಶಸ್ತಿ ಕ್ರಮವಾಗಿ ಉಮಾಶ್ರೀ, ಎನ್.ಆರ್.ನಂಜುಂಡೇಗೌಡ, ರಿಚರ್ಡ್ ಕ್ಯಾಸ್ಟಲಿನೋ.

ಮೈಸೂರು, ನ.3(ಪಿಎಂ)– ಕರ್ನಾಟಕ ಸರ್ಕಾರ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ 2018 ಮತ್ತು 2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಸೋಮವಾರ ಪ್ರದಾನ ಮಾಡಲಾಯಿತು.

ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಹಮ್ಮಿಕೊಂಡಿದ್ದ ಅದ್ಧೂರಿ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಪ್ರಶಸ್ತಿ ವಿವರ: ಜೀವಮಾನ ಸಾಧನೆ ಪ್ರಶಸ್ತಿ; 2018ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಗೆ ಜೆ.ಕೆ.ಶ್ರೀನಿವಾಸಮೂರ್ತಿ (ಡಾ.ರಾಜ್‌ಕುಮಾರ್ ಪ್ರಶಸ್ತಿ), ಪಿ.ಶ್ರೇಷಾದ್ರಿ (ಪುಟ್ಟಣ್ಣ ಕಣಗಾಲ್ ಪ್ರಶಸ್ತಿ), ಬಿ.ಎಸ್.ಬಸವರಾಜು (ಡಾ.ವಿಷ್ಣುವರ್ಧನ್ ಪ್ರಶಸ್ತಿ), 2019ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಗೆ ಉಮಾಶ್ರೀ (ಡಾ.ರಾಜ್‌ಕುಮಾರ್ ಪ್ರಶಸ್ತಿ), ಎನ್.ಆರ್.ನಂಜುಂಡೇಗೌಡ (ಪುಟ್ಟಣ್ಣ ಕಣಗಾಲ್ ಪ್ರಶಸ್ತಿ) ಹಾಗೂ ರಿಚರ್ಡ್ ಕ್ಯಾಸ್ಟಲಿನೋ (ಡಾ.ವಿಷ್ಣುವರ್ಧನ್ ಪ್ರಶಸ್ತಿ) ಭಾಜನರಾಗಿದ್ದಾರೆ. ಪ್ರಶಸ್ತಿಗಳು ತಲಾ 5 ಲಕ್ಷ ನಗದು ಮತ್ತು 50 ಗ್ರಾಂ ಚಿನ್ನದ ಪದಕ ಒಳಗೊಂಡಿವೆ.

2018ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳ ವಿವರ; ಡಿ ಪಿಕ್ಚರ್ಸ್ ನಿರ್ಮಾಣ ಹಾಗೂ ದಯಾಳ್ ಪದ್ಮನಾಭನ್ ನಿರ್ದೇಶನದ 'ಆ ಕರಾಳ ರಾತ್ರಿ' ಮೊದಲನೇ ಅತ್ಯುತ್ತಮ ಚಿತ್ರ, ಸುಧಾ ಕ್ರಿಯೇಷನ್ಸ್ ನಿರ್ಮಾಣ ಹಾಗೂ ಕೆ.ಶಿವರುದ್ರಯ್ಯ ನಿರ್ದೇಶನದ 'ರಾಮನ ಸವಾರಿ' ಎರಡನೇ ಅತ್ಯುತ್ತಮ ಚಿತ್ರ, ಡಿ.ಎನ್.ಸಿನಿಮಾಸ್ ನಿರ್ಮಾಣ ಹಾಗೂ ಡಿ.ಸತ್ಯಪ್ರಕಾಶ್ ನಿರ್ದೇಶನದ 'ಒಂದಲ್ಲಾ ಎರಡಲ್ಲಾ' ಮೂರನೇ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಗಿವೆ.

ಅಂತೆಯೇ ಲಕ್ಷ್ಮೀನರಸಿಂಹ ಮೂವೀಸ್ ನಿರ್ಮಾಣ ಹಾಗೂ ಟಿ.ಎನ್.ನಾಗೇಶ್ ನಿರ್ದೇಶನದ 'ಸಂತಕವಿ ಕನಕದಾಸರ ರಾಮಧಾನ್ಯ' ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ, ರಿಷಬ್ ಶೆಟ್ಟಿ ▶ 10ನೇ ಪುಟಕ್ಕೆ

2018ನೇ ಸಾಲಿನ ಅತ್ಯುತ್ತಮ ಚಿತ್ರಗಳು; 'ಆ ಕರಾಳ ರಾತ್ರಿ' (ಪ್ರಥಮ), 'ರಾಮನ ಸವಾರಿ' (ದ್ವಿತೀಯ), 'ಒಂದಲ್ಲಾ ಎರಡಲ್ಲಾ' (ತೃತೀಯ). ರಾಘವೇಂದ್ರ ರಾಜ್‌ಕುಮಾರ್ ಅತ್ಯುತ್ತಮ ನಟ (ಅಮ್ಮನ ಮನೆ), ಮೇಘನಾರಾಜ್ ಅತ್ಯುತ್ತಮ ನಟಿ (ಇರುವುದೆಲ್ಲ ಬಿಟ್ಟು). 2019ನೇ ಸಾಲಿನ ಅತ್ಯುತ್ತಮ ಚಿತ್ರಗಳು; 'ಮೋಹನದಾಸ್' (ಪ್ರಥಮ), 'ಲವ್ ಮಾಕ್‌ಟೈಲ್' (ದ್ವಿತೀಯ), 'ಅರ್ಘ್ಯಂ' ತೃತೀಯ. ಅತ್ಯುತ್ತಮ ನಟ ಕಿಚ್ಚ ಸುದೀಪ್ (ಪೈಲ್ವಾನ್), ಅತ್ಯುತ್ತಮ ನಟಿ ಅನುಪಮಾಗೌಡ (ತ್ರಯಂಬಕಂ).

ನಕ್ಕರೆ ಅದೇ ಸ್ವರ್ಗ

ಕಾನ್‌ಸ್ಟೇಬಲ್ : ಸರ್ ನಿನ್ನೆ ಜೈಲಲ್ಲಿ ಖೈದಿಗಳು ರಾಮಾಯಣ ನಾಟಕ ಮಾಡ್ತಿದ್ರು

ಜೈಲರ್ : ಅದಕ್ಕೇನಿಗ?

ಕಾನ್‌ಸ್ಟೇಬಲ್ : ಹನುಮಂತ, ಸಂಜೀವಿನಿ ತರಲು ಕಾಂಪೌಂಡ್ ಹಾರಿ ಹೋದವನು ಇನ್ನು ಬಂದಿಲ್ಲ...!

ಮೈಸೂರು ಮಿತ್ರ

ಮಂಗಳವಾರ, 4 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ನಾವು ಎಲ್ಲಾ ವಿಷಯದಲ್ಲೂ ವಾದ ಮಾಡಿ ಗೆಲ್ಲೋಕೆ ಆಗಲ್ಲ, ಕೆಲವು ಸಮಯದಲ್ಲಿ ಮೌನವಾಗಿದ್ದು ಬಿಡಬೇಕು. ನಮ್ಮ ಮೌನವೇ ಜಯ ತಂದುಕೊಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತಾ?

ನಿಮ್ಮ ಪತ್ರಗಳು

ಭಾರತದೆದುರು ಸೋತ ಆಫ್ರಿಕಾ



ಮಾನ್ಯರೆ,

ಭಾರತದ ಮಹಿಳಾ ಕ್ರಿಕೆಟ್ ತಂಡವು 47 ವರ್ಷದ ಬಳಿಕ ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿರುವುದು ಪ್ರತಿಯೊಬ್ಬ ಭಾರತೀಯರಿಗೂ ಹೆಮ್ಮೆಯ ಸಂಗತಿ. ನಾಯಕಿ ಹರ್ಮನ್‌ಪ್ರೀತ್ ಕೌರ್ ಅದ್ಭುತ ನಾಯಕತ್ವದಲ್ಲಿ, ನಮ್ಮ 'ಸಿಂಹಿಣಿಯರು' ವಿಶ್ವದೆಲ್ಲೆಡೆ ತಮ್ಮ ಸಾಮರ್ಥ್ಯವನ್ನು ಮತ್ತು ಅಚಲ ಮನೋಬಲ ಪ್ರದರ್ಶಿಸಿದ್ದಾರೆ.

ಈ ವಿಜಯವು ಕೇವಲ ಒಂದು ಟ್ರೋಫಿಯ ಗೆಲ್ಲುವ ವಿಚಾರವಲ್ಲ; ಇದು ಭಾರತೀಯ ಕ್ರೀಡಾಲೋಕದಲ್ಲಿ ಒಂದು ಮಹತ್ವದ ಮೈಲಿಗಲ್ಲು.

ಆಟಗಾರ್ತಿಯರು ತೋರಿದ ಶಿಸ್ತು ಕ್ರೀಡಾ ಮನೋಭಾವ ಮತ್ತು ಆಕ್ರಮಣಕಾರಿ ಆಟ ನಿಜಕ್ಕೂ ಪ್ರಶಂಸನೀಯ. ಅದರಲ್ಲೂ, ಆರಂಭಿಕ ಬ್ಯಾಟಿಂಗ್‌ನಲ್ಲಿ ಶಫಾಲಿ ವರ್ಮಾ ಅವರ ಸಿಡಿಲಬ್ಬರದ ಪ್ರದರ್ಶನ ಹಾಗೂ ಬೌಲಿಂಗ್‌ನಲ್ಲಿ ದೀಪ್ತಿ ಶರ್ಮಾ ಅವರ ಕರಾರುವಾಕ್ಕಾದ ದಾಳಿಯು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿವೆ. ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿ ನಮ್ಮ ಹೆಮ್ಮೆಯ ವನಿತೆಯರು ವಿಶ್ವಕಪ್ ಅನ್ನು ಎತ್ತಿ ಹಿಡಿದ ಕ್ಷಣ ಪ್ರತಿಯೊಬ್ಬ ಭಾರತೀಯನಿಗೂ ರೋಮಾಂಚನ ಮತ್ತು ಹೆಮ್ಮೆ ತಂದಿದೆ. ಈ ಐತಿಹಾಸಿಕ ಗೆಲುವು ದೇಶದಾದ್ಯಂತ ಇರುವ ಕೋಟ್ಯಾಂತರ ಯುವಕರಿಗೆ ಮತ್ತು ವಿಶೇಷವಾಗಿ ಹೆಣ್ಣುಮಕ್ಕಳಿಗೆ ಕ್ರೀಡೆಯನ್ನು ವೃತ್ತಿಯನ್ನಾಗಿ ತೆಗೆದುಕೊಳ್ಳಲು ಸ್ಫೂರ್ತಿ ನೀಡಲಿದೆ. ಮಹಿಳಾ ಕ್ರೀಡೆಗೆ ಒಂದು ಹೊಸ ಆಯಾಮವನ್ನು ಮತ್ತು ಗೌರವವನ್ನು ತಂದುಕೊಟ್ಟ ಇಡೀ ತಂಡಕ್ಕೆ, ಮುಖ್ಯವಾಗಿ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. **–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

ಭಾನುವಾರ ಭಾರತದ ಕ್ರಿಕೆಟ್‌ಗೆ ಡಬಲ್ ಧಮಾಕಾ!!

ಮಾನ್ಯರೆ,

ಈ ಭಾನುವಾರ ಭಾರತದ ಕ್ರಿಕೆಟ್ ತಂಡಕ್ಕೆ ಡಬಲ್ ಧಮಾಕಾ ದೊರೆತಿದೆ. ಭಾರತದ ಪುರುಷರು ಆಸ್ಟ್ರೇಲಿಯಾವನ್ನು ಟಿ20 ಪಂದ್ಯದಲ್ಲಿ ಸೋಲಿಸಿ ಜಯಭೇರಿ ಬಾರಿಸಿದರೆ, ಮತ್ತೊಂದೆಡೆ ಭಾರತದ ಕ್ರಿಕೆಟ್ ಮಹಿಳಾ ಮಣಿಗಳು ವಿಶ್ವಕಪ್ ಏಕದಿನ ಪಂದ್ಯದ ಫೈನಲ್ ಪಂದ್ಯವನ್ನು ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಗೆಲ್ಲುವ ಮೂಲಕ ಭಾರತಕ್ಕೆ ಪ್ರಥಮ ಬಾರಿಗೆ ವಿಶ್ವ ಕಪ್ ಟ್ರೋಫಿ ಮುಡಿಗೇರಿಸಿಕೊಂಡಿದ್ದಾರೆ.

ಭಾರತದ ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ವಿಶ್ವಕಪ್ ಪಂದ್ಯಾವಳಿ ಶುರು ಆಗುವುದಕ್ಕೆ ಮೊದಲೇ ಈ ಬಾರಿ ಭಾರತ ವಿಶ್ವಕಪ್ ಗೆಲ್ಲುತ್ತದೆ ಎಂದು ಭವಿಷ್ಯ ನುಡಿದಿದ್ದರು. ಅವರ ಭವಿಷ್ಯ ಹುಸಿಯಾಗಲಿಲ್ಲ. ಕಾರಣ ಪಂದ್ಯಾವಳಿ ಭಾರತದ ನೆಲದಲ್ಲಿ ನಡೆಯುವುದರಿಂದ ಅಭಿಮಾನಿಗಳ ಬೆಂಬಲ ಹಾಗೂ ತವರು ನೆಲದ ಗುಟ್ಟು ಅವರಿಗೆ ಚೆನ್ನಾಗಿ ಗೊತ್ತಿತ್ತು. ಭಾರತದ ಮಹಿಳೆಯರು ಏಕದಿನ ಕ್ರಿಕೆಟ್ ಪಂದ್ಯದಲ್ಲಿ ವಿಶ್ವಕಪ್ ಚಾಂಪಿಯನ್ಸ್ ಆಗಿಲ್ಲ ಎಂಬ ಕೊರಗು ಬಹಳ ದಿನಗಳಿಂದ ಕ್ರಿಕೆಟ್ ಅಭಿಮಾನಿಗಳಲ್ಲಿ ಇತ್ತು. ಅದು ಈಗ ಈಡೇರಿದೆ. ಇನ್ನೇನು ನಿವೃತ್ತಿಯ ಹೊಸ್ತಿಲಲ್ಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹಾಗೂ ಅವರ ತಂಡಕ್ಕೆ ಅಭಿನಂದನೆಗಳು.

–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು.

ಆಮೆಗತಿಯಲ್ಲಿ ಸಾಗುತ್ತಿರುವ ರಸ್ತೆ ನಿರ್ಮಾಣ ಕಾಮಗಾರಿ

ಮಾನ್ಯರೆ,

ನಂಜನಗೂಡಿನಿಂದ ಗುಂಡ್ಲುಪೇಟೆ ಮಾರ್ಗ ಕೇರಳ ಮತ್ತು ಊಟಿಗೆ ಹೋಗುವ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತಿದ್ದು, ಪ್ರತಿದಿನವು ಒಂದಲ್ಲ ಒಂದು ಅಪಘಾತ ಸಂಭವಿಸಿ ವಾಹನ ಸವಾರರು, ಚಾಲಕರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಹಲವು ಸಾವುಗಳೂ ಸಂಭವಿಸಿವೆ. ಈ ರಸ್ತೆಯನ್ನು ದ್ವಿಪಥ ರಸ್ತೆ ಮಾಡಲು ಈಗ ಕಾಮಗಾರಿ ಆರಂಭವಾಗಿದೆ. ನಿಧಾನಗತಿಯಲ್ಲಿ ಕಾಮಗಾರಿ ಸಾಗುತ್ತಿರುವುದನ್ನು ನೋಡಿದರೆ ಸದ್ಯಕ್ಕೆ ಮುಗಿಯುವ ಲಕ್ಷಣ ಕಂಡು ಬರುತ್ತಿಲ್ಲ. ಹಾಗಾಗಿ ತ್ವರಿತವಾಗಿ ಕಾಮಗಾರಿ ನಡೆಸಿ ವಾಹನಗಳು ಸುಗಮವಾಗಿ ಸಂಚಾರ ಮಾಡಲು ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲಿ. **–ಬೆಂಡರವಾಡಿ ಮಧುರಾಜ್, ಗುಂಡ್ಲುಪೇಟೆ ತಾ.**

ಹದ್ದು!

ಮಾನ್ಯರೆ,

ರಣಹದ್ದುಗಳ ಸಂಖ್ಯೆ ಇಳಿಮುಖವಾಗುತ್ತಿದೆ ಎಂದು ಹೇಳುತ್ತದೆ, ಒಂದು ಸಮೀಕ್ಷೆ. ಆದರೆ 'ರಣ' ಎಂದರೆ ಯುದ್ಧವೂ ಹೌದಷ್ಟೆ; ಜಗತ್ತಿನಲ್ಲಿ ವೃದ್ಧಿಸುತ್ತಿದೆ, ಯುದ್ಧೋನ್ಮಾದದ ಹದ್ದುಗಳ ಸಂತತಿ! ('ಹಣ' ಹದ್ದುಗಳಂತೂ ಅಸಂಖ್ಯ, ಸಾರ್ವತ್ರಿಕ).

ದೀಪ–ಶಿಲ್ಪ

'ಆತ್ಮ ದೀಪೋಭವ(ನಿನಗೆ ನೀನೇ ಬೆಳಕಾಗು) ಎಂಬುದು ಬುದ್ಧ ವಾಣಿ; 'ನಿನ್ನ ಏಳಿಗೆಗೆ ನೀನೇ ಶಿಲ್ಪಿ' ಎಂಬುದು ಸ್ವಾಮಿ ವಿವೇಕಾನಂದ (ಹಿತ) ವಚನ. ಗಮನಾರ್ಹ, ಸಾಮ್ಯ! **–ಸಿಪಿಕೆ, ಹಿರಿಯ ಸಾಹಿತಿ.**



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಹಗೆತನ ಬದಲು ಗೆಳೆತನ ಲೇಸು



> "ಕೆಲವೊಮ್ಮೆ ಸಂಬಂಧಿಕರಲ್ಲಿ ಹಣ, ಆಸ್ತಿ ವಿಚಾರಗಳು ಬಂದಾಗ ಅದೇ ದೊಡ್ಡ ಮಹತ್ವವನ್ನು ಪಡೆದು ಸಂಬಂಧ ಗೌಣವಾಗುತ್ತದೆ. ಸಹಾಯ ಮಾಡಿದರೆ ಮಾತ್ರ ಸಂಬಂಧ, ಇಲ್ಲದಿದ್ದರೆ ಏನೇನು ಇಲ್ಲವೆಂಬ ಭಾವ ಉಂಟಾಗುತ್ತದೆ. ಪ್ರತಿಫಲದ ಅಪೇಕ್ಷೆಯನ್ನೇ ಮಾನದಂಡವಾಗಿ ಪರಿಗಣಿಸಿದರೆ ಅಂತಹ ಸಂಬಂಧಗಳಲ್ಲಿ ಯಾವುದೇ ಮೌಲ್ಯ ಉಳಿಯಲಾರದು. ಸಂಬಂಧಗಳಲ್ಲಿ ಹೊಂದಾಣಿಕೆ ಮುಖ್ಯವಾದುದು. ಸಹಾಯ ಮಾಡಿದರೂ, ಮಾಡದಿದ್ದರೂ ಅವುಗಳೇ ಪ್ರಧಾನವಾಗಿರಲಾರದು ಎಂಬುದು ನನ್ನ ಅಭಿಪ್ರಾಯ.

ಜನನದಿಂದ ಆರಂಭವಾಗುವ ಈ ಸಂಬಂಧ ಎನ್ನುವ ಅನುಬಂಧ ಅನನ್ಯತೆಯ ಭಾವದಲ್ಲಿ ಭೌತಿಕವಾಗಿ ದೇಹ ಅಳಿದರು ಈ ಸಂಬಂಧವು ಉಳಿದು ಹೋಗುತ್ತದೆ. ಈ ಸಂಬಂಧದ ವ್ಯಾಪ್ತಿ ಎಲ್ಲಿಂದ ಶುರುವಾಗಿ, ಎಲ್ಲಿಗೆ ತಲುಪುತ್ತದೋ ಅದನ್ನು ನಿರ್ದಿಷ್ಟ ಪಡಿಸಿ ಹೇಳುವುದು ಬಲು ಕಷ್ಟ. ಪ್ರಾರಂಭದ ಪರಿಚಯ ಸಂಬಂಧವನ್ನು ಅಂಟಿಸುವ ಬಗೆಯಲ್ಲಿಯೇ ಶುರುವಾಗುತ್ತದೆ. ತದನಂತರದಲ್ಲಿ ಅದರ ಉಳಿಯುವಿಕೆ, ಅದನ್ನು ಇನ್ನಷ್ಟು ಗಟ್ಟಿ ಮಾಡಿಕೊಳ್ಳುವಿಕೆ ಮಾತ್ರ ಅವರವರ ಮನಸ್ಥಿತಿಗೆ ಬಿಟ್ಟಿದ್ದು. ಈ ದೃಷ್ಟಿಯಿಂದ ಇಲ್ಲಿ ಸಂಬಂಧದ ಇಂದ್ರಜಾಲದಲ್ಲಿ ಸಿಲುಕುವ ಬಂಧಗಳು– ಅನುಬಂಧಗಳು ತೆರೆದುಕೊಳ್ಳುತ್ತವೆ.

ಮೊದಲೆಲ್ಲಾ ಯಾರು ಏನೇ ಎಂದರೂ ತಲೆಕೊಡಿಸಿಕೊಳ್ಳುತ್ತಾ ಇರಲಿಲ್ಲ. ಆದರೆ ಬೆಳೆಯುತ್ತಾ ಹೋದಂತೆ ಸಣ್ಣ ಮಾತನಾಡಿದರೂ ಅದನ್ನೇ ದೊಡ್ಡದು ಮಾಡಿ ದೂರ ಉಳಿಯುತ್ತೇವೆ......

ಸಹೋದ್ಯೋಗಿಗಳು ಮಾತಿನ ಮಧ್ಯೆ ಆಡಿದ ಈ ಮಾತುಗಳು ಎಷ್ಟು ನಿಜ ಅಂತ ಅನಿಸಿದವು. ಹೌದು ತಿಳಿಯದ ವಯಸ್ಸಿನಲ್ಲಿ ಯಾವುದಕ್ಕೂ ಹೆಚ್ಚು ಪ್ರಾಮುಖ್ಯತೆ ನೀಡದೇ ಇರುತ್ತೇವೆ, ಅದೇ ಬೆಳೆಯುತ್ತಾ ಹೋದಂತೆ ನಮ್ಮ ನಡುವೆ ಕಂದಕಗಳನ್ನು ನಿರ್ಮಿಸಿಕೊಂಡು ಇಲ್ಲದ ಗೋಡೆಗಳನ್ನು ನಿರ್ಮಾಣ ಮಾಡಿಕೊಂಡಿರುತ್ತೇವೆ. ಕಾಲ ಬದಲಾದಂತೆ ಜನರ ಮನಸ್ಥಿತಿಗಳು ಬದಲಾಗುತ್ತಿವೆ. ಮನುಷ್ಯ, ಮನುಷ್ಯರ ನಡುವೆ ಇರಬೇಕಾದ ಮಾನವೀಯ ಸಂಬಂಧಗಳು ಬೆಲೆ ಕಳೆದುಕೊಳ್ಳುತ್ತಿವೆ. ಸಂಬಂಧಗಳಿಗಿಂತ ಹಣ, ಆಸ್ತಿ, ಅಂತಸ್ತು, ಪ್ರತಿಷ್ಠೆಗಳಿಗೆ ಪ್ರಾಮುಖ್ಯತೆ ನೀಡುವ ಕಾಲ ಈಗಾಗಲೇ ಬಂದು ನಿಂತಿದೆ. ಭಾವನೆಗಳಿಗೆ ಸ್ಪಂದಿಸುವ ಗುಣ ಕಣ್ಮರೆಯಾಗುತ್ತಿದೆ, ನಾವು ಚೆನ್ನಾಗಿರಬೇಕೆಂಬ ಉದಾರತ್ವ ಕಡಿಮೆಯಾಗಿ ನಾನು ಮಾತ್ರ ಚೆನ್ನಾಗಿದ್ದರೆ ಸಾಕೆಂಬ ಸ್ವಾರ್ಥ ಬುದ್ಧಿ ತಲೆ ಎತ್ತಿ ನಿಲ್ಲುತ್ತಿದೆ. ಸಂಬಂಧಗಳ ಮೌಲ್ಯ ಕಳಚಿ ಬೀಳುತ್ತಿದೆ. ನಾಗರಿಕರಾಗಿ ಉನ್ನತ ಮಟ್ಟಕ್ಕೆ ಏರುವ ಪ್ರಯತ್ನದಲ್ಲಿ ಮಾನವೀಯ ಮೌಲ್ಯಗಳನ್ನು ಕಡೆಗಣಿಸಿ ಬಾಳುತ್ತಿರುವುದು ನಿಜಕ್ಕೂ ದುರಂತವೇ ಸರಿ.

ಕುಟುಂಬದೊಂದಿಗಿನ ಸಂಬಂಧ: ಸಂಬಂಧಗಳಲ್ಲಿ ಮುಖ್ಯವಾಗಿ ಕುಟುಂಬದ ಸದಸ್ಯರುಗಳೊಂದಿಗಿನ ಸಂಬಂಧ ಗಟ್ಟಿಯಾಗಿರಬೇಕು. ಮೂಗು ಇರುವವರೆಗೆ ನೆಗಡಿ ತಪ್ಪಿದ್ದಲ್ಲ,ಮನೆ ಇರುವವರೆಗೆ ಮಾತು ತಪ್ಪಿದ್ದಲ್ಲ ಎಂಬ ಗಾದೆ ಮಾತಿನಂತೆ ಅನೇಕ ಬಾರಿ ಕುಟುಂಬದಲ್ಲಿ ವೈಮನಸ್ಸುಗಳುಂಟಾಗುವುದು ಸಹಜ. ಆದರೆ ಅದನ್ನು ಹೆಮ್ಮರವಾಗಿ ಬೆಳೆಯುವಂತೆ ಬಿಡದೇ ಪರಸ್ಪರ ಕುಳಿತು ಚರ್ಚಿಸಿ ಮನಸ್ತಾಪಗಳನ್ನು ಮರೆತು ಜೀವಿಸಬೇಕು. ಏಕಾಂಗಿ ಜೀವನ ಕಲ್ಪಿಸಿಕೊಳ್ಳಲು ಮಾತ್ರ ಚೆನ್ನಾಗಿರುತ್ತದೆ. ಆದರೆ ಮನುಷ್ಯ ಸಂಘಜೀವಿ ಕುಟುಂಬವನ್ನು ಬಿಟ್ಟು, ಸಂಬಂಧಗಳಿಂದ ದೂರಾಗಿ ಹೆಚ್ಚು ದಿನ ಬದುಕಲಾಗದು.

ಕುಟುಂಬ ಎಂದಾಗ ಅಲ್ಲಿ ಗಂಡ– ಹೆಂಡತಿ, ತಂದೆ– ತಾಯಿ, ಅಣ್ಣ– ತಮ್ಮ, ಅಕ್ಕ– ತಂಗಿ, ಬಂಧು– ಬಳಗ ಹೀಗೆ ಎಲ್ಲರೂ ಸೇರಿಕೊಳ್ಳುತ್ತಾರೆ. ಪರಿಸ್ಥಿತಿ ಚೆನ್ನಾಗಿಲ್ಲದ ವೇಳೆಯಲ್ಲಿ ಅಥವಾ ಸಂದಿಗ್ಧ ಪರಿಸ್ಥಿತಿ ಒದಗಿದಾಗ ವೈಮನಸ್ಸು, ಮನಸ್ತಾಪಗಳು ಉಂಟಾಗುವುದು ಸಹಜ, ನಾವ್ಯಾರು ಯಂತ್ರವಲ್ಲ, ಭಾವನೆಗಳಿಗೆ ಸ್ಪಂದಿಸುವ ಗುಣ ನಮ್ಮದಾಗಿರುವುದರಿಂದ ಕೋಪದ ಕೈಗೆ ಬುದ್ಧಿಯನ್ನು ಕೊಡದೇ ಸಂಬಂಧಗಳಿಗೆ ಮಹತ್ವವನ್ನು ಕೊಟ್ಟಾಗ ಆ ಸಂಬಂಧ ಶಾಶ್ವತವಾಗಿ ಉಳಿಯುತ್ತದೆ.

ಕೆಲವೊಮ್ಮೆ ಸಂಬಂಧಿಕರಲ್ಲಿ ಹಣ, ಆಸ್ತಿ ವಿಚಾರಗಳು ಬಂದಾಗ ಅದೇ ದೊಡ್ಡ ಮಹತ್ವವನ್ನು ಪಡೆದು ಸಂಬಂಧ ಗೌಣವಾಗುತ್ತದೆ. ಸಹಾಯ ಮಾಡಿದರೆ ಮಾತ್ರ ಸಂಬಂಧ, ಇಲ್ಲದಿದ್ದರೆ ಏನೇನು ಇಲ್ಲವೆಂಬ ಭಾವ ಉಂಟಾಗುತ್ತದೆ. ಪ್ರತಿಫಲದ ಅಪೇಕ್ಷೆಯನ್ನೇ ಮಾನದಂಡವಾಗಿ ಪರಿಗಣಿಸಿದರೆ ಅಂತಹ ಸಂಬಂಧಗಳಲ್ಲಿ ಯಾವುದೇ ಮೌಲ್ಯ ಉಳಿಯಲಾರದು. ಸಂಬಂಧಗಳಲ್ಲಿ ಹೊಂದಾಣಿಕೆ ಮುಖ್ಯವಾದುದು. ಸಹಾಯ ಮಾಡಿದರೂ, ಮಾಡದಿದ್ದರೂ ಅವುಗಳೇ ಪ್ರಧಾನವಾಗಿರಲಾರದು ಎಂಬುದು ನನ್ನ ಅಭಿಪ್ರಾಯ.

ಸಹದ್ಯೋಗಿಗಳೊಂದಿಗಿನ ಸಂಬಂಧ: ಸ್ಪರ್ಧೆ ಎಲ್ಲೆಡೆ ಇರುವಂತದ್ದು, ಹೇಗಾದರೂ ಮಾಡಿ ಮುನ್ನುಗ್ಗಬೇಕು, ಬದುಕಿನಲ್ಲಿ ಭದ್ರವಾದ ನೆಲೆಯೊಂದನ್ನು ಮಾಡಿಕೊಳ್ಳಬೇಕು, ಇತರರಿಗಿಂತ ಭಿನ್ನನೆಂದು ಗುರುತಿಸಿಕೊಳ್ಳಬೇಕು. ಹೀಗೆ ನಾನಾ ವಿಧವಾದ ಕಾರಣಗಳಿಂದ ಕೆಲವೊಮ್ಮೆ ಸಹದ್ಯೋಗಿಗಳೊಂದಿಗೆ ಕೋಪ, ಅಸಹನೆ, ಬಿರುಕು, ಮನಸ್ತಾಪಗಳು ಉಂಟಾಗಬಹುದು. ಆದರೆ ಅದನ್ನೇ ದೊಡ್ಡದಾಗಿ ಮಾಡಿಕೊಂಡು ಮುನ್ನಡೆದರೆ ಅದು ನಮ್ಮತನಕ್ಕೆ ಧಕ್ಕೆಯನ್ನು ತಂದೊಡ್ಡುತ್ತದೆ.

ಒಂದೇ ಕಡೆ ಕೆಲಸ ಮಾಡುವ ಸಂದರ್ಭಗಳಲ್ಲಿ, ಒಬ್ಬರ ಮುಖವನ್ನು ನೋಡಿ ಕಾರ್ಯನಿರ್ವಹಿಸಬೇಕಾದಂತಹ ಪರಿಸ್ಥಿತಿಗಳಲ್ಲಿ ಭಿನ್ನಾಭಿಪ್ರಾಯವನ್ನೇ ದೊಡ್ಡದಾಗಿ ಮಾಡಿಕೊಂಡು ಹಗೆಯನ್ನು ಸಾಧಿಸುತ್ತಾ ಹೋದರೆ ಬದುಕಿಗೆ ಅರ್ಥವಿರುವುದಿಲ್ಲ. ನನಗೆ ಬೇಸರವನ್ನುಂಟು ಮಾಡಿದ್ದಾರೆ. ಅವರಿಗೂ ನಾನು ಬೇಸರವನ್ನುಂಟು ಮಾಡಬೇಕೆಂಬ ಹಟ ತೊಟ್ಟು ನಿಂತರೆ ನಮಗೂ, ಅವರಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಕೆಲವೊಮ್ಮೆ ನಾವು ಮಾಡುವ ಕೆಲಸಗಳನ್ನು ನಿಯತ್ತಾಗಿ ಮಾಡಿದರೂ ಅದು ಕೆಲವರಿಗೆ ಸಹಿಸುವುದಕ್ಕಾಗದೇ ಸುಖಾಸುಮ್ಮನೆ ರೇಗುವ, ಇಲ ಸಲ್ಲದ್ದನ್ನು ಮಾತನಾಡುವ ಉದ್ಯೋಗವನ್ನೇ ಖಾಯಂ ಮಾಡಿಕೊಂಡಿರುತ್ತಾರೆ. ಇಂತಹ ಮನಸ್ಥಿತಿಯವರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ ಮುಂದೆ ಸಾಗಲೇಬೇಕಾಗಿರುತ್ತದೆ.

ಮತ್ತೂ ಕೆಲವರು ನನಗೆ ನನ್ನ ಸೀನಿಯರ್ಸ್ ಈ ತರಹ ತೊಂದರೆ ಕೊಟ್ಟಿದ್ದರು, ನಾನು ನನ್ನ ಜ್ಯೂನಿಯರ್ಸ್‌ಗೆ ಅದೇ ತರಹ ತೊಂದರೆಗಳನ್ನು ಕೊಡುವೆನೆಂಬ ಅಲಿಖಿತ ನಿಯಮವನ್ನು ಇಟ್ಟುಕೊಂಡಿರುತ್ತಾರೆ. ಇಂತಹವರನ್ನು ಕಂಡಾಗೊಮ್ಮೆ ನನಗೆ ಹಿಂದೊಮ್ಮೆ ವಿಕೆಂಡ್ ವಿತ್ ರಮೇಶ್ ಕಾರ್ಯಕ್ರಮವೊಂದರಲ್ಲಿ ಅರ್ಜುನ್ ಜನ್ಯ ಅವರು ಹೇಳಿದ ಮಾತೊಂದು ನೆನಪಿಗೆ ಬರುತ್ತದೆ.

'ಸರ್, ಆರಂಭದ ದಿನಗಳಲ್ಲಿ ನನಗೆ ಕೆಲವರು ತುಂಬ ಅಪಮಾನ, ಅವಮಾನಗಳನ್ನು ಮಾಡಿದ್ದು, ಏನೇ ಕೆಲಸ ಮಾಡಿದರೂ, ಮಾಡದಿದ್ದರೂ ಅವುಗಳನ್ನು ಕೆದಕಿ, ಕೆಣಕಿ ಆಡಿಕೊಳ್ಳುವ ಕೆಲಸವನ್ನು ಮಾಡುತ್ತಿದ್ದರು. ನಾನು ಅವುಗಳನ್ನೆಲ್ಲ ಎದುರಿಸಿ ಉತ್ತಮ ಸ್ಥಿತಿಯತ್ತ ಬಂದಾಗ ನನಗೆ ಎರಡು ಆಯ್ಕೆಗಳಿದ್ದವು ಸರ್

ಆಯ್ಕೆ ಒಂದು: ಕೆಲವರು ನನಗೆ ತೊಂದರೆ ಕೊಟ್ಟ ತೊಂದರೆಯಂತೆ ನಾನು ಅವರಿಗೆ ಮತ್ತು ಉಳಿದವರಿಗೆ ತೊಂದರೆ ನೀಡುವುದು

ಆಯ್ಕೆ ಎರಡು: ನನ್ನಂತೆ ಪ್ರತಿಭೆ ಇದ್ದು ಅವಕಾಶ ವಂಚಿತರಾದವರನ್ನು ಕರೆಸಿ ಅವರಿಗೆ ಉತ್ತಮ ವೇದಿಕೆ ಕಲ್ಪಿಸಿಕೊಡುವುದು. ಈ ಎರಡು ಆಯ್ಕೆಗಳಲ್ಲಿ ನಾನು ಎರಡನೇ ಆಯ್ಕೆಯನ್ನು ಆರಿಸಿಕೊಂಡೆ ಸರ್. ನೋಡಿ ಈಗ ನೀವು ನನ್ನನ್ನು ಇಲ್ಲಿ ತಂದು ಕೂರಿಸಿರುವಿರಿ ಎಂದರು.

ನಿಜಕ್ಕೂ ಈ ಮಾತು ಗಮನಾರ್ಹವಾದ ಬದಲಾವಣೆಯನ್ನು ನನ್ನ ಬದುಕಿನಲ್ಲಿ ಮಾಡಿತು. ನಮ್ಮಂತೆ ನಾವಾಗಿರಬೇಕೆ ವಿನಃ ಇನ್ನೊಬ್ಬರಂತೆ ನಾವಾಗಾಬಾರದು. ಆಡಿಕೊಳ್ಳುವವರ ಬಾಯಿಗೆ ಮಹಾನ್ ಚೇತನಗಳಾದ ಬಸವಣ್ಣ, ಸ್ವಾಮಿ ವಿವೇಕಾನಂದ, ಶ್ರೀರಾಮಕೃಷ್ಣ ಪರಮಹಂಸ, ಬುದ್ಧ, ಅಂಬೇಡ್ಕರ್... ಮೊದಲಾದ ಮಹಾತ್ಮರನ್ನೇ ಬಿಡದ ಜನರು ಇಲ್ಲಸಲ್ಲದ ವಿಚಾರಗಳನ್ನು ಹೇಳುತ್ತಾ ಕಾಲ ಕಳೆಯುವಾಗ ಹುಲು ಮಾನವರಾದ ನಮ್ಮನ್ನು ಬಿಡುವರೇ? ಖಂಡಿತವಾಗಿಯೂ ಇಲ್ಲ.

ಹಾಗಾಗಿ ಮನಸ್ತಾಪ ಬಂದಾಗ ಕುಳಿತು ಮಾತಾನಾಡಿಕೊಂಡು ಸಮಸ್ಯೆ ಬಗೆಹರಿಸಿಕೊಂಡರೆ ಉತ್ತಮ. ಒಂದು ವೇಳೆ ಸಮಸ್ಯೆ ಬಗೆಹರಿಯಲಾರದು ಎಂದರೆ ಮೌನ ಉತ್ತಮ. ನಮ್ಮ ಕೆಲಸ ಮಾಡಿಕೊಂಡು ನೆಮ್ಮದಿಯಾಗಿ ಬಾಳಬೇಕು ಅಷ್ಟೇ. ಕೆಲವರಿಗೆ ಕೆಣುಕುವುದು, ಕೆದಕುವುದು, ಮತ್ತೊಬ್ಬರನ್ನು ಹೀಯ್ಯಾಳಿಸುವುದು, ಎಲ್ಲದಕ್ಕೂ ದೂರನ್ನು ಹೇಳುವುದು ಇಂತಹವರಿಂದ ಸಾಧ್ಯವಾದಷ್ಟು ದೂರ ಉಳಿದರೆ ಮನೆ, ಮನ ಎರಡೂ ಕ್ಷೇಮ.

ಸ್ನೇಹಿತರೊಂದಿಗಿನ ಸಂಬಂಧ: ಗೆಳೆತನ ಅನ್ನುವುದು ಪ್ರತಿ ಹಂತದಲ್ಲಿಯೂ ಮುಖ್ಯವಾದುದು. ಎಷ್ಟು ವರ್ಷಗಳಿಂದ ಗೆಳೆಯ / ಗೆಳತಿಯರಾಗಿ ಇದ್ದೀವಿ ಅನ್ನುವುದಕ್ಕಿಂತ ಪರಸ್ಪರ ಒಬ್ಬರನೊಬ್ಬರು ಎಷ್ಟು ಅರ್ಥ ಮಾಡಿಕೊಂಡು ಜೊತೆಗಿದ್ದೀವಿ ಎನ್ನುವುದು ಮುಖ್ಯವಾಗುತ್ತದೆ. ಸ್ನೇಹದಲ್ಲಿಯೂ ಕೂಡ ನಿರೀಕ್ಷೆಗಳಿರಬಾರದು, ನಿರೀಕ್ಷೆಗಳಿದ್ದರೆ ಆ ಸ್ನೇಹ ಹೆಚ್ಚು ದಿನ ಉಳಿಯಲಾರದು. ಏನೇ ಬಂದರೂ ಜೊತೆಗೆ ನಿಲ್ಲುವೆನೆಂಬ ಭರವಸೆ ಇರಬೇಕು, ಹಣಕಾಸಿನ ಸಹಾಯವನ್ನು ಮಾಡಲಾಗದಿದ್ದರೂ ಇವನೊಬ್ಬ ಜೊತೆಗಿದ್ದರೆ ಸಾಕು ಏನು ಬಂದರೂ ಧೈರ್ಯವಾಗಿರಬಹುದೆಂಬ ಗೆಳೆತನ ಇರಬೇಕು. ಅಂತಹ ಗೆಳೆತನ ನಿಜಕ್ಕೂ ಸಂಬಂಧವನ್ನು ಮತ್ತಷ್ಟು,ಮಗದಷ್ಟು ಗಟ್ಟಿ ಮಾಡುತ್ತದೆ.

ಬಂಧಗಳಿಗಿಂತ ಸಂಬಂಧ ಗಟ್ಟಿಯಾದುದು: ಎಲ್ಲಕ್ಕಿಂತ ಮುಖ್ಯವಾಗಿ ಜೀವನದಲ್ಲಿ ಇನ್ನಿಲ್ಲದ ವಿಚಾರಗಳಿಗೆ ಒಳಗಾಗಿ ನಮ್ಮತನವನ್ನು ಕಳೆದುಕೊಂಡು ಮಾಯದ ಬಂಧನಗಳಿಗೆ ಸೆರೆಯಾಗುವುದಕ್ಕಿಂತ ಸಂಬಂಧಗಳಲ್ಲಿ ಹೊಂದಾಣಿಕೆಯನ್ನು ಮಾಡಿಕೊಂಡು ಸಂಬಂಧಗಳಿಗೆ ಮಹತ್ವವನ್ನು ನೀಡುವುದು ಮುಖ್ಯವಾಗಿರುತ್ತದೆ.

ನನ್ನ ಗೆಳೆಯನೊಬ್ಬ ಹೇಳಿದ್ದ ಮಾತೊಂದು ಇಲ್ಲಿ ಉಲ್ಲೇಖಾರ್ಹ– ನೋಡಮ್ಮ ಜಗಳ ಆಡಬೇಕು ಎಂದುಕೊಂಡರೆ ಪ್ರತಿಯೊಬ್ಬರ ಜೊತೆಯಲ್ಲಿಯೂ, ಪ್ರತಿದಿನವೂ ಜಗಳವಾಡಬಹುದು, ಆದರೆ ಅದೇ ಜೀವನವಲ್ಲ.....

ಗೆಳೆಯ ಪಾಚು (ಪ್ರಸನ್ನ) ಹೇಳಿದ ಮಾತು ಆ ಕ್ಷಣಕ್ಕೆ ಯಾವ ಪರಿಣಾಮವನ್ನು ಉಂಟು ಮಾಡದಿದ್ದರೂ ನಿಶ್ಚಿಂತೆಯಾಗಿ ಕುಳಿತು ಆಲೋಚಿಸಿದಾಗ ಎಂತಹ ಆದರ್ಶದ ಮಾತಲ್ಲವೆ? ಎಂದೆನಿಸಿತು.

ಎಲ್ಲದರಲ್ಲಿಯೂ, ಯಾರಲ್ಲಿಯೂ ಇರುವ ಕೊಂಕನ್ನು ಹುಡುಕುತ್ತಾ ಅದನ್ನೇ ದೊಡ್ಡದಾಗಿ ಮಾಡಿಕೊಂಡು ಅವುಗಳ ಬಗ್ಗೆಯೇ ಮಾತನಾಡುತ್ತಾ ಹೋದರೆ ಅಂತಹ ಬದುಕಿಗೆ ಯಾವುದೇ ಅರ್ಥವಿರುವುದಿಲ್ಲ. ಬದುಕು ಕ್ಷಣಿಕವಾದುದು, ಸಾವು ಯಾವುದೇ ಸಂದರ್ಭದಲ್ಲಿ,ಯಾವುದೇ ರೂಪದಲ್ಲಿಯೂ ಬಂದೆರಗಬಹುದು. ಆದ್ದರಿಂದ ದ್ವೇಷವನ್ನೇ ಹಂಚಿ, ದ್ವೇಷವನ್ನು ಹೆಚ್ಚಿಸಿಕೊಳ್ಳುವ ಬದಲು ಪ್ರೀತಿಯನ್ನು ಹಂಚಿ, ಪ್ರೀತಿಯನ್ನು ಹೆಚ್ಚಿಸಿಕೊಳ್ಳುವ. ಕೆಲವರಲ್ಲಿ ಇದು ಸಾಧ್ಯವಾಗದಿರಬಹುದು, ಅಂತಹವರ ಬಂಧಗಳಿಂದ ದೂರ ಉಳಿದು ಇರುವ ಸಂಬಂಧಗಳನ್ನು ಉಳಿಸಿಕೊಳ್ಳೋಣ.

ಇಲ್ಲಿ ಯಾರು ಮುಖ್ಯರಲ್ಲ– ಬಂದಂತೆ ಬದುಕು. ಆದರೆ, ಯಾರನ್ನೂ ಕೊಂದು ಬದುಕಬೇಡ. ಹುಲು ಮಾನವರಾದ ನಾವುಗಳು ಜೀವ ಇರುವತನಕ ಬೈದು ಬಡಿದು ಜಗಳ ಮಾಡಿ ಇನ್ನೊಬ್ಬರನ್ನು ನೋಯಿಸಿ ಸತಾಯಿಸಿ ಏನೆಲ್ಲ ಮಾಡಿದರೂ ಆದರ್ಶದ ಅವನತಿ ಉನ್ನತಿ ನಾವು ನಡೆದುಕೊಂಡ ರೀತಿ ನೀತಿಯಲ್ಲಿಯೇ ಅಡಗಿದೆ. ಇದನ್ನು ಅರ್ಥ ಮಾಡಿಕೊಳ್ಳಲು ಈ ಸಾಲುಗಳು ಸಾಕೆನಿಸುತ್ತವೆ.

ಇಲ್ಲಿ ಯಾರು ಅಮುಖ್ಯರಲ್ಲ ಎಂಬ ಕುವೆಂಪು ಅವರ ಮಾತಿನಂತೆ ಯಾರೊಂದಿಗೂ ಹಗೆಯನ್ನು ಸಾಧಿಸದೇ ಇರುವ ಸುಂದರವಾದ ಜೀವನವನ್ನು ಸಾರ್ಥಕವಾದ ರೀತಿಯಲ್ಲಿ ಉಳಿಸಿಕೊಂಡು ಹೋಗೋಣ, ಸಂಬಂಧಗಳನ್ನು ಉಳಿಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಂಡಾಗ ಅಂತಹ ಬದುಕಿಗೊಂದು ಮೌಲ್ಯ ಬರುತ್ತದೆ. ಏನೇ ಆದರೂ ಸಂಬಂಧ ಎಂಬುದು ಬಲು ಮುಖ್ಯವಾದುದಲ್ಲವೇ?

ಹೈದರಾಬಾದ್, ರಾಜಾಸ್ಥಾನದಲ್ಲಿ ಪ್ರತ್ಯೇಕ ಅಪಘಾತ: 60 ಮಂದಿ ದುರ್ಮರಣ



ತೆಲಂಗಾಣ ಸರ್ಕಾರಿ ಬಸ್ ಮತ್ತು ಖಾಸಗಿ ಟಿಪ್ಪರ್ ನಡುವೆ ನಡೆದ ಅಪಘಾತ.



ಜೈಪುರದಲ್ಲಿ ನಡೆದ ಅಪಘಾತದಲ್ಲಿ ಬಸ್ ಸಂಪೂರ್ಣ ಜಖಂ ಗೊಂಡಿರುವುದು.

ಹೈದರಾಬಾದ್/ಜೈಪುರ: ಹೈದರಾಬಾದ್ ಮತ್ತು ರಾಜಾಸ್ಥಾನದ ಜೈಪುರದಲ್ಲಿ ನಡೆದ ಪ್ರತ್ಯೇಕ ಅಪಘಾತಗಳಲ್ಲಿ 60 ಮಂದಿ ಸಾವಿಗೀಡಾಗಿದ್ದು, ಹಲವರು ಗಾಯಗೊಂಡಿದ್ದಾರೆ.

ಹೈದರಾಬಾದ್ ವರದಿ: ಇಂದು ಬೆಳಗ್ಗೆ ತೆಲಂಗಾಣ ಸರ್ಕಾರಿ ಬಸ್ ಮತ್ತು ಖಾಸಗಿ ಟಿಪ್ಪರ್ ನಡುವೆ ಅಪಘಾತ ಸಂಭವಿಸಿದ್ದು, 26 ಮಂದಿ ಸಾವಿಗೀಡಾಗಿದ್ದಾರೆ. ಜಲ್ಲಿಕಲ್ಲು ತುಂಬಿಕೊಂಡು ಹೈದರಾಬಾದ್ ಕಡೆಯಿಂದ ಬಿಜಾಪುರ ಕಡೆಗೆ ಹೋಗುತ್ತಿದ್ದ ಲಾರಿಯೊಂದು ತಾಂಡೂರ್‌ನಿಂದ ಹೈದರಾಬಾದ್ ಕಡೆಗೆ ತೆರಳುತ್ತಿದ್ದ ತೆಲಂಗಾಣ ಸಾರಿಗೆ ಸಂಸ್ಥೆಯ ಬಸ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ 26 ಮಂದಿ ಸಾವನ್ನಪ್ಪಿದ್ದಾರೆ.

ತೆಲಂಗಾಣದ ಮಿರ್ಜಗೂಡ ಬಳಿ ಹೈದರಾಬಾದ್–ಬಿಜಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ದುರಂತ ಸಂಭವಿಸಿದೆ. ಘಟನೆಯಲ್ಲಿ ಸರ್ಕಾರಿ ಬಸ್ ಮತ್ತು ಟಿಪ್ಪರ್ ಲಾರಿ ಎರಡೂ ನಜ್ಜುಗುಜ್ಜಾಗಿದೆ. ಹೀಗಾಗಿ ಬಸ್ ಚಾಲಕ ಮತ್ತು ಟಿಪ್ಪರ್ ಚಾಲಕ ಇಬ್ಬರೂ ಅಸುನೀಗಿದ್ದಾರೆ.

ಜೈಪುರ ವರದಿ: ನಿಯಂತ್ರಣ ಕಳೆದುಕೊಂಡ ಡಂಪರ್ 17 ವಾಹನಗಳಿಗೆ ಡಿಕ್ಕಿ ಹೊಡೆದಿದ್ದು, ಅದರ ಟ್ರಾಲಿ ಉರುಳಿಬಿದ್ದು ಮೂರು ಕಾರುಗಳು ಜಖಂಗೊಂಡಿವೆ. ಪರಿಣಾಮ ಕನಿಷ್ಠ 16 ಮಂದಿ ಸಾವನ್ನಪ್ಪಿದ್ದು, ಇತರ 18 ಮಂದಿ ಗಾಯಗೊಂಡಿದ್ದಾರೆ.

ಲೋಹಾ ಮಂಡಿ ಪ್ರದೇಶದಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ ಈ ದುರ್ಘಟನೆ ಸಂಭವಿಸಿದೆ. ಲೋಹಾ ಮಂಡಿ ಪ್ರದೇಶದ ಪೆಟ್ರೋಲ್ ಪಂಪ್ ಕಡೆಯಿಂದ ರಾಷ್ಟ್ರೀಯ ಹೆದ್ದಾರಿ ಕಡೆಗೆ ತೆರಳುತ್ತಿದ್ದ ಡಂಪರ್ ಬ್ರೇಕ್ ವೈಫಲ್ಯಕ್ಕೊಳಗಾಗಿದ್ದು, ರಸ್ತೆ ಬದಿ ನಿಂತಿದ್ದ ಕಾರು, ಆಟೋರಿಕ್ಷಾ ಸೇರಿದಂತೆ ಹಲವು ವಾಹನಗಳಿಗೆ ಡಿಕ್ಕಿ ಹೊಡೆದಿದೆ. ಮೃತರಲ್ಲಿ ಒಂದು ಮಗು ಸೇರಿದೆ ಎಂದು ಕವಾಂಟಿಯಾ ಆಸ್ಪತ್ರೆಯ ಅಧೀಕ್ಷಕ ಡಾ. ಆರ್.ಎಸ್. ತನ್ವರ್ ದೃಢಪಡಿಸಿದ್ದಾರೆ.

ಜೋಧಪುರ ವರದಿ: ರಾಜಸ್ಥಾನದ ಜೋಧಪುರ ಜಿಲ್ಲೆಯ ಫಲೋಡಿ ಪ್ರದೇಶದಲ್ಲಿ ಭಾನುವಾರ ಸಂಜೆ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, 18 ಜನರು ಸಾವನ್ನಪ್ಪಿದ್ದಾರೆ. ಮಾತೋಡಾ ಪೊಲೀಸ್ ಠಾಣೆ ಪ್ರದೇಶದಲ್ಲಿ ಟೆಂಪೋ ಟ್ರಾವೆಲ್ ನಡುವೆ ಟ್ರಕ್ ಮುಖಾಮುಖಿ ಡಿಕ್ಕಿ ಹೊಡೆದಿದೆ. ಪರಿಣಾಮ ಟೆಂಪೋ ಟ್ರಾವೆಲ್ ಬಸ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ.

ಬಿಕಾನೇರ್‌ನ ಕೊಲಾಯತ್‌ಗೆ ಭೇಟಿ ನೀಡಲು ಜೋಧ್‌ಪುರದ ಸುರ್‌ಸಾಗರ್ ಪ್ರದೇಶದಿಂದ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಟೆಂಪೋ ಟ್ರಾವೆಲರ್ ಹಿಂದಿರುಗುವಾಗ ಮಾತೋಡಾ ಪ್ರದೇಶದಲ್ಲಿ ರಸ್ತೆಬದಿಯಲ್ಲಿ ನಿಲ್ಲಿಸಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದೆ.



ವಿಕಲಚೇತನ ರುದ್ರೇಶ್ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸನ್ಮಾನಿಸಿದರು.

ವಿಕಲಚೇತನ ರುದ್ರೇಶ್ ಸನ್ಮಾನಿಸಿದ ಮಾಜಿ ಶಾಸಕ ಎಂಕೆಎಸ್

ಮೈಸೂರು, ನ.3(ಎಸ್‌ಪಿಎನ್)– ಕನ್ನಡ ರಾಜ್ಯೋತ್ಸವ ಅಂಗವಾಗಿ ಸರ್ಕಾರದ ಸವಲತ್ತುಗಳನ್ನು ನಿರಾಕರಿಸಿ, ಸ್ವಾಭಿಮಾನದ ಬದುಕು ಕಟ್ಟಿಕೊಂಡಿರುವ ವಿಕಲಚೇತನ ರುದ್ರೇಶ್ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸೋಮವಾರ ಸನ್ಮಾನಿಸಿದರು.

ಮೈಸೂರಿನ ವಿಶ್ವೇಶ್ವರ ನಗರದ ನಿವಾಸಿ ರುದ್ರೇಶ್ ಹುಟ್ಟಿನಿಂದಲೂ ವಿಕಲಚೇತನರಾಗಿದ್ದು, ಮನೆಯ ಆರ್ಥಿಕ ಪರಿಸ್ಥಿತಿಯೂ ಶೋಚನೀಯವಾಗಿದೆ. ನಾನು ಶಾಸಕನಾಗಿದ್ದಾಗ ಕೆ.ಆರ್.ವಿಧಾನಸಭಾ ಕ್ಷೇತ್ರದ ಮನೆ ಮನೆಗೆ ತೆರಳಿ ನಾಗರಿಕರ ಸಮಸ್ಯೆಗಳನ್ನು ಆಲಿಸುವ ಪರಿಪಾಠವಿತ್ತು.

ಅದರಂತೆ ವಿಶ್ವೇಶ್ವರನಗರದ ರುದ್ರೇಶ್ ರವರ ಮನೆ ಬಳಿ ಹೋದಾಗ ನಿನಗೆ ಅಂಗವೈಕಲ್ಯತೆ ಇದೆ. ಅಂಗವಿಕಲರ ಶಿಷ್ಯ ವೇತನ, ತ್ರಿಚಕ್ರ ವಾಹನ, ಬ್ಯಾಂಕ್ ಸಬ್ಸಿಡಿ ಸಾಲ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಾಲ ಕೊಡಿಸುತ್ತೇನೆ ಎಂದರೂ ಸವಲತ್ತುಗಳ ನಿರಾಕರಿಸಿದರು. ಇವರ ಸ್ವಾಭಿಮಾನ ಬದುಕು ಇತರೆ ಕನ್ನಡಿಗರಿಗೂ ಮಾದರಿಯಾಗಲಿ ಎಂದು ಆಶಿಸಿದ್ದಾರೆ.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ವೀರಶೈವ ಸಮಾಜ ಸೇವಾ ಸಮಿತಿ (ರಿ.),
ಶ್ರೀ ತ್ರ್ಯಂಬಕೇಶ್ವರ ಮಠ, ತೇರಿನ ಬೀದಿ, ತಿ.ನರಸೀಪುರ
ಬಿ.ಎಸ್.ಶಾಂತರಾಜು ಅಧ್ಯಕ್ಷರು
ಎನ್.ಶಿವಪ್ರಸಾದ್ ಉಪಾಧ್ಯಕ್ಷರು
ವೀರೇಶ್ ಪ್ರಧಾನ ಕಾರ್ಯದರ್ಶಿ
ಎಂ.ವೀರೇಶ್ ಸಹ ಕಾರ್ಯದರ್ಶಿ
ಆರ್.ಸಿದ್ದಲಿಂಗಸ್ವಾಮಿ ಖಜಾಂಚಿ
ನಂದೀಶ್ ಸಂಚಾಲಕರು
ತೋಟದಪ್ಪ ಸಿದ್ದಲಿಂಗಸ್ವಾಮಿ ನಿರ್ದೇಶಕರು
ಎನ್.ಸಿ.ಬಸವರಾಜಪ್ಪ ನಿರ್ದೇಶಕರು
ಫ್ಯಾನ್ಸಿ ಮೋಹನ್ ನಿರ್ದೇಶಕರು
ಶೇಖರ್ ನಿರ್ದೇಶಕರು
ಕೆ.ಟಿ.ನಾಗೇಶ್ ನಿರ್ದೇಶಕರು
ಜೆ.ನೂತನ್ ನಿರ್ದೇಶಕರು
ಶ್ರೀ ಕೆ.ಪಿ.ಮಹದೇವಸ್ವಾಮಿ ಯವರ 75ನೇ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಶುಭಕೋರುವವರು
ವೀರಶೈವ ಸಮಾಜ ಸೇವಾ ಸಮಿತಿ (ರಿ.), ಶ್ರೀ ತ್ರ್ಯಂಬಕೇಶ್ವರ ಮಠ, ತೇರಿನ ಬೀದಿ, ತಿ.ನರಸೀಪುರ
4ನೇ ನವಂಬರ್ 2025 * ಮಂಗಳವಾರ * ಬೆಳಗ್ಗೆ:-10:30 ಸ್ಥಳ:- ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಆವರಣ


ಗ್ರಾಮ ವಿದ್ಯೋದಯ ಸಂಘ (ರಿ.), ತಿ.ನರಸೀಪುರ
ಎಸ್.ಎಸ್.ಸಿದ್ಧಾರ್ಥ ಉಪಾಧ್ಯಕ್ಷರು
ಡಿ.ಸೋಮಣ್ಣ ಕೋಶಾಧ್ಯಕ್ಷರು
ಆರ್.ಶಂಕರೇಗೌಡ ಸದಸ್ಯರು
ಶಾಂಭುಮೂರ್ತಿ ಸದಸ್ಯರು
ಎಸ್.ಮಹೇಶ್ ಸದಸ್ಯರು
ಜಿ.ಗೀತಾ ಸದಸ್ಯರು
ಹೆಚ್.ಪಿ.ರಾಜಶೇಖರ್ ಸದಸ್ಯರು
ಎಸ್.ಬಸವರಾಜು ಸದಸ್ಯರು
ಮಹದೇವಪ್ರಸಾದ್ ಸದಸ್ಯರು
ಶ್ರೀ ಎಂ.ಸಿ.ಶಿವಾನಂದಶರ್ಮ ಸ್ಮಾರಕ ಪ್ರವೇಶದ್ವಾರ, ದಾಸೋಹ ಭವನ, ಬಯಲು ರಂಗಮಂದಿರ ಉದ್ಘಾಟನೆ,
ಶ್ರೀ ಕೆ.ಪಿ.ಮಹದೇವಸ್ವಾಮಿಯವರ ಅಮೃತ ಮಹೋತ್ಸವ ಸಮಾರಂಭಕ್ಕೆ ಆಗಮಿಸುವ ಪರಮ ಪೂಜ್ಯರುಗಳು ಹಾಗೂ
ಗಣ್ಯರಿಗೆ ಅಭಿನಂದಿಸಿ ಸ್ವಾಗತಕೋರುವವರು ಗ್ರಾಮ ವಿದ್ಯೋದಯ ಸಂಘದ ಆಡಳಿತ ಮಂಡಳಿ ಸದಸ್ಯರು
4ನೇ ನವಂಬರ್ 2025 * ಮಂಗಳವಾರ * ಬೆಳಗ್ಗೆ:-10:30 ಸ್ಥಳ:- ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಆವರಣ

ಮೈಸೂರು ಮಿತ್ರ

8 ವರ್ಷಗಳ ನಂತರ... ಬೊಮ್ಮೇನಹಳ್ಳಿ ಬಳಿ ವಸತಿ ಬಡಾವಣೆ ಅಭಿವೃದ್ಧಿಗೆ ಮುಂದಾದ ಎಂಡಿಎ

● ಹೊಸ ಬಡಾವಣೆಗೆಂದೇ ಐವರು ಪ್ರತ್ಯೇಕ ಅಧಿಕಾರಿಗಳ ನಿಯೋಜನೆ ● ರೈತರೊಂದಿಗೆ ಮಾತುಕತೆ ನಡೆಸಿ 500 ಎಕರೆ ಪ್ರದೇಶದಲ್ಲಿ 9000 ನಿವೇಶನ ಅಭಿವೃದ್ಧಿಗೆ ಚಿಂತನೆ ● 2017-18 ರಲ್ಲಿ ಆರ್‌ಟಿ ನಗರ, ಲಲಿತಾದ್ರಿ ನಗರದಲ್ಲಿ ನಿವೇಶನ ಹಂಚಿದ್ದೇ ಕಡೆ ● ಮುಡಾ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಸುಮಾರು 35 ವರ್ಷಗಳಿಂದ ಕಾಯುತ್ತಿರುವ 80,000 ಫಲಾನುಭವಿಗಳು



ಮೈಸೂರು, ನ.3 (ಆರ್‌ಕೆ)- ಕಳೆದ 8 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ವು ಕಡೆಗೂ ಹೊಸ ಬಡಾವಣೆ ಅಭಿವೃದ್ಧಿಪಡಿಸಲು ಮುಂದಾಗಿದೆ

ಮೈಸೂರಲ್ಲಿ ಒಂದು ಮುಡಾ ನಿವೇಶನ ಪಡೆದು ಮನೆ ಕಟ್ಟಿ ವಾಸವಿರಬೇಕೆಂಬ ಕನಸು ಕಾಣುತ್ತಾ ಸುಮಾರು 35 ವರ್ಷಗಳಿಂದ ಅರ್ಜಿ ಸಲ್ಲಿಸಿ ಕಾದು ಕುಳಿತಿರುವ 80,000 ಮಂದಿ ಆಕಾಂಕ್ಷಿಗಳ ಪೈಕಿ ಕೆಲವರ ಆಸೆ ಈಡೇರುವ ಮೊದಲೇ ಹಲವರು ಇಹಲೋಕ ತ್ಯಜಿಸಿದ್ದಾರೆ. ಈ ಹಿಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಕಚೇರಿಗೆ ನಿವೇಶನ ಕೋರಿ ಅರ್ಜಿ ಸಲ್ಲಿಸುವಾಗ ನೀಡಿದ್ದ ಭಾವಚಿತ್ರ ಈಗ ಕಂಪ್ಯೂಟರ್‌ನಲ್ಲಿ ಹೋಲಿಕೆಯಾಗದೇ ಅರ್ಜಿದಾರ ನೀವಲ್ಲ ಎಂದು ಸಾಫ್ಟ್‌ವೇರ್ ತಿರಸ್ಕರಿಸುತ್ತಿದೆಯಂತೆ.

ಮೂಲ ಉದ್ದೇಶ ಮರೆತಿದ್ದ ಮುಡಾ: ರೈತರಿಂದ ಭೂಮಿ ಸ್ವಾಧೀನಪಡಿಸಿಕೊಂಡು ಇಲ್ಲವೇ ಪರಸ್ಪರ ಮಾತುಕತೆ ಮೂಲಕ ಅಥವಾ ನೇರವಾಗಿ ಖರೀದಿಸಿಯಾದರೂ ಯೋಜನಾಬದ್ಧವಾಗಿ ವಸತಿ ಬಡಾವಣೆ ನಿರ್ಮಿಸಿ ಅಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್, ಒಳಚರಂಡಿ ಸಂಪರ್ಕ, ಉದ್ಯಾನವನ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ, ರಚಿಸಿದ ವಿವಿಧ ಅಳತೆಯ ನಿವೇಶನಗಳನ್ನು ಯಾವುದೇ ಲಾಭ-ನಷ್ಟವಿಲ್ಲದೆ ಕೈಗೆಟಕುವ ದರದಲ್ಲಿ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ಹಂಚಿಕೆ ಮಾಡುವುದು ಮುಡಾದ ಮೂಲ ಉದ್ದೇಶವಾಗಿತ್ತು.

ಆದರೆ, ಕೇವಲ ನಿವೇಶನ, ಮನೆಗಳಿಗೆ ಖಾತಾ, ಕಂದಾಯ ಮಾಡಿಕೊಡುವುದು, ನಕ್ಷೆ ಅನುಮೋದನೆ, ನಿವೇಶನ ಬಿಡುಗಡೆ, ನಿರಾಕ್ಷೇಪಣಾ ಪತ್ರ, ಕಟ್ಟಡ ಪೂರ್ಣಗೊಂಡ ವರದಿ (CR), ಸಿಡಿ (Correct Dimension Report), ಖಾಸಗಿ ಬಡಾವಣೆಗಳಿಗೆ ನಕ್ಷೆ ಅನುಮೋದನೆ ನೀಡುವುದಕ್ಕಷ್ಟೇ ಸೀಮಿತವಾಗಿದ್ದ ಮುಡಾ ತನ್ನ ಮೂಲ ಉದ್ದೇಶವನ್ನು ಈಡೇರಿಸುವಲ್ಲಿ ಆಸಕ್ತಿ ತೋರಿರಲಿಲ್ಲ. ಪರಿಣಾಮ ಸೂರು ನಿರ್ಮಿಸಿಕೊಳ್ಳುವ ಕನಸು ಕಂಡಿದ್ದ ಸಾವಿರಾರು ಮಂದಿ ನಿರಾಶ್ರಿತರು ನಿರಾಸೆಗೊಂಡಿದ್ದಾರೆ.

ಚಿಗುರೊಡೆದ ಕನಸು: ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಹಾಗೂ ಆಯುಕ್ತ ಕೆ.ಆರ್. ರಕ್ಷಿತ್ ಅವರು ಇದೀಗ ಹೊಸ ಬಡಾವಣೆಯೊಂದನ್ನು ಅಭಿವೃದ್ಧಿಪಡಿಸಿ, ಅರ್ಹ ಫಲಾನುಭವಿಗಳಿಗೆ ನಿವೇಶನ ಒದಗಿಸುವ ಯೋಜನೆ ಅನುಷ್ಠಾನಗೊಳಿಸಲು ಮುಂದಾಗಿದ್ದಾರೆ. ಇದರಿಂದಾಗಿ ನಿರಾಸೆಗೊಂಡಿದ್ದ ನಿವೇಶನಾಕಾಂಕ್ಷಿಗಳಲ್ಲಿ ಕಮರಿದ್ದ ಕನಸು ಚಿಗುರೊಡೆಯುತ್ತಿದೆ. ಈಗಲಾದರೂ ಒಂದು ನಿವೇಶನ ದಕ್ಕಿಸಿಕೊಂಡು ಮನೆಕಟ್ಟಿ ಸ್ವಾಭಿಮಾನದಿಂದ ಬದುಕಬಹುದೆಂಬ ವಿಶ್ವಾಸ ಅರ್ಜಿದಾರರಲ್ಲಿ ಮೂಡುತ್ತಿದೆ.

ಬೊಮ್ಮೇನಹಳ್ಳಿಯಲ್ಲಿ ಯೋಜನೆ: ಮೈಸೂರು ತಾಲೂಕು ಇಲವಾಲ ಹೋಬಳಿ, ನಾಗವಾಲ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬೊಮ್ಮೇನಹಳ್ಳಿ ಗ್ರಾಮದ ಬಳಿ (ಮೈಸೂರಿನಿಂದ ಸುಮಾರು 15 ಕಿ.ಮೀ) ಪ್ರಾಧಿಕಾರದಿಂದ ಹೊಸ ವಸತಿ ಬಡಾವಣೆ ನಿರ್ಮಿಸಲು ಸ್ಥಳ ಗುರುತಿಸಲಾಗಿದ್ದು 500 ಎಕರೆ ಭೂಮಿಯಲ್ಲಿ ವಿವಿಧ ಅಳತೆಯ 9000 ನಿವೇಶನಗಳನ್ನು ರಚಿಸಲು ಯೋಜನೆ ಸಿದ್ಧಪಡಿಸಲಾಗುತ್ತಿದೆ. ಖಾಸಗಿ ಡೆವಲಪರ್‌ಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು ಈಗಾಗಲೇ ಮೈಸೂರಿಗೆ ಹೊಂದಿಕೊಂಡಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರೈತರ ಭೂಮಿ ಖರೀದಿಸಿ ಬಡಾವಣೆ ಹಾಗೂ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿರುವುದರಿಂದ ಪ್ರಾಧಿಕಾರದ ಯೋಜನೆಗಳಿಗೆ ಭೂಮಿ ಲಭ್ಯವಾಗದಿರುವುದು ಸಹ ಮುಡಾ ಬಡಾವಣೆ ಯೋಜನೆ ನನೆಗುದಿಗೆ ಬೀಳಲು ಕಾರಣವಾಗಿತ್ತು.

ಪ್ರತ್ಯೇಕ ಅಧಿಕಾರಿಗಳ ನಿಯೋಜನೆ: ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್, ಬೊಮ್ಮೇನಹಳ್ಳಿ ವಸತಿ ಬಡಾವಣೆ ಯೋಜನೆಗೆ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದು, ಭೂ ಉಪಯೋಗ ಬದಲಾವಣೆ (Change of Land Use), ಭೂ ಪರಿವರ್ತನೆ (Alienation), ನಕ್ಷೆ ತಯಾರಿಕೆ ಸೇರಿದಂತೆ ವಸತಿ ಬಡಾವಣೆಗಷ್ಟೇ ಮೀಸಲಿರಿಸಿ ಐವರು ಅಧಿಕಾರಿಗಳ ತಂಡವನ್ನು ನಿಯೋಜಿಸಿದ್ದಾರೆ. ಈ ಕುರಿತು ಅಕ್ಟೋಬರ್ 29 ರಂದು ಅಧಿಕೃತ ಜ್ಞಾಪನ ಹೊರಡಿಸಿರುವ ಅವರು ಎಂಡಿಎ ವಿಶೇಷ ತಹಶೀಲ್ದಾರ್ ಕೆ.ವಿ. ರಾಜಶೇಖರ್, ಕಚೇರಿ ವ್ಯವಸ್ಥಾಪಕ ಎಂ.ಕೆ. ಭರತ್ ಕುಮಾರ್, ವಿಶೇಷ ರಾಜಸ್ವ ನಿರೀಕ್ಷಕ ಬಿ.ಎಂ. ರಾಘವೇಂದ್ರ ನಾಯಕ, ಭೂಮಾಪಕ ಹನುಮೇಗೌಡ ಹಾಗೂ ದ್ವಿತೀಯ ದರ್ಜೆ ಸಹಾಯಕ ಎಂ.ಎಸ್.ನಂದೀಶ್ ಅವರನ್ನು ಬೊಮ್ಮೇನಹಳ್ಳಿ ವಸತಿ ಯೋಜನೆ ರೂಪಿಸಲು ನಿಯೋಜನೆ ಮಾಡಿದ್ದಾರೆ.

ಈ ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಹೊರತುಪಡಿಸಿ ಪ್ರಾಧಿಕಾರದ ಬೇರೆ ಯಾವುದೇ ಕೆಲಸವನ್ನು ಮಾಡುವಂತಿಲ್ಲ. ನಿತ್ಯ ಗ್ರಾಮಕ್ಕೆ ತೆರಳಿ ರೈತರೊಂದಿಗೆ ಸಮಾಲೋಚನೆ ನಡೆಸುವುದು, ಯೋಜನೆ ಬಗ್ಗೆ ಪೂರ್ಣ ಮಾಹಿತಿ ನೀಡುವುದು, ಭೂಮಿ ವಶಪಡಿಸಿಕೊಳ್ಳುವ ಬಗ್ಗೆ ಅಥವಾ ಖರೀದಿ ಕುರಿತು ವಸ್ತುನಿಷ್ಠ ಮಾಹಿತಿಯನ್ನು ತಿಳಿಹೇಳಿ ರೈತರಿಗೂ ಅನುಕೂಲವಾಗುವಂತೆ ಮತ್ತು ಪ್ರಾಧಿಕಾರಕ್ಕೆ ಬಡಾವಣೆ ಮಾಡಲು ಭೂಮಿ ಲಭ್ಯವಾಗುವಂತೆ ಮಾಡುವುದು ಅವರ ಪ್ರಮುಖ ಕರ್ತವ್ಯವಾಗಿದೆ.

ಭೂಮಿ ಖರೀದಿ: ಪರಸ್ಪರ ಸಮಾಲೋಚನೆ ಮೂಲಕ ಸಮ್ಮತಿ ಪಡೆದು ಶೇಕಡಾ 50:50 ಅನುಪಾತದಲ್ಲಿ ರೈತರ ಭೂಮಿಯನ್ನು ತೆಗೆದುಕೊಳ್ಳುವುದು. ಒಂದು ವೇಳೆ ಸಾಧ್ಯವಾಗದಿದ್ದರೆ, ರೈತರಿಂದ ನೇರವಾಗಿ ಪ್ರಸಕ್ತ ಮಾರುಕಟ್ಟೆ ಬೆಲೆ ಕೊಟ್ಟು ಭೂಮಿ ಖರೀದಿಸುವುದು ಹಾಗೂ ಪೂರಕ ಪ್ರಕ್ರಿಯೆಯನ್ನು ಈ ಅಧಿಕಾರಿಗಳ ತಂಡವು ಈಗಾಗಲೇ ಆರಂಭಿಸಿದ್ದು, ನಾಳೆ ಮಂಗಳವಾರ ಬೊಮ್ಮೇನಹಳ್ಳಿ ಗ್ರಾಮಕ್ಕೆ ತೆರಳಲಿರುವ ಅಧಿಕಾರಿಗಳು ಭೂ ಮಾಲೀಕರೊಂದಿಗೆ ಮೊದಲ ಸುತ್ತಿನ ಮಾತುಕತೆ ನಡೆಸಲಿದ್ದಾರೆ.

ಆರ್‌ಟಿ ನಗರವೇ ಕಡೆ: ಈ ಹಿಂದೆ 2017-18ನೇ ಸಾಲಿನಲ್ಲಿ ಡಿ. ಧ್ರುವಕುಮಾರ್ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ವೇಳೆ 219 ಎಕರೆ ಪ್ರದೇಶದಲ್ಲಿ ರವೀಂದ್ರನಾಥ ಠಾಗೂರ್ ನಗರ (ಆರ್‌ಟಿ ನಗರ) ಅಭಿವೃದ್ಧಿಪಡಿಸಿ, 2,250 ನಿವೇಶನ ಹಾಗೂ ಲಲಿತಾದ್ರಿನಗರ (ಉತ್ತರ)ದಲ್ಲಿ ಸುಮಾರು 45 ಎಕರೆ ಪ್ರದೇಶದಲ್ಲಿ 500 ನಿವೇಶನಗಳನ್ನು ಅಭಿವೃದ್ಧಿಪಡಿಸಿ ಹಂಚಿದ್ದನ್ನು ಹೊರತುಪಡಿಸಿದರೆ ಕಳೆದ 8 ವರ್ಷದಿಂದೀಚೆಗೆ ಪ್ರಾಧಿಕಾರದ ವತಿಯಿಂದ ಯಾವುದೇ ಬಡಾವಣೆಯನ್ನು ಅಭಿವೃದ್ಧಿಪಡಿಸಿಲ್ಲ.

ಜಾಗ ನೀಡಿದರೆ ಹೆಚ್ಚುವರಿ ವಿದ್ಯುತ್ ಉಪಕೇಂದ್ರ ಸ್ಥಾಪನೆ: ಸಚಿವ ಕೆ.ಜೆ.ಜಾರ್ಜ್



ಹಾಸನ, ನ.3- ಸಮರ್ಪಕ ವಿದ್ಯುತ್ ಪೂರೈಕೆಗೆ ಈಗಾಗಲೇ 100 ಸಬ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಸೂಕ್ತ ಜಾಗ ನೀಡಿದರೆ ಇನ್ನಷ್ಟು ಸಬ್‌ಸ್ಟೇಷನ್‌ಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

ಕೆಪಿಟಿಸಿಎಲ್ ವತಿಯಿಂದ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಕಸಬಾ ಹೋಬಳಿ, ಸೂಳೆಕೆರೆ(ಆಗ್ಗುಂದ) ಗ್ರಾಮದಲ್ಲಿ ನಿರ್ಮಿಸಿರುವ 110/11ಕೆವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ ಸತತ 7 ಗಂಟೆ ವಿದ್ಯುತ್ ಪೂರೈಸುವ ಉದ್ದೇಶದಿಂದ ಕುಸುಮ್- ಸಿ ಯೋಜನೆಯಡಿ ಕೃಷಿ ಫೀಡರ್‌ಗಳ ಸೌರೀಕರಣ ಮಾಡಲಾಗುತ್ತಿದೆ. ಈ ಯೋಜನೆಯಡಿ ಈಗಾಗಲೇ ರಾಜ್ಯದಲ್ಲಿ 2,400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಕ್ರಮ ವಹಿಸಲಾಗಿದೆ. ಇದಕ್ಕಾಗಿ ಖಾಸಗಿಯವರು 10 ಸಾವಿರ ಕೋಟಿ ರೂ. ಹೂಡಿಕೆ ಮಾಡುತ್ತಿದ್ದಾರೆ. ಈ ಯೋಜನೆ ಪೂರ್ಣಗೊಂಡರೆ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಸಮಸ್ಯೆ ಬಹುತೇಕ ಬಗೆಹರಿಯಲಿದೆ ಎಂದು ಹೇಳಿದರು.

ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿ, ಅರಸೀಕರೆ ಬರಡು ಭೂಮಿ ಎಂದು ಹೇಳಲಾಗುತ್ತಿತ್ತು. ಆದರೆ, ಹಲವು ಯೋಜನೆಗಳ ಮೂಲಕ ತಾಲೂಕಿನ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದೆ ಎಂದರು. ಸಮಾರಂಭದಲ್ಲಿ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಲತಾ ಕುಮಾರಿ, ದುಮ್ಮೇನಹಳ್ಳಿ ಗ್ರಾಪಂ ಅಧ್ಯಕ್ಷ ಎ.ಎಂ. ಅಜ್ಜಯ್ಯ, ಆಗ್ಗುಂದ ಗ್ರಾಪಂ ಅಧ್ಯಕ್ಷೆ ಕವಿತಾ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಶೇಖರ್, ಕೆಪಿಟಿಸಿಎಲ್ ಮುಖ್ಯ ಅಧೀಕ್ಷಕ ಇಂಜಿನಿಯರ್ ಸತೀಶ್ ಚಂದ್ರ, ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್ ಇತರರಿದ್ದರು.

ಕ್ರಿಕೆಟ್ ಪಂದ್ಯಾವಳಿ



ಕನ್ನಡ ರಾಜ್ಯೋತ್ಸವದ ಅಂಗವಾಗಿ ಮಂಚೇಗೌಡನ ಕೊಪ್ಪಲು ಎಂಜಿಕೆ ಯೂತ್ಸ್ ಏರ್ಪಡಿಸಿದ್ದ ಕ್ರಿಕೆಟ್ ಪಂದ್ಯಾವಳಿಯ ಉದ್ಘಾಟನಾ ಸಮಾರಂಭದಲ್ಲಿ ರವಿ ಮಂಚೇಗೌಡನ ಕೊಪ್ಪಲು, ಪ್ರೇಮಾ ಶಂಕರೇಗೌಡ, ಪುನೀತ್, ಡೆಲ್ಲಿ ರವಿ, ಶ್ರೀಧರ್ ಬಾಬು ಆಟಗಾರರಿಗೆ ಶುಭ ಹಾರೈಸಿದರು

ರೇಣುಕಾಸ್ವಾಮಿ ಮರ್ಮಾಂಗಕ್ಕೆ ಒದ್ದು ಕೊಲೆ

ದರ್ಶನ್ ಮತ್ತವರ ಗ್ಯಾಂಗ್ ವಿರುದ್ಧ ದೋಷಾರೋಪಣೆ ನಿಗದಿ



ಬೆಂಗಳೂರು, ನ.3- ತನ್ನ ಅಭಿಮಾನಿ ಚಿತ್ರದುರ್ಗದ ರೇಣುಕಾಸ್ವಾಮಿಯನ್ನು ಅಪಹರಿಸಿ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ 64ನೇ ಸೆಷನ್ಸ್ ನ್ಯಾಯಾಲಯ ಸೋಮವಾರ ನಟ ದರ್ಶನ್, ಪವಿತ್ರಾ ಗೌಡ ಮತ್ತು ಇತರ 15 ಜನರ ವಿರುದ್ಧ ಹತ್ಯೆ, ಕ್ರಿಮಿನಲ್ ಪಿತೂರಿ, ಅಪಹರಣ ಮತ್ತು ಕಾನೂನುಬಾಹಿರ ಸಭೆ ಆರೋಪಗಳನ್ನು ಹೊರಿಸಿದೆ. ಆದರೆ ಎಲ್ಲಾ 17 ಆರೋಪಿಗಳು ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದಾರೆ. ಹೀಗಾಗಿ ಕೋರ್ಟ್ ವಿಚಾರಣೆಯನ್ನು ನವೆಂಬರ್ 10ಕ್ಕೆ ಮುಂದೂಡಿದೆ.

ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಎಲ್ಲಾ ಆರೋಪಿಗಳನ್ನು ಇಂದು ಕೋರ್ಟ್‌ಗೆ ಹಾಜರುಪಡಿಸಲಾಯಿತು. ಕೋರ್ಟ್ ಹಾಲ್‌ನಲ್ಲಿ ಅನೇಕ ವಕೀಲರು ಹಾಗೂ ಜನ ಕಿಕ್ಕಿರಿದಿದ್ದರು. ಜನದಟ್ಟಣೆಯನ್ನು ನೋಡಿ ನಕ್ಕ ನ್ಯಾಯಾಧೀಶ ಐಪಿ ನಾಯಕ್ ಅವರು, ಕೇಸ್‌ಗೆ ಸಂಬಂಧ ಇರದ ಎಲ್ಲರೂ ಹೊರಗೆ ಹೋಗುವಂತೆ ಸೂಚಿಸಿದರು.

ಇಲ್ಲಿ ಇಷ್ಟೊಂದು ಜನರ ನಡುವೆ ಆರೋಪಗಳನ್ನು ಹೊರಿಸಲು ಹೇಗೆ ಸಾಧ್ಯ? ಪ್ರಕರಣಕ್ಕೆ ಸಂಬಂಧಿಸದ ವಕೀಲರು ಹೊರಗೆ ಹೋಗಬೇಕು ಸೂಚಿಸಿದರು. ಇಲ್ಲದಿದ್ದರೆ ವಿಚಾರಣೆಯನ್ನು ಮುಂದೂಡಲಾಗುವುದು ಎಂದು ಎಚ್ಚರಿಸಿದರು. ಆದರೂ ಕೂಡ ಗದ್ದಲ ನಿಲ್ಲಲಿಲ್ಲ. ಬಳಿಕ ಮುಚ್ಚಿದ ಕೊಠಡಿಯಲ್ಲಿ ವಿಚಾರಣೆ ನಡೆಸಲಾಯಿತು.

ಪ್ರಮುಖ ಆರೋಪಿ ಪವಿತ್ರಾ ಗೌಡಗೆ ನ್ಯಾಯಾಧೀಶರು ಒಂದಷ್ಟು ಪ್ರಶ್ನೆಗಳನ್ನು ಕೇಳಿದರು. ಕೊಲೆ, ಅಪಹರಣ, ಸಾಕ್ಷಿ ನಾಶ, ಅಕ್ರಮ ಕೂಟ, ಕ್ರಿಮಿನಲ್ ಒಳಸಂಚು ಸೇರಿದಂತೆ ಹಲವು ಆರೋಪಗಳನ್ನು ದರ್ಶನ್ ಮೇಲೆ ಹೊರಿಸಲಾಗಿದೆ. ನ್ಯಾಯಾಧೀಶರು ಎಲ್ಲ ಆರೋಪಿಗಳ ಎದುರು ದೋಷಾರೋಪಗಳನ್ನು ಓದಿ ಹೇಳಿದರು.

ನ್ಯಾಯಾಧೀಶರು ಮೊದಲ ಆರೋಪಿ ಪವಿತ್ರಾ ಗೌಡ ವಿರುದ್ಧದ ಆರೋಪಗಳನ್ನು ಓದಲು ಪ್ರಾರಂಭಿಸಿದರು. ರೇಣುಕಾಸ್ವಾಮಿ, ಆರೋಪಿ ಪವಿತ್ರಾಗೌಡ ಅವರಿಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದಾರೆಂದು ಹೇಳಲಾಗಿದ್ದು, ನಂತರ ಅವರನ್ನು ಅಪಹರಿಸಿ, ಬೆಂಗಳೂರಿನ ಶೆಡ್‌ಗೆ ಕರೆದೊಯ್ದು ಹಲ್ಲೆ ಮಾಡಲಾಗಿದೆ. ಆರೋಪಿ ಚಪ್ಪಲಿ ಮತ್ತು ಮರದ ಹಲಗೆಯಿಂದ ಹೊಡೆದು ಮಾರಣಾಂತಿಕ ಗಾಯಗಳನ್ನು ಮಾಡಿದರು ಎಂದು ನ್ಯಾಯಾಧೀಶರು ಗಟ್ಟಿಯಾಗಿ ಓದಿದರು.

ದೋಷಾರೋಪಗಳ ಪ್ರಕಾರ ಪವಿತ್ರ ರೇಣುಕಾಸ್ವಾಮಿಗೆ ಚಪ್ಪಲಿಯಿಂದ ಹೊಡೆದರೆ, ದರ್ಶನ್, ರೇಣುಕಾಸ್ವಾಮಿಯ ಪ್ಯಾಂಟ್ ತೆಗೆದು ಖಾಸಗಿ ಭಾಗಕ್ಕೆ ಒದ್ದರು. ಗಂಭೀರ ಹಲ್ಲೆಯಿಂದ ರೇಣುಕಾಸ್ವಾಮಿ ಸಾವನ್ನಪ್ಪಿದ್ದಾರೆ ಎಂದು ಆರೋಪಿಸಲಾಗಿದೆ.

ಎಲ್ಲಾ ಆರೋಪ ನಿರಾಕರಣೆ ನ.10ಕ್ಕೆ ಸಾಕ್ಷಿಗಳ ವಿಚಾರಣೆಗೆ ದಿನಾಂಕ ನಿಗದಿ

ಬೆಂಗಳೂರು, ನ.3- ದರ್ಶನ್, ಪವಿತ್ರಾ ಗೌಡ ಸೇರಿದಂತೆ ಎಲ್ಲಾ ಆರೋಪಿಗಳು ಕೂಡ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದಾರೆ. ಹಾಗಾಗಿ ಮುಂದಿನ ಹಂತದ ಸಾಕ್ಷಿಗಳ ವಿಚಾರಣೆಗೆ ನ್ಯಾಯಾಲಯ ನ.10ರಂದು ವಿಚಾರಣೆಗೆ ದಿನಾಂಕ ನಿಗದಿ ಆಗಿದೆ.

ಇದು ಹೈಪ್ರೊಫೈಲ್ ಕೇಸ್ ಆದ್ದರಿಂದ ಕೋರ್ಟ್ ಹಾಲ್‌ನಲ್ಲಿ ಅನೇಕ ವಕೀಲರು ಕಿಕ್ಕಿರಿದಿದ್ದರು. ಜನದಟ್ಟಣೆಯನ್ನು ನೋಡಿ ನ್ಯಾಯಾಧೀಶರು ನಕ್ಕರು. ಕೇಸ್‌ಗೆ ಸಂಬಂಧ ಇರದ ಎಲ್ಲರೂ ಹೊರಗೆ ಹೋಗುವಂತೆ ಸೂಚಿಸಲಾಯಿತು. ಆದರೂ ಕೂಡ ಗದ್ದಲ ನಿಲ್ಲಲಿಲ್ಲ. ಬಳಿಕ ಮುಚ್ಚಿದ ಕೊಠಡಿಯಲ್ಲಿ ವಿಚಾರಣೆ ನಡೆಸಲು ಜಡ್ಜ್ ನಿರ್ಧರಿಸಿದರು. ಜನರನ್ನು ಕದಲಿಸಿದ ನಂತರ ದೋಷಾರೋಪಣೆ ನಿಗದಿ ಪ್ರಕ್ರಿಯೆ ಆರಂಭ ಮಾಡಲಾಯಿತು.

ಎಲ್ಲಾ ಆರೋಪಿಗಳ ಎದುರು ದೋಷಾರೋಪಗಳನ್ನು ಓದಿ ಹೇಳಲಾಯಿತು. ಆರೋಪ ಒಪ್ಪಿಕೊಂಡರೆ ಶಿಕ್ಷೆ ಪ್ರಕಟ ಆಗುತ್ತಿತ್ತು. ಆರೋಪಗಳನ್ನು ಒಪ್ಪಿಕೊಳ್ಳದ ಕಾರಣ ಸಾಕ್ಷ್ಯಗಳ ವಿಚಾರಣೆಗೆ ದಿನಾಂಕ ನಿಗದಿ ಆಗಿದೆ.

ಅನಿಲ್ ಅಂಬಾನಿಯ 3 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಇಡಿ ಮುಟ್ಟುಗೋಲು



ನವದೆಹಲಿ, ನ.3- ಜಾರಿ ನಿರ್ದೇಶನಾಲಯ (ಇಡಿ) ಅನಿಲ್ ಅಂಬಾನಿ ಅವರ ರಿಲಯನ್ಸ್ ಗ್ರೂಪ್‌ಗೆ ಸೇರಿದ 3,000 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಇದರಲ್ಲಿ ಅವರ ಪಾಲಿ ಹಿಲ್ ನಿವಾಸ ಮತ್ತು ಪ್ರಮುಖ ಭಾರತೀಯ ನಗರಗಳಲ್ಲಿರುವ ಹಲವಾರು ಆಸ್ತಿಗಳು ಸೇರಿವೆ.

ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಗ್ರೂಪ್‌ಗೆ ಸಂಬಂಧಿಸಿದ ಸುಮಾರು 3,084 ಕೋಟಿ ರೂ.ಮೌಲ್ಯದ ಆಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇಡಿ ತಿಳಿಸಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್ 5(1) ರ ಅಡಿಯಲ್ಲಿ ಶುಕ್ರವಾರ ಮುಟ್ಟುಗೋಲು ಆದೇಶ ಹೊರಡಿಸಲಾಗಿದ್ದು, ನಂತರ ದೆಹಲಿ, ನೋಯ್ಡಾ, ಘಾಜಿಯಾಬಾದ್, ಮುಂಬೈ, ಪುಣೆ, ಥಾಣೆ, ಹೈದರಾಬಾದ್, ಚೆನ್ನೈ, ಕಾಂಚೀಪುರಂ ಮತ್ತು ಪೂರ್ವ ಗೋದಾವರಿಯಲ್ಲಿನ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆ.

ಈ ಪ್ರಕರಣವು ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್ ಮತ್ತು ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಲಿಮಿಟೆಡ್‌ಗೆ ಸಂಬಂಧಿಸಿದ ಸಾರ್ವಜನಿಕ ಹಣ ಡೈವರ್ಟ್ ಮತ್ತು ಅಕ್ರಮ ವರ್ಗಾವಣೆಗೆ ಸಂಬಂಧಿಸಿದೆ.

ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್ (ಆರ್‌ಎಚ್‌ಎಫ್‌ಎಲ್) ಮತ್ತು ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಲಿಮಿಟೆಡ್ (ಆರ್‌ಸಿಎಫ್‌ಎಲ್) ಮೂಲಕ ಸಂಗ್ರಹಿಸಲಾದ ಸಾರ್ವಜನಿಕರ ಹಣವನ್ನು ಬೇರೆಡೆಗೆ ವರ್ಗಾಯಿಸಿ, ಅಕ್ರಮವಾಗಿ ಬಳಸಲಾಗಿದೆ ಎಂಬುದು ಈ ಪ್ರಕರಣದ ಪ್ರಮುಖ ಆರೋಪವಾಗಿದೆ.

ಕೇಂದ್ರದ ಮಾದರಿಯಲ್ಲಿ ರಾಜ್ಯದಲ್ಲೂ ಜಲ ಆಯೋಗ: ಡಿಸಿಎಂ ಡಿ.ಕೆ ಶಿವಕುಮಾರ್



ಬೆಂಗಳೂರು, ನ.3- ಅಂತರರಾಜ್ಯ ಜಲ ವಿವಾದಗಳಿಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವುದು ಸೇರಿದಂತೆ ಜಲ ಸಂಪನ್ಮೂಲ ನಿರ್ವಹಣೆಯ ವಿವಿಧ ಅಂಶಗಳ ಕುರಿತು ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ನೀಡಲು ಕೇಂದ್ರ ಮಾದರಿಯಲ್ಲೇ ರಾಜ್ಯದಲ್ಲೂ ಜಲ ಆಯೋಗ ಅಸ್ತಿತ್ವಕ್ಕೆ ಬರಲಿದೆ ಎಂದು ಜಲಸಂಪನ್ಮೂಲ ಖಾತೆಯನ್ನು ಹೊಂದಿರುವ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಭಾನುವಾರ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ನೀರಿನ ಲಭ್ಯತೆ, ಭವಿಷ್ಯದ ಅವಶ್ಯಕತೆಗಳು, ದಕ್ಷ ನಿರ್ವಹಣೆ ಕುರಿತು ವೈಜ್ಞಾನಿಕ ಅಧ್ಯಯನಗಳನ್ನು ನಡೆಸಲು ಮತ್ತು ಸರ್ಕಾರಕ್ಕೆ ಕ್ರಮಗಳನ್ನು ಸೂಚಿಸಲು ಜಲ ಸಂಪನ್ಮೂಲ, ಕೃಷಿ, ತೋಟಗಾರಿಕೆ ಮತ್ತು ಹಣಕಾಸು ಇಲಾಖೆಗಳ ಅಧಿಕಾರಿಗಳು ಮತ್ತು ಜಲಶಾಸ್ತ್ರಜ್ಞರು, ಪರಿಸರವಾದಿಗಳು, ಪ್ರಗತಿಪರ ರೈತರು ಮತ್ತು ಇತರ ತಜ್ಞರನ್ನು ಒಳಗೊಂಡ ಶಾಶ್ವತ ಆಯೋಗವನ್ನು ಹೊಂದುವುದು ಇದರ ಉದ್ದೇಶವಾಗಿದೆ ಎಂದು ಹೇಳಿದರು.

ಪ್ರಸ್ತಾವಿತ ಆಯೋಗವು ಕುಡಿಯುವ ನೀರು, ನೀರಾವರಿ, ಕೈಗಾರಿಕೆಗಳಿಗೆ ನೀರು ಒದಗಿಸುವುದು ಮತ್ತು ಇತರ ಸೌಲಭ್ಯಗಳು ಸೇರಿದಂತೆ ಎಲ್ಲಾ ಅಂಶಗಳನ್ನು ಪರಿಶೀಲಿಸುತ್ತದೆ. ನಗರಗಳ ಬೆಳವಣಿಗೆ ಮತ್ತು ಜನಸಂಖ್ಯೆಯ ವಲಸೆಯನ್ನು ಗಣನೆಗೆ ತೆಗೆದುಕೊಂಡು, ಮುಂದಿನ 50 ವರ್ಷಗಳ ನೀರಿನ ಅವಶ್ಯಕತೆಗಳ ಕುರಿತು ಅಧ್ಯಯನ ನಡೆಸಲಿದೆ. ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಈ ಅವಶ್ಯಕತೆಗಳನ್ನು ಪೂರೈಸಲು ಕ್ರಮಗಳನ್ನು ಸೂಚಿಸಲಿದೆ. ಇತರ ಅಂಶಗಳ ಜೊತೆಗೆ, ಆಯೋಗವು ರಾಜ್ಯ ಮತ್ತು ಇತರ ದೇಶಗಳಲ್ಲಿನ ನೀರಾವರಿ ಮಾದರಿಗಳನ್ನು ಸಹ ನೋಡುತ್ತದೆ ಮತ್ತು ಉತ್ತಮವಾದುದನ್ನು ಶಿಫಾರಸು ಮಾಡುತ್ತದೆ ಎಂದು ತಿಳಿಸಿದರು.

ಮಹಿಳೆಯರ ಸಾಧನೆ ಸಂಭ್ರಮಿಸುವವರೇ ಪುರುಷರು

● ಕನ್ನಡ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಸಿ.ಜಿ.ಉಷಾದೇವಿ ಅಭಿಮತ ● ಅಕ್ಕ ಮಹಾದೇವಿ ಅಧ್ಯಾತ್ಮಿಕ ಸಾಧನೆಗೆ ಮಾರು ಹೋದವರು ಬಸವಣ್ಣ, ಅಲ್ಲಮ ಪ್ರಭು



ಕಾರ್ತಿಕ ಮಾಸದ ಅಂಗವಾಗಿ ಏರ್ಪಡಿಸಿದ್ದ ಶರಣ-ಶರಣೆಯರ ವಿಚಾರ ಧಾರೆಗಳು ವಿಶೇಷ ಉಪನ್ಯಾಸದಲ್ಲಿ ಕನ್ನಡ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಸಿ.ಜಿ.ಉಷಾದೇವಿ ಮಾತನಾಡಿದರು.

ಮೈಸೂರು, ನ.3(ಎಸ್‌ಪಿಎನ್)- ಮಹಿಳಾ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಮಹಿಳಾ ಆಟಗಾರರ ಸಾಧನೆಯನ್ನು ಸಂಭ್ರಮಿಸಿದ್ದು ಪುರುಷ ಕ್ರೀಡಾ ರಸಿಕರು. ಹಾಗಾಗಿ ಮಹಿಳಾ ಕ್ರಿಕೆಟ್‌ಗೆ ಜಗತ್ತಿನಲ್ಲೇ ವಿಶೇಷ ಮನ್ನಣೆ ದೊರೆಯಲು ಕಾರಣವಾಯಿತು ಎಂದು ನಿವೃತ್ತ ಕನ್ನಡ ಪ್ರಾಧ್ಯಾಪಕಿ ಪ್ರೊ.ಸಿ. ಜಿ.ಉಷಾದೇವಿ ಅಭಿಪ್ರಾಯಪಟ್ಟರು.

ಮೈಸೂರು ಹೊಸಮಠದ ನಟರಾಜ ಕಲ್ಯಾಣಮಂಟಪದಲ್ಲಿ ಕಾರ್ತಿಕ ಮಾಸದ ಎರಡನೇ ಸೋಮವಾರದ ಅಂಗವಾಗಿ ಏರ್ಪಡಿಸಿದ್ದ ಶರಣ-ಶರಣೆಯರ ವಿಚಾರ ಧಾರೆಗಳು ವಿಶೇಷ ಉಪನ್ಯಾಸದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಹನ್ನೆರಡನೇ ಶತಮಾನದ ಅಕ್ಕಮಹಾದೇವಿ ಅವರ ಆಧ್ಯಾತ್ಮಿಕ ಸಾಧನೆಯನ್ನು ಗುರುತಿಸಿದ್ದು ಅಣ್ಣ ಬಸವಣ್ಣ, ಅಲ್ಲಮ ಪ್ರಭು ಸೇರಿದಂತೆ ಇತರೆ ಶರಣರು ಎಂದು ಅಭಿಪ್ರಾಯಪಟ್ಟರು.

ಹನ್ನೆರಡನೇ ಶತಮಾನದಲ್ಲಿ ಅಕ್ಕ ಮಹಾದೇವಿ ತನ್ನ ಇಷ್ಟದ ದೈವ ಚೆನ್ನ ಮಲ್ಲಿಕಾರ್ಜುನನನ್ನು ಒಲಿಸಿಕೊಳ್ಳಲು ಬಾಹ್ಯ ಜಗತ್ತಿನ ವ್ಯಾಮೋಹ ತ್ಯಜಿಸಿ, ಲೋಕ ಸಂಚಾರ ಮಾಡಿ, ಅನುಭವ ಮಂಟಪಕ್ಕೆ ಬಂದಾಗ ಈ ತ್ಯಾಗದ ಮನೋಭಾವವನ್ನು ಗುರುತಿಸಿದ ಅಣ್ಣ ಬಸವಣ್ಣ, ಅಲ್ಲಮಪ್ರಭು ಸೇರಿದಂತೆ ಇತರೆ ಪುರುಷ ಶರಣರು. ಹಾಗಾಗಿ ಅಕ್ಕನ ಸಾಧನೆ ಗುರುತಿಸಿ ಇಂದಿಗೂ ಪ್ರಸ್ತುತರಾಗುತ್ತಿದ್ದಾರೆ ಎಂದರು.

ಅದೇ ಮಹಿಳಾ ವಚನಗಾರ್ತಿಯರು, ಅಕ್ಕ ಮಹಾದೇವಿ ಆಧ್ಯಾತ್ಮಿಕ ಸಾಧನೆ ಕುರಿತು ಒಂದಿಬ್ಬರು ಬಿಟ್ಟರೆ, ಬೇರೆ ಯಾರೂ ಗುರುತಿಸಿಲ್ಲ. ಇದು ಏಕೆ ಎಂಬುದನ್ನು ಸಂಶೋಧನೆಯಿಂದ ಹೊರ ಬೇಕಿದೆ. ಅದೇ ರೀತಿ ಭಾನುವಾರ ನಡೆದ ಮಹಿಳಾ ವಿಶ್ವಕಪ್‌ನಲ್ಲಿ ಫೈನಲ್‌ನಲ್ಲಿ ಗೆದ್ದದ್ದು ಮಹಿಳಾ ಆಟಗಾರರಾದರೂ ಆ ಸಂತೋಷವನ್ನು ಮಾಧ್ಯಮಗಳ ಮೂಲಕ ಹಂಚಿಕೊಂಡಿದ್ದು, ವಿವಿಧ ಹುದ್ದೆಯಲ್ಲಿರುವ ಪುರುಷರೇ ಹೊರತು ಮಹಿಳಾ ಸಾಧಕರ್ಯಾರು ಪ್ರತಿಕ್ರಿಯೆ ನೀಡಿಲ್ಲ ಎಂದು ಬೇಸರ ಹೊರಹಾಕಿದರು.

ಈ ವೇಳೆ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ನಂಜನಗೂಡು ಹುಲ್ಲಹಳ್ಳಿ ವಿರಕ್ತ ಮಠದ ಶ್ರೀ ಇಮ್ಮಡಿ ಚನ್ನಮಲ್ಲದೇಶಿಕೇಂದ್ರ ಸ್ವಾಮೀಜಿ, ಹೊಸಮಠದ ಕಿರಿಯ ಶ್ರೀಗಳಾದ ಸಿದ್ದಬಸವಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಶಿವರಾಜಪ್ಪ ಉಪಸ್ಥಿತರಿದ್ದರು. ಚೂಡಾಮಣಿ ಪ್ರಾರ್ಥಿಸಿದರೆ, ನಟರಾಜ ಬಾಲಕಿಯರ ಪಿಯು ಕಾಲೇಜಿನ ಪ್ರಾಂಶುಪಾಲೆ ವಿ.ಡಿ.ಸುನೀತಾರಾಣಿ ಸ್ವಾಗತಿಸಿದರು. ಉಪನ್ಯಾಸಕಿ ಎಚ್. ಬಿ.ವಿಮಲಜ್ಯೋತಿ ನಿರೂಪಿಸಿದರು.

ಶ್ರೀ ವಿವೇಕ ವಿದ್ಯಾಲಯ ಪದವಿ ಪೂರ್ವ ಕಾಲೇಜಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಮೈಸೂರು ಶ್ರೀರಾಂಪುರದ ಶ್ರೀ ವಿವೇಕ ವಿದ್ಯಾಲಯ ಪದವಿಪೂರ್ವ ಕಾಲೇಜು ಹಾಗೂ ವಿವೇಕ ಎಕ್ಸೆಲ್ ಅಕಾಡೆಮಿ ಸಹಯೋಗದೊಂದಿಗೆ 70ನೇ ಕನ್ನಡ ರಾಜ್ಯೋತ್ಸವವನ್ನು ಸೋಮವಾರ ಆಚರಿಸಲಾಯಿತು. ಈ ವೇಳೆ ಸಾಹಿತಿ ಹಾಗೂ ಇತಿಹಾಸಕಾರರಾದ ಡಾ. ಜಿ ಬಿ ಹರೀಶ, ಸಂಸ್ಥೆ ಅಧ್ಯಕ್ಷ ಕೆ.ಸಿ. ಪುಟ್ಟಸಿದ್ದ ಶೆಟ್ಟಿ ನಿರ್ದೇಶಕ ಎಂ ಎಸ್. ನಾಗೇಶ್, ಆಡಳಿತ ಅಧಿಕಾರಿ ಶ್ರೀಮತಿ ಭವಾನಿ ನಾಗೇಶ್, ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಶಿಲ್ಪ ಕೆ.ಎನ್, ಬೋಧಕ-ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಇದೇ ಸಂದರ್ಭ ರಾಜ್ಯೋತ್ಸವದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಬಾಡಿಗೆ ಮನೆ ನೋಡುವ ನೆಪದಲ್ಲಿ ವೃದ್ಧೆ ಕಟ್ಟಿ ಹಾಕಿ ಚಿನ್ನಾಭರಣ ಕಳವು

ನಂಜನಗೂಡು, ನ.3- ಬಾಡಿಗೆ ಮನೆ ನೋಡುವ ನೆಪದಲ್ಲಿ ಮನೆಗೆ ನುಗ್ಗಿ, ವೃದ್ಧ ಮಹಿಳೆಯನ್ನು ಕಟ್ಟಿಹಾಕಿ ಚಿನ್ನಾಭರಣ ದೋಚಿರುವ ಘಟನೆ ನಗರದ ದೇವಿರಮ್ಮನಳ್ಳಿ ಬಡಾವಣೆಯಲ್ಲಿ ಸೋಮವಾರ ನಡೆದಿದೆ.

ಇಲ್ಲಿನ ಸಾಯಿಬಾಬಾ ದೇವಸ್ಥಾನ ಸಮೀಪದ ನಿವಾಸಿ ಶಿಕ್ಷಕ ಗಿರೀಶ್ ಎಂಬುವರ ಮನೆಗೆ ಮಧ್ಯಾಹ್ನ 2ರ ಸಮಯದಲ್ಲಿ ಆಗಮಿಸಿದ ಇಬ್ಬರು ದುಷ್ಕರ್ಮಿಗಳು, ಮನೆಯ ಮುಂಭಾಗ ಬಾಡಿಗೆಗೆ ಮನೆ ಲಭ್ಯವಿರುವುದಾಗಿ ಅಳವಡಿಸಿರುವ ಬೋರ್ಡ್ ಬಗ್ಗೆ ವಿಚಾರಿಸಲು ಬಂದಿರುವುದಾಗಿ ಹೇಳಿ ಮನೆಯೊಳಗೆ ನುಗ್ಗಿದ್ದಾರೆ.

ಈ ಸಂದರ್ಭ ಗಿರೀಶ್ ಅವರ ತಾಯಿ, ದಾಕ್ಷಾಯಿಣಿಯಮ್ಮ(65) ಒಬ್ಬರೇ ಮನೆಯಲ್ಲಿರುವುದನ್ನು ಗಮನಿಸಿ ಅವರನ್ನು ಅಲ್ಲೇ ಕುರ್ಚಿಯಲ್ಲಿ ಕಟ್ಟಿ ಹಾಕಿ ಹಲ್ಲೆ ನಡೆಸಿರುವ ಆಗಂತುಕರು ಬಳಿಕ ಮನೆಯಲ್ಲಿದ್ದ ನಗದು ಹಾಗೂ ಚಿನ್ನಾಭರಣವನ್ನು ದೋಚಿ ಪರಾರಿಯಾಗಿದ್ದಾರೆ.

ಶಿಕ್ಷಕ ಗಿರೀಶ್ ಮನೆಗೆ ಆಗಮಿಸಿದಾಗ ಗಂಭೀರ ಹಲ್ಲೆಯಿಂದ ತಾಯಿ ದಾಕ್ಷಾಯಿಣಿಯಮ್ಮ ನಿತ್ರಾಣಗೊಂಡು ಪ್ರಜ್ಞೆ ಕಳೆದುಕೊಂಡಿರುವುದು ಗಮನಕ್ಕೆ ಬಂದಿದ್ದು, ತಕ್ಷಣ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ತಮ್ಮ ಮನೆಯಲ್ಲಿ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಪದಾರ್ಥಗಳು ಕಳುವಾಗಿದ್ದು ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುವುದಾಗಿ ಗಿರೀಶ್ ಸುದ್ದಿಗಾರರಿಗೆ ತಿಳಿಸಿದರು. ಪಟ್ಟಣ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ರವೀಂದ್ರ ನೇತೃತ್ವದ ತಂಡ ಶ್ವಾನದಳ ಹಾಗೂ ಬೆರಳಚ್ಚು ಸಿಬ್ಬಂದಿಗಳೊಂದಿಗೆ ಆಗಮಿಸಿ ಮಹಜರು ನಡೆಸಿದರು. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನ.16ರಂದು ಕೃತಿಗಳ ಲೋಕಾರ್ಪಣೆ; ಗೀತಾಗಾಯನ, ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ನ.3- ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ 20ನೇ ವಾರ್ಷಿಕೋತ್ಸವ ಪ್ರಯುಕ್ತ ಡಾ.ಸೌಗಂಧಿಕಾ ವಿ.ಜೋಯಿಸ್ ಅವರ 'ತನಿಗಂಧ' ಕವನ ಸಂಕಲನ, ಪರಮೇಶ ಕೆ. ಅವರ 'ಸಾಕವ್ವನ ಸಾಂಗತ್ಯ' ಕವನ ಸಂಕಲನ, ಶ್ರೀ ರಾಘವೇಂದ್ರ ಸಿ.ಎಸ್. ಅವರ 'ಕತ್ತಲ ದಾರಿಗೆ ಅಕ್ಷರ ದೀಪ್ತಿ' ಅಂಕಣ ಬರಹಗಳ ಸಂಕಲನ, ಎಂ.ಬಿ. ಸಂತೋಷ್ ಮತ್ತು ಡಾ.ಸಿ. ವಾಣಿ ರಾಘವೇಂದ್ರ ಅವರ ಡಾ.ಶ್ವೇತಾ ಭಾಗ-2 ಕನ್ನಡ ಮತ್ತು ಇಂಗ್ಲಿಷ್ ಅನುವಾದ ಕೃತಿಗಳ ಲೋಕಾರ್ಪಣೆ, ಗೀತಗಾಯನ, ಪ್ರಶಸ್ತಿ ಪ್ರದಾನ, ಕವಿಗೋಷ್ಠಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ನ.16ರ ಭಾನುವಾರ ಬೆಳಗ್ಗೆ 10 ಮತ್ತು ಸಂಜೆ 4.30ಕ್ಕೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ 2025ನೇ ಸಾಲಿನ ಪ್ರಶಸ್ತಿಯನ್ನು ಚಿ.ಚೇತನ್ ಜಿ. ಮತ್ತು ಕು. ನೇಹಸಿರಿ ಅವರಿಗೆ ಬಾಲಶ್ರೀ ಪ್ರಶಸ್ತಿ, ಚಿ. ನಿಸರ್ಗ ಕೆ.ಸಿ.-ಪ್ರತಿಭಾ ಪುರಸ್ಕಾರ, ಕು. ಧನ್ಯಶ್ರೀ ಕೆ.ಎಸ್.-ಸಾಧನ ರತ್ನ ಪ್ರಶಸ್ತಿ, ಸನ್ಮಾನ್ಯೆ ಸಂಧ್ಯಾ ಹೆಚ್.ವಿ.-ವಿದ್ಯಾವಾರಿಧಿ ಪ್ರಶಸ್ತಿ, ವಿದುಷಿ ಮಹಿಮ ಮತ್ತು ವಿದುಷಿ ಸುಹಾಸಿನಿ ಕೆ.ಎಸ್.-ನಾಟ್ಯ ಚೂಡಾಮಣಿ ಪ್ರಶಸ್ತಿ, ರಾಮಣ್ಣ ತಟ್ಟಿ ಹಾಗೂ ಎಂ.ಎಸ್.ರಾಚಪ್ಪ ಅವರಿಗೆ ಸಾಹಿತ್ಯ ಸಿಂಧು ಪ್ರಶಸ್ತಿ ನೀಡಲಾಗುವುದು ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶೋಭಾ ಬಿ. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಎಂ.ಬಿ. ಸಂತೋಷ್, ಅಧ್ಯಕ್ಷರು, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಇವರನ್ನು ದೂ.ಸಂಖ್ಯೆ 9886341957 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಒಳಮೀಸಲಾತಿ ಜಾರಿ ಸಂಬಂಧ ಟಿ.ನರಸೀಪುರದಲ್ಲಿ ಪ್ರತಿಭಟನೆ

ಪ್ರತಿಭಟನಾ ಸ್ಥಳದಲ್ಲಿ ಇಲ್ಲದ ನಮ್ಮ ಮೇಲೂ ಕ್ರಿಮಿನಲ್ ಕೇಸ್

- ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಆರೋಪ
- ಸಚಿವ ಮಹದೇವಪ್ಪ ಕುಮ್ಮಕ್ಕಿನಿಂದ ಪ್ರಕರಣ ದಾಖಲು; ಅವರನ್ನು ಕೋರ್ಟ್ ಕಟಕಟೆ ಹತ್ತಿಸುವ ಶಪಥ


ಅರುಣ್‌ಕುಮಾರ್

ಮೈಸೂರು, ನ.3(ಎಂಕೆ)– ಟಿ.ನರಸೀಪುರದಲ್ಲಿ ಒಳ ಮೀಸಲಾತಿ ಜಾರಿ ಸಂಬಂಧ ಅ.16ರಂದು ನಡೆದ ಪ್ರತಿಭಟನಾ ಮೆರವಣಿಗೆ ಸ್ಥಳದಲ್ಲಿ ನಾ ನಾ ಗ' ಲೀ, ಮುಖಂಡ ಭಾಸ್ಕರ್ ಪ್ರಸಾದ್ ಆಗಲೀ ಇರಲಿಲ್ಲ ಆದರೂ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಮ್ಮ ಪ್ರಭಾವ ಬಳಸಿ ನಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಲು ಕಾರಣರಾಗಿದ್ದಾರೆ ಎಂದು ಆರೋಪಿಸಿದ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್, ಹೆಚ್.ಸಿ.ಮಹದೇವಪ್ಪ ವಿರುದ್ಧ ದೂರು ದಾಖಲಿಸಿ, ಕೋರ್ಟಿಗೆ ಎಳೆಯದೇ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಪರಿಶಿಷ್ಟ ಜಾತಿ ಒಳಮೀಸಲಾತಿ ಹಂಚಿಕೆಯಲ್ಲಿ, ಮಾದಿಗರಿಗೆ ನ್ಯಾಯಯುತ ಪ್ರಮಾಣದಲ್ಲಿ ಒಳಮೀಸಲಾತಿ ಹಂಚಿಕೆಯಾಗಿಲ್ಲ. ಮಾದಿಗ ಸಮುದಾಯಕ್ಕಾದ ಅನ್ಯಾಯವನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿ, ಟಿ.ನರಸೀಪುರದಲ್ಲಿ ಹೋರಾಟ ನಡೆಸಲು ಮುಂದಾದಾಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಮ್ಮ ಅಧಿಕೃತ ಜಾಲತಾಣದಲ್ಲಿ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬಹುದೆಂದಿದ್ದರು. ಇದರಿಂದಾಗಿ ತಾವೆಲ್ಲ ಮಾತುಕತೆಗೆ ಬರಲು ಸಿದ್ಧ ಎಂದು ತಿಳಿಸಿದರೂ ಅವಕಾಶ ನೀಡಲಿಲ್ಲ. ಕಡೆಗೆ ಅ.16ರಂದು ಟಿ.ನರಸೀಪುರದಲ್ಲಿರುವ ಎನ್.ರಾಚಯ್ಯ ಅವರ ಸಮಾಧಿ ಸ್ಥಳವಾದ ಖಾಸಗಿ ಪ್ರದೇಶದಲ್ಲಿ ಪ್ರತಿಭಟನೆ ನಡೆಯಿತು. ಆದರೆ, ಅಂದು ನಡೆದ ಪ್ರತಿಭಟನೆಯಲ್ಲಿ ಭಾಸ್ಕರ್ ಪ್ರಸಾದ್ ಮತ್ತು ನಾನು ಇಲ್ಲದಿದ್ದರೂ ನಮ್ಮ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆ ಸ್ಥಳದಲ್ಲಿ ನಾವಿರಲಿಲ್ಲವೆಂಬುದು ಇಡೀ ಪೊಲೀಸ್ ಇಲಾಖೆಗೆ ಗೊತ್ತು. ಆದರೂ ಡಾ.ಹೆಚ್.ಸಿ.ಮಹದೇವಪ್ಪ ಅವರ ಕುಮ್ಮಕ್ಕಿನಿಂದ ನಮ್ಮೆಲ್ಲರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಆರೋಪಿಸಿದರು.

ಈ ಕುರಿತು ಸಂಬಂಧಪಟ್ಟ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ದೂರು ಸಲ್ಲಿಸಲಾಗುವುದು. ಅಲ್ಲದೆ, ದೆಹಲಿ ಚಲೋ, ಟಿ.ನರಸೀಪುರದಿಂದ ಡಾ.ಹೆಚ್.ಸಿ.ಮಹದೇವಪ್ಪನವರ ಮನೆಯವರೆಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಊರಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು. ಹಾಗೆಯೇ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಕಟಕಟೆಗೆ ನಿಲ್ಲಸದೇ ಬಿಡುವುದಿಲ್ಲ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಭಾಸ್ಕರ್ ಪ್ರಸಾದ್, ಸುರೇಂದ್ರಕುಮಾರ್, ಮಲ್ಲು, ಸರಗೂರು ಪುಟ್ಟಣ್ಣ ಮತ್ತಿತರರಿದ್ದರು.

ಸಿದ್ದರಾಮಯ್ಯ ಬದಲಾಗುವುದಾದರೆ ಆ ಸ್ಥಾನವನ್ನು ದಲಿತ ನಾಯಕರಿಗೆ ನೀಡಿ

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಆಗ್ರಹ


ಎನ್.ಭಾಸ್ಕರ್

ಮೈಸೂರು, ನ.3(ಎಂಕೆ)– ಕರ್ನಾಟಕದಲ್ಲಿ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾಗುವುದಾದರೆ ಆ ಸ್ಥಾನವನ್ನು ದಲಿತ ಸಮುದಾಯದ ನಾಯಕರಿಗೆ ನೀಡಬೇಕೆಂದು ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಒತ್ತಾಯಿಸಿದ್ದಾರೆ.

ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬದಲಾವಣೆ ಬಗ್ಗೆ ಚರ್ಚೆ ಜೋರಾಗಿಯೇ ನಡೆದಿದೆ. ಸಿದ್ದರಾಮಯ್ಯ ಅವರ ಸ್ಥಾನಕ್ಕೆ ಹಲವರ ಹೆಸರುಗಳು ಕೇಳಿ ಬರುತ್ತಿವೆ. ಆದರೆ, ಕಾಂಗ್ರೆಸ್ ಹೈಕಮಾಂಡ್ ದಲಿತ ಸಮಾಜದ ನಾಯಕರನ್ನು ಪರಿಗಣಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ದಲಿತ ಸಮುದಾಯ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ಬೆಂಬಲಿಸಿದೆ. ಅದರಲ್ಲೂ ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ದಲಿತರ ಮತಗಳೇ ಕಾಂಗ್ರೆಸ್‌ಗೆ ನಿರ್ಣಾಯಕ. ಆದ್ದರಿಂದ ಮುಂಬರುವ ಚುನಾವಣೆಗಳಲ್ಲೂ ದಲಿತರು ಕಾಂಗ್ರೆಸ್ ಬೆಂಬಲಿಸಬೇಕಾದರೆ ನಾಯಕತ್ವ ಹಸ್ತಾಂತರದ ಬಗ್ಗೆ ಹೈಕಮಾಂಡ್ ಗಂಭೀರವಾಗಿ ಆಲೋಚಿಸಬೇಕು ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿಗೆ ಮನವಿ: ರಾಜ್ಯಕ್ಕೆ ಭೇಟಿ ನೀಡುವ ಲೋಕಸಭೆ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಕರ್ನಾಟಕದಲ್ಲಿ ದಲಿತ ನಾಯಕರಿಗೆ ನಾಯಕತ್ವ ನೀಡುವಂತೆ ಮನವಿ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಘ–ಸಂಸ್ಥೆಗಳ ಕಾರ್ಯಕ್ರಮಕ್ಕೆ ನಿರ್ಬಂಧ; ಪ್ರಗತಿಪರ ಸಂಘಟನೆಗಳ ಒಕ್ಕೂಟ ಸ್ವಾಗತ

ಮೈಸೂರು, ನ.3(ಎಂಕೆ)– ಸರ್ಕಾರಿ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಖಾಸಗಿ ಸಂಘಟನೆಗಳು, ಸಂಘ–ಸಂಸ್ಥೆಗಳು ಹಾಗೂ ಟ್ರಸ್ಟ್‌ಗಳು ಸರ್ಕಾರದ ಪೂರ್ವಾನುಮತಿ ಪಡೆದುಕೊಳ್ಳಬೇಕೆಂಬ ರಾಜ್ಯ ಸರ್ಕಾರದ ಆದೇಶವನ್ನು ಪ್ರಗತಿಪರ ಸಂಘಟನೆಗಳ ಒಕ್ಕೂಟ ಸ್ವಾಗತಿಸಿದೆ.

ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆ ಕದಡುವ, ಧಾರ್ಮಿಕ, ಕೋಮುವಾದ ಮತ್ತು ಮತೀಯವಾದ ಪ್ರಚೋದಿಸುವ ಸಂಘ–ಸಂಸ್ಥೆಗಳಿಗೆ ಈ ನಿರ್ಬಂಧ ವಿಧಿಸುವುದು ಸೂಕ್ತವಾಗುತ್ತಿತ್ತು ಎಂದಿರುವ ಒಕ್ಕೂಟವು, ಆರ್‌ಎಸ್‌ಎಸ್ ನೂರು ವರ್ಷ ಪೂರೈಸಿದೆ ಎಂದು ಪಥ ಸಂಚಲನ ನಡೆಸುವುದು ಹಾಸ್ಯಾಸ್ಪದ ಎಂದಿದೆ.

ಆರ್‌ಎಸ್‌ಎಸ್ ಸಮಾಜಮುಖಿಯೇ ಆಗಿದ್ದರೆ, ನೂರು ವರ್ಷಗಳಿಂದ ವಿಧವಾ ವಿವಾಹ ಯಾಕೆ ಮಾಡಲಿಲ್ಲ. ದಲಿತರನ್ನು ಅಸ್ಪೃಶ್ಯರೆಂಬ ಕಳಂಕವನ್ನೇಕೆ ತೊಳೆಯಲಿಲ್ಲ. ದಲಿತರಿಗೆ ದೇವಾಲಯ ಪ್ರವೇಶ ನಿರ್ಬಂಧಿಸುವುದನ್ನೇಕೆ ತಡೆಯಲಿಲ್ಲ. ಹೆಣ್ಣುಮಕ್ಕಳ ಬಾಲ್ಯ ವಿವಾಹವನ್ನೇಕೆ ನಿಯಂತ್ರಿಸಲಿಲ್ಲ. ಜಾತಿ ವ್ಯವಸ್ಥೆಯನ್ನೇಕೆ ನಿರ್ಮೂಲನೆ ಮಾಡಲಿಲ್ಲ ಎಂದು ಒಕ್ಕೂಟದ ಸಂಚಾಲಕ ಗೋಪಿನಾಥ್, ಪ್ರೊಮಾದೇಶ್, ಪುಟ್ಟಸ್ವಾಮಿ, ಬಸವಣ್ಣ, ವಾಸುದೇವ್, ಹರಕುಮಾರ್ ಮತ್ತಿತರರು ಪತ್ರಿಕಾ ಪ್ರಕಟಣೆ ಮೂಲಕ ಪ್ರಶ್ನಿಸಿದ್ದಾರೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು: ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ನ.6ರಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ತಿಂಗಳಿಗೂ ಮೇಲ್ಪಟ್ಟ ವಾಸಿಯಾಗದ ಗಾಯ, ರಕ್ತಸ್ರಾವ, ಊತ, ಗಡಸುತನ, ನುಂಗುವಾಗಿನ ತೊಂದರೆ, ಗಂಟಲಲ್ಲಿ ಉರಿತ ಅಥವಾ ತಡೆತ, ಧ್ವನಿ ಬದಲಾವಣೆ ಇರುವವರು ಪಾಲ್ಗೊಳ್ಳಬಹುದು. ಶಿಬಿರವು ಬೆಳಗ್ಗೆ 10ರಿಂದ ಸಂಜೆ 8 ಗಂಟೆವರೆಗೆ ನಡೆಯಲಿದೆ. ವಿವರಗಳಿಗೆ ಸಂಪರ್ಕಿಸಿ ದೂ.ಸಂಖ್ಯೆ 0821–4259259.

ಪ್ರಾದೇಶಿಕ ಮಕ್ಕಳ ವಿಜ್ಞಾನ ಕಾಂಗ್ರೆಸ್‌ಗೆ ಚಾಲನೆ

ದೇಶಕ್ಕೆ ಪ್ರತಿಭಾನ್ವಿತ ಮಕ್ಕಳ ಅವಶ್ಯಕತೆ ಇದೆ

- ಮೈಸೂರು ವಿವಿ ವಿಶ್ರಾಂತ ಕುಲಪತಿ, ವಿಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅಭಿಮತ
- ಇಂಡಿಯನ್ ಬ್ರೈನ್ ಇಸ್ ಬೆಸ್ಟ್ ಬ್ರೈನ್




ನವೋದಯ ವಿದ್ಯಾಲಯ ವಿದ್ಯಾರ್ಥಿಗಳ ವಿಜ್ಞಾನ ಶೈಕ್ಷಣಿಕ ಪ್ರವಾಸಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸೋಮವಾರ ಚಾಲನೆ ನೀಡಿದರು. (ಎಡದಿಂದ) ಮೈಸೂರಿನ ಪಿಎಂಶ್ರೀ ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲ ವಿ.ಶ್ರೀನಿವಾಸನ್, ನವೋದಯ ವಿದ್ಯಾಲಯ ಸಮಿತಿ ಹೈದರಾಬಾದ್ ಪ್ರಾದೇಶಿಕ ವಿಭಾಗದ ಸಹಾಯಕ ಆಯುಕ್ತ ಎಸ್.ಪಿ.ಬೋರ್ಸೆ, ಇಸ್ರೋ ನಿವೃತ್ತ ವಿಜ್ಞಾನಿ ಪ್ರೊ.ವಿ.ಜಗನ್ನಾಥ್ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ವಿದ್ಯಾರ್ಥಿಗಳು ಎನ್‌ಐಇ ಕಾಲೇಜಿಗೆ ಭೇಟಿ ನೀಡಿರುವುದನ್ನು ಕಾಣಬಹುದು.

ಮೈಸೂರು, ನ.3(ಎಂಕೆ)– ಮೈಸೂರಿನ ಡಿಎಂಜಿ ಹಳ್ಳಿಯಲ್ಲಿರುವ ಪಿಎಂಶ್ರೀ ಜವಾಹರ್ ನವೋದಯ ವಿದ್ಯಾಲಯದ ಸಹಯೋಗದೊಂದಿಗೆ ನವೋದಯ ವಿದ್ಯಾಲಯ ಸಮಿತಿ ಹೈದರಾಬಾದ್ ಪ್ರಾದೇಶಿಕ ವಿಭಾಗದಿಂದ ಹಮ್ಮಿಕೊಂಡಿರುವ 5 ದಿನಗಳ 'ಪ್ರಾದೇಶಿಕ ಮಕ್ಕಳ ವಿಜ್ಞಾನ ಕಾಂಗ್ರೆಸ್' (ವಿಜ್ಞಾನ ಶೈಕ್ಷಣಿಕ ಪ್ರವಾಸ) ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಿದ್ದ ಉದ್ಘಾಟನಾ ಕಾರ್ಯ ಕ್ರಮದಲ್ಲಿ ದೀಪ ಬೆಳಗಿಸುವ ಮೂಲಕ ಖ್ಯಾತ ವಿಜ್ಞಾನಿ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ರಾಜಕಾರಣಿಗಳ ಅಗತ್ಯತೆಗಿಂತ ಶ್ರೇಷ್ಠ ವಿಜ್ಞಾನಿಗಳು, ಇಂಜಿನಿಯರ್‌ಗಳು, ವೈದ್ಯರು, ವಿದ್ವಾಂಸರಿಂದಲೇ ಈ ದೇಶದ ಪ್ರಗತಿ ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರ್ತಿಸಿ ಪ್ರೋತ್ಸಾಹಿಸುವುದು ಅವಶ್ಯಕವಾಗಿದೆ ಎಂದು ಅಭಿಪ್ರಾಯಿಸಿದರು.

ವಿಜ್ಞಾನವಿಲ್ಲದೆ ಯಾವ ದೇಶವೂ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಆಗಾಗಿ ದೇಶಕ್ಕೆ ಪ್ರತಿಭಾನ್ವಿತ ವಿದ್ಯಾರ್ಥಿಗಳ ಅವಶ್ಯಕತೆ ಇದೆ. 1980ರಲ್ಲಿ ಕಂಪ್ಯೂಟರ್ ಬಳಕೆ ಹೇಗಿತ್ತು. ಈಗ ಹೇಗಿದೆ ಎಂಬುದನ್ನು ಗಮನಿಸಿದರೆ ಸಾಕು, ವಿಜ್ಞಾನ ಎಷ್ಟು ವೇಗವಾಗಿ ಬೆಳೆಯುತ್ತಿದೆ ಎಂಬುದು ಅರ್ಥವಾಗುತ್ತಿದೆ. ವಿಜ್ಞಾನದಿಂದ ಬದಲಾವಣೆ ಜೊತೆಗೆ ಪ್ರಗತಿ ಸಾಧ್ಯವಾಗಲಿದೆ. ವರ್ಷದಿಂದ ವರ್ಷಕ್ಕೆ ವಿಜ್ಞಾನ ಬೆಳೆಯುತ್ತಿದೆ. ಮೊದಲೆಲ್ಲಾ ಎಸ್‌ಟಿಡಿ ಕಾಲ್ ಮಾಡುತ್ತಿದ್ದೆವು. ಈಗ ನಿಮಿಷಕ್ಕೊಮ್ಮೆ ಕೈಯಲ್ಲೆ ಮೊಬೈಲ್ ಹಿಡಿದು ಎಲ್ಲಿಗೆ ಬೇಕಾದರೂ ಕರೆ ಮಾಡಬಹುದಾಗಿದೆ. 40–50 ವರ್ಷದ ಹಿಂದೆ ಮನುಷ್ಯನ ಆಯಸ್ಸು ಸರಾಸರಿ 50–60 ವರ್ಷ ಇತ್ತು. ಆದರೀಗ 80–90 ವರ್ಷವಾಗಿದೆ. ಇದಕ್ಕೆ ವಿಜ್ಞಾನವೇ ಕಾರಣ ಎಂದರು.

ಇಂಡಿಯನ್ ಬ್ರೈನ್ ಬೆಸ್ಟ್: ವಿಶ್ವದಲ್ಲಿಯೇ ಭಾರತೀಯರಲ್ಲಿರುವ ಬುದ್ಧಿಶಕ್ತಿ ಬೇರೆ ಯಾವ ದೇಶದವರಿಗೂ ಇಲ್ಲ. ಇಂಡಿಯನ್ ಬ್ರೈನ್ ಇಸ್ ಬೆಸ್ಟ್ ಬ್ರೈನ್ ಎಂದು ಹಲವರು ಹೇಳಿದ್ದಾರೆ. ದೇಶದಲ್ಲಿನ ಅನೇಕ ಶ್ರೇಷ್ಠ ವಿಜ್ಞಾನಿಗಳು ದೇಶ–ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 25 ವರ್ಷದ ಹಿಂದೆ ಚೀನಾದಲ್ಲಿ ಏನೂ ಇರಲಿಲ್ಲ. ಆದರೆ, ಈಗ ಪ್ರಪಂಚದ ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾಗಿದೆ. ಇದೆಲ್ಲಾ ಸಾಧ್ಯವಾಗಿದ್ದು ವಿಜ್ಞಾನ ಮತ್ತು ಶಿಕ್ಷಣದಿಂದ. ಈ ನಿಟ್ಟಿನಲ್ಲಿ ವಿಜ್ಞಾನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದರ ಜೊತೆಗೆ ಪ್ರತಿಭಾನ್ವಿತ ಮಕ್ಕಳನ್ನು ಗುರ್ತಿಸಿ ಪ್ರೋತ್ಸಾಹಿಸುವ ಕೆಲಸಗಳು ನಿರಂತರವಾಗಿ ನಡೆಯುತ್ತಿರಬೇಕಿದೆ ಎಂದರು.

ಎನ್‌ಐಇ ಕಾಲೇಜು ಭೇಟಿ: ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಅಂಡಮಾನ್ ದ್ವೀಪದಲ್ಲಿರುವ 84 ನವೋದಯ ವಿದ್ಯಾಲಯಗಳ 84 ವಿದ್ಯಾರ್ಥಿಗಳ ವಿಜ್ಞಾನ ಶೈಕ್ಷಣಿಕ ಪ್ರವಾಸದ ಮೊದಲ ದಿನ ಎನ್‌ಐಇ ಕಾಲೇಜಿಗೆ ಭೇಟಿ ನೀಡಿ, ಅಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಲ್ಯಾಬ್, ಬಯೋಗ್ಯಾಸ್ ತಯಾರಿಕೆ ಕುರಿತು ಮಾಹಿತಿ ನೀಡಲಾಯಿತು. ನವೋದಯ ವಿದ್ಯಾಲಯ ಸಮಿತಿ ಹೈದರಾಬಾದ್ ಪ್ರಾದೇಶಿಕ ವಿಭಾಗದ ಸಹಾಯಕ ಆಯುಕ್ತ ಎಸ್.ಪಿ.ಬೋರ್ಸೆ, ಇಸ್ರೋ ನಿವೃತ್ತ ವಿಜ್ಞಾನಿ ಪ್ರೊ.ವಿ.ಜಗನ್ನಾಥ್, ಮೈಸೂರಿನ ಪಿಎಂಶ್ರೀ ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲ ವಿ.ಶ್ರೀನಿವಾಸನ್, ಉಪಪ್ರಾಂಶುಪಾಲ ಶಾಜು ಜೋಸೆಫ್, ಶಿಕ್ಷಕರಾದ ಎಂ.ಎಸ್.ಲವಕುಮಾರ್, ಪ್ರಸಾದ್ ಕಣಿ, ವಿ.ಕೆ.ಹರೀಶ್‌ಕುಮಾರ, ಪವನ್ ಪೂಜಾರಿ, ಕೆ.ಜಯಭಾರತಿ ಮತ್ತಿತರರಿದ್ದರು.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಕಂಗೊಳಿಸಿದ ಭುವನೇಶ್ವರಿ ಮೂರ್ತಿ


ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ ಆಚರಣೆ ಅಂಗವಾಗಿ ಕೆಎಸ್‌ಟಿಆರ್‌ಸಿ ಬಸ್ ಮಾರ್ಗ ಸಂಖ್ಯೆ. 119 ಅನ್ನು ಹೂವುಗಳಿಂದ ಅಲಂಕರಿಸಿ, ಮುಂಭಾಗದಲ್ಲಿ ಶ್ರೀ ಭುವನೇಶ್ವರಿ ಮೂರ್ತಿ ಪ್ರತಿಷ್ಠಾಪಿಸಲಾಗಿತ್ತು. ಈ ಬಸ್ ಹೆಬ್ಬಾಳ–ಗೋಕುಲಂ–ಇನ್ಫೋಸಿಸ್ ಮಾರ್ಗ ಸಂಚರಿಸಲಿದೆ. ಬಸ್ ಚಾಲಕ ಮಹಾದೇವ, ಲೋಕೇಶ್, ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಕೆ.ಮಾದೇಶ್, ಅರುಣ್‌ಕುಮಾರ್, ಕುಮಾರಸ್ವಾಮಿ, ಪುಟ್ಟಯ್ಯ, ಪುಟ್ಟರಾಜು ಚಿತ್ರದಲ್ಲಿದ್ದಾರೆ.

ಗ್ರಾಮೀಣ ಪ್ರದೇಶದ ವೈದ್ಯರ ವೇತನ ಕಡಿತಕ್ಕೆ ಎಐಡಿಎಸ್‌ಓ ಖಂಡನೆ

ಮೈಸೂರು,ನ3(ಎಸ್‌ಪಿಎನ್)–ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರ ವೇತನವನ್ನು ಕಡಿತಗೊಳಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಎಐಡಿಎಸ್‌ಓ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ.

ಆರೋಗ್ಯ ಇಲಾಖೆ ಹೊರಡಿಸಿರುವ ಅಧಿಸೂಚನೆ ಪ್ರಕಾರ ಎನ್‌ಎಚ್‌ಎಂ ವೈದ್ಯರ ವೇತನವನ್ನು 75,000ರಿಂದ 60,000ಕ್ಕೆ ಮತ್ತು ಎಚ್‌ಎಫ್‌ಡಬ್ಲ್ಯುಎಸ್ ವೈದ್ಯರ ವೇತನವನ್ನು 62,666ರಿಂದ 60,000ಕ್ಕೆ ಇಳಿಸಲಾಗಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರ ಮನೋಬಲ ಕುಸಿಯುವಂತೆ ಮಾಡಿದೆ ಎಂದು ಜಿಲ್ಲಾ ಕಾರ್ಯದರ್ಶಿಗಳಾದ ನಿತಿನ್ ಹಾಗೂ ಚಂದ್ರಕಲಾ ವಾಗ್ದಾಳಿ ನಡೆಸಿದ್ದಾರೆ.

ಕೌನ್ಸೆಲಿಂಗ್ ಮತ್ತು ಪೋಸ್ಟಿಂಗ್ ಪ್ರಕ್ರಿಯೆ ನಂತರ ತೆಗೆದುಕೊಂಡ ಈ ನಿರ್ಧಾರವು, ಈ ಮೊದಲು ಘೋಷಿಸಲಾದ ವೇತನ ಶ್ರೇಣಿಯ ಆಧಾರದ ಮೇಲೆ ಗ್ರಾಮೀಣ ಮತ್ತು ಕಷ್ಟಕರ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಆಯ್ಕೆ ಮಾಡಿಕೊಂಡಿರುವ ಯುವ ವೈದ್ಯರಿಗೆ, ರಾಜ್ಯ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಘೋರ ಅನ್ಯಾಯದ ಮತ್ತು ನೈತಿಕ ಸ್ಥೈರ್ಯ ಕುಗ್ಗಿಸುವ ಕ್ರಮವಾಗಿದೆ ಎಂದು ಆರೋಪಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುವ ವೈದ್ಯರ ಬದ್ಧತೆ ಶ್ಲಾಘಿಸುವ ಬದಲು, ವೇತನ ಕಡಿಮೆಗೊಳಿಸುವ ಶಿಕ್ಷೆಗೆ ಸರ್ಕಾರ ಗುರಿ ಮಾಡುತ್ತಿದೆ ಎಂಬ ಭಾವನೆ ಯುವ ವೈದ್ಯರಲ್ಲಿ ಮೂಡುವಂತೆ ಮಾಡಿದೆ ಎಂದರು. ರಾಜ್ಯ ಸರ್ಕಾರವು ಈ ನಿರ್ಧಾರ ಹಿಂಪಡೆಯಬೇಕು ಮತ್ತು ಹಿಂದಿನ ವೇತನವನ್ನೇ ಮರು ಜಾರಿಗೊಳಿಸಬೇಕೆಂದು ಎಐಡಿಎಸ್‌ಓ ಪ್ರಕಟಣೆಯಲ್ಲಿ ಒತ್ತಾಯಿಸಿದೆ.

ವಿಶೇಷ ಮಕ್ಕಳ ಮಾಸದ ಕಾರ್ಯಕ್ರಮ

ಮೈಸೂರು,ನ.3–ಮೈಸೂರಿನ ಆಯುರ್ವೇದ ಪಂಚಕರ್ಮ ಆಸ್ಪತ್ರೆ ದೀಕ್ಷಿತ್ ಆರೋಗ್ಯಧಾಮವು ಆನಂದ ಆರೋಗ್ಯ ಕಾರ್ತಿಕ ಹುಣ್ಣಿಮೆ ವಿಶೇಷ ಮಕ್ಕಳ ಮಾಸದ ಕಾರ್ಯಕ್ರಮವನ್ನು ನ.5ರಂದು ಸಂಜೆ 6 ಗಂಟೆಗೆ ಏರ್ಪಡಿಸಿದೆ. ಕಾರ್ಯಕ್ರಮದಲ್ಲಿ ಭಕ್ತಿ ಸಂಗೀತ: ಸುದಿತಿ ಅಯ್ಯಂಗಾರ್, ಪಿಟೀಲು: ರೂಪನ ಗುಡಿ ರತ್ನತೇಜ, ಮೃದಂಗ: ಸುಹಾಸ್ ರಾಘವನ್ ಅಯ್ಯಂಗಾರ್. ಅಲ್ಲದೆ, ಉಪನ್ಯಾಸ 'ಮಕ್ಕಳ ಪಾಲನೆ, ಆರೋಗ್ಯ ರಕ್ಷಣೆ', ಉಪನ್ಯಾಸಕರು: ಡಾ.ಅನಿಲ್‌ಕುಮಾರ್, ನಿರ್ದೇಶಕರು, ದೀಕ್ಷಿತ್ ಆರೋಗ್ಯಧಾಮ ಇವರಿಂದ ಏರ್ಪಡಿಸಿದೆ. ಕಾರ್ಯಕ್ರಮವು ದೀಕ್ಷಿತ್ ಆರೋಗ್ಯ ಧಾಮ, #12, ಸಿ.ಬ್ಲಾಕ್, 3ನೇ ಹಂತ, ವಿಜಯನಗರ, ಮೈಸೂರು ಇಲ್ಲಿ ನಡೆಯಲಿದೆ.

ಇಂದು ಕನ್ನಡ ಚಲನಚಿತ್ರ ಗೀತೆಗಳ ಗಾಯನ

ಮೈಸೂರು, ನ.3(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದ ಬ್ರಹ್ಮ ಸಂಗೀತ ಸಭಾದಲ್ಲಿ ನಾಳೆ(ನ.4) ಸಂಜೆ 4 ಗಂಟೆಗೆ ಗಾನಲೀಲಾ ಎಜುಕೇಷನ್ ಹಾಗೂ ಕಲ್ಚರಲ್ ಟ್ರಸ್ಟ್ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಚಲನಚಿತ್ರಗೀತೆಗಳ (ಗಾನ ಲೀಲಾ ಸೀಸನ್–7) ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷೆ ಲೀಲಾವತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಗಾಯನ ಕಾರ್ಯಕ್ರಮದಲ್ಲಿ ಒಟ್ಟು 24 ಮಂದಿ ಗಾಯಕರು ಭಾಗವಹಿಸಲಿದ್ದು, 1980 ಮತ್ತು 90 ರ ದಶಕದ ಸುಮಾರು 50ಕ್ಕೂ ಹೆಚ್ಚು ಚಲನಚಿತ್ರಗೀತೆಗಳನ್ನು ಹಾಡಿ ರಂಜಿಸಲಿದ್ದಾರೆ. ಪ್ರವೇಶ ಉಚಿತವಾಗಿರಲಿದೆ. ಪತ್ರಿಕಾಗೋಷ್ಠಿಯಲ್ಲಿ ಲಲಿತಾ, ಅಶ್ವತ್ ನಾರಾಯಣ, ಶ್ರೀಕಂಠೇಶ್, ಅನ್ನಪೂರ್ಣ ಉಪಸ್ಥಿತರಿದ್ದರು.

ಹಾಸನ ಜಿಲ್ಲಾ ಬಳಗದಿಂದ ಪ್ರತಿಭಾ ಪುರಸ್ಕಾರ

ಮೈಸೂರು, ನ 3– 2025ರ ಮಾರ್ಚ್–ಏಪ್ರಿಲ್ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚು ಅಂಕ ಪಡೆದ ಹಾಸನ ಜಿಲ್ಲಾ ವಿದ್ಯಾರ್ಥಿಗಳನ್ನು ಹಾಸನ ಜಿಲ್ಲಾ ಬಳಗದ ವತಿಯಿಂದ ಸನ್ಮಾನಿಸಲಾಗುತ್ತಿದ್ದು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಮಾತ್ರ ಅರ್ಜಿ ಹಾಕಲು ಅರ್ಹರು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಹಾಸನ ಜಿಲ್ಲೆಯವರಾಗಿ, ಮೈಸೂರು ಜಿಲ್ಲೆಯಲ್ಲಿ ವಾಸವಿದ್ದು, ಮೈಸೂರು ಜಿಲ್ಲೆಯಲ್ಲೇ ಪರೀಕ್ಷೆಗೆ ಹಾಜರಾಗಿರಬೇಕು. ಇಂತಹ ವಿದ್ಯಾರ್ಥಿಯ ಪೋಷಕರು ಹಾಸನ ಜಿಲ್ಲಾ ಬಳಗದ ಖಾಯಂ ಸದಸ್ಯರಾಗಿರಬೇಕು. ಅಂತಹ ವಿದ್ಯಾರ್ಥಿಗಳು ಬಿ.ಜಿ.ರಂಗೇಗೌಡ, ನಂ.11488, ವಿಜಯನಗರ 4ನೇ ಹಂತ, ಮೈಸೂರು–570032 ಅವರಿಗೆ ಅರ್ಜಿಯೊಂದಿಗೆ ಅಂಕಪತ್ರದ ದೃಢೀಕೃತಿ ಪ್ರತಿ ಹಾಗೂ ಖಾಯಂ ಸದಸ್ಯತ್ವ ಹೊಂದಿ ರುವ ರಶೀದಿ ನಕಲು ಪ್ರತಿಯನ್ನು ನ.30 ರೊಳಗೆ ಕಳುಹಿಸಲು ಕೋರಲಾಗಿದೆ. ಮಾಹಿತಿಗಾಗಿ ಮೊ.9886647852

ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ...


ಮೈಸೂರಿನ ಮರಿಮಲ್ಲಪ್ಪ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರು ಆದ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಅವರ ತಾಯಿ ಶ್ರೀಮತಿ ಮಂಗಳಾ ಮುದ್ದುಮಾದಪ್ಪ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ ನೀಡಿ, ಗೌರವಿಸಿದರು. ಈ ವೇಳೆ ವಿಧಾನಪರಿಷ್ ಸದಸ್ಯ ಸಿ.ಎನ್.ಮಂಜೇಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಇನ್ನಿತರರಿದ್ದರು.

ವೇದಿಕೆಯ 36ನೇ ವಾರ್ಷಿಕೋತ್ಸವ, 70ನೇ ಕನ್ನಡ ರಾಜ್ಯೋತ್ಸವ...


ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಯ 36ನೇ ವಾರ್ಷಿಕೋತ್ಸವ ಹಾಗೂ 70ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಧರ್ಮೇಂದರ್‌ಬಾಬು 'ಜನ ಸೇವಾ ಧುರೀಣ', ಸ್ತ್ರೀರೋಗ ತಜ್ಞೆ ಡಾ.ಜ್ಯೋತಿ ಉಮೇಶ್ 'ಮಹಿಳಾ ವೈದ್ಯ ಜನ ಸೇವಾ ರತ್ನ', ಕ್ಯಾನ್ಸರ್ ರೋಗ ತಜ್ಞ ಡಾ.ಎಂ.ಎಸ್.ಗಿರೀಶ್ 'ವೈದ್ಯ ಸೇವಾ ರತ್ನ', ಸಮಾಜ ಸೇವಕ ಪಿ.ಎಸ್.ಬಾಲಾಜಿ 'ಸಮಾಜ ಸೇವಾ ರತ್ನ' ಪ್ರಶಸ್ತಿ ಪ್ರಧಾನ ಮಾಡಿ, ವೇದಿಕೆ ಗೌರವ ಅಧ್ಯಕ್ಷ ಡಾ.ಶ್ರೀಕಾಂತ್ ಸುಂದರೇಶ್ ಅಭಿನಂದಿಸಲಾಯಿತು. ಚಿತ್ರದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಉಪಾಧ್ಯಕ್ಷ ವಿ.ಗಿರಿಧರ್, ಬ್ರಿಗೇಡ್ ಅಪಾರ್ಟ್‌ಮೆಂಟ್‌ನ ಜಿ.ಎಂ.ಸುಚೇಂದ್ರ, ಕೆ.ಆರ್. ಆಸ್ಪತ್ರೆ ಸೂಪರಿಂಟೆಂಡೆಂಟ್ ಡಾ.ಶೋಭಾ, ಮಾರ್ಗದರ್ಶಕರಾದ ರಂಗಪ್ಪಗೌಡ, ಮಹಮದ್‌ಪುತ್ತು, ಮುಖಂಡ ಸಂತೋಷ್‌ಗೌಡ, ಸುನಿಲ್ ಜ್ಯೋತಿಷ್ಯ, ಪೂಜಾರಿ, ದಿನೇಶ್ ಇನ್ನಿತರರಿದ್ದರು.

ದೇಶ - ವಿದೇಶ


ಆಫ್ಘಾನಿಸ್ತಾನದಲ್ಲಿ ಪ್ರಬಲ ಭೂಕಂಪ: 7 ಸಾವು

ಕಾಬುಲ್, ನ.3– ಆಫ್ಘಾನಿಸ್ತಾನದಲ್ಲಿ ಸೋಮವಾರ ಮುಂಜಾನೆ ಪ್ರಬಲ ಭೂಕಂಪನ ಸಂಭವಿಸಿದ್ದು 7 ಮಂದಿ ಸಾವನ್ನಪ್ಪಿ 150ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.



ಸೋಮವಾರ ಮುಂಜಾನೆ ಉತ್ತರ ಅಫ್ಘಾನಿಸ್ತಾನದ ಮಜಾರ್–ಎ ಶರೀಫ್ ನಗರದ ಬಳಿ 6.3 ತೀವ್ರತೆಯ ಭೂಕಂಪ ಸಂಭವಿಸಿದ್ದು, ಹತ್ತಾರು ಕಟ್ಟಡಗಳು ನೆಲಕ್ಕುರುಳಿವೆ. ರಿಕ್ಟರ್ ಮಾಪಕದಲ್ಲಿ ಭೂಕಂಪನದ ತೀವ್ರತೆಯು 6.3ರಷ್ಟು ದಾಖಲಾಗಿದೆ. ಭೂಕಂಪದ ಕೇಂದ್ರಬಿಂದು ಅಫ್ಘಾನಿಸ್ತಾನದ ಖುಲ್ಮ್‌ನಿಂದ ಪಶ್ಚಿಮ–ನೈಋತ್ಯಕ್ಕೆ 22 ಕಿ.ಮೀ ದೂರದಲ್ಲಿದೆ ಮತ್ತು 28 ಕಿ.ಮೀ ಆಳದಲ್ಲಿದೆ ಎಂದು ಅಮೆರಿಕ ಭೂಕಂಪ ಮಾಪನ ಕೇಂದ್ರ (ಯುಎಸ್‌ಜಿಎಸ್)ದ ಅಧಿಕಾರಿಗಳು ತಿಳಿಸಿದ್ದಾರೆ. ಮಧ್ಯರಾತ್ರಿ 12.59ರ ಸುಮಾರಿಗೆ ಭೂಕಂಪ ಸಂಭವಿಸಿದ್ದು, ಗಾಯಾಳುಗಳನ್ನು ಆರೋಗ್ಯ ಕೇಂದ್ರಗಳಿಗೆ ವರ್ಗಾಯಿಸಲಾಗಿದೆ ಎಂದು ಮಜಾರ್–ಎ ಶರೀಫ್ ಬಳಿಯ ಪರ್ವತ ಉತ್ತರ ಪ್ರಾಂತ್ಯದ ಸಮಂಗನ್‌ನಲ್ಲಿರುವ ಆರೋಗ್ಯ ಇಲಾಖೆಯ ವಕ್ತಾರ ಸಮೀಮ್ ಜೋಯಂಡಾ ರಾಯಿಟರ್ಸ್‌ಗೆ ತಿಳಿಸಿದ್ದಾರೆ. ಕಳೆದ ವಾರವಷ್ಟೇ, ಅಫ್ಘಾನಿಸ್ತಾನದಲ್ಲಿ 4.3 ತೀವ್ರತೆಯ ಮತ್ತೊಂದು ಭೂಕಂಪ ಸಂಭವಿಸಿತ್ತು.

ಪಾಕಿಸ್ತಾನಕ್ಕೆ ಪರಮಾಣು ಶಸ್ತ್ರಾಸ್ತ್ರಗಳ ಡೇಟಾ ರವಾನೆ; ಮುಂಬೈನಲ್ಲಿ ನಕಲಿ ವಿಜ್ಞಾನಿ ಬಂಧನ


ಅಖ್ತರ್ ಹುಸೇನಿ

ಮುಂಬೈ, ನ. 3– ಬಾಬಾ ಪರಮಾಣು ಸಂಶೋಧನಾ ಕೇಂದ್ರದ (ಬಿಎಆರ್‌ಸಿ) ವಿಜ್ಞಾನಿ ಎಂದು ಹೇಳಿಕೊಂಡು ಸೂಕ್ಷ್ಮ ಪರಮಾಣು ದತ್ತಾಂಶಗಳನ್ನು ಪಾಕಿಸ್ತಾನಕ್ಕೆ ರವಾನೆ ಮಾಡಿ, ಕೋಟ್ಯಂತರ ವಿದೇಶಿ ಹಣವನ್ನು ಪಡೆದಿದ್ದಕ್ಕಾಗಿ 60 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಿಎಆರ್‌ಸಿ ವಿಜ್ಞಾನಿ ಎಂದು ಸುಳ್ಳು ಹೇಳಿಕೊಂಡು ದೇಶಾದ್ಯಂತ ಪ್ರಯಾಣಿಸಿದ್ದಕ್ಕಾಗಿ ಅಖ್ತರ್ ಹುಸೇನಿ ಅವರನ್ನು ಕಳೆದ ತಿಂಗಳು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಜಾರ್ಖಂಡ್‌ನ ಜಮ್ಶೆಡ್‌ಪುರದ ನಿವಾಸಿ ಹುಸೇನಿ ಅವರಿಂದ 10 ಕ್ಕೂ ಹೆಚ್ಚು ನಕ್ಷೆಗಳು ಮತ್ತು ಪರಮಾಣು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ಡೇಟಾವನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ಹಲವಾರು ನಕಲಿ ಪಾಸ್‌ಪೋರ್ಟ್‌ಗಳು, ಆಧಾರ್ ಮತ್ತು ಪ್ಯಾನ್ ಕಾರ್ಡ್‌ಗಳು ಮತ್ತು ನಕಲಿ ಬಿಎಆರ್‌ಸಿ ಐಡಿಯನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ಭಾರತದ ಪರ ಬೇಹುಗಾರಿಕೆ ಆರೋಪ: ಮೀನುಗಾರನನ್ನು ಬಂಧಿಸಿದ ಪಾಕಿಸ್ತಾನ

ಇಸ್ಲಾಮಬಾದ್, ನ. 3– ಭಾರತದ ಪರ ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ದೇಶದ ಮೀನುಗಾರನನ್ನು ಬಂಧಿಸಲಾಗಿದೆ ಎಂದು ಪಾಕಿಸ್ತಾನದ ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್ ಹೇಳಿದ್ದಾರೆ.



ಇಸ್ಲಾಮಾಬಾದ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತರಾರ್, ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಇಜಾಜ್ ಮಲ್ಲಾಹ್‌ಗೆ ಮಿಲಿಟರಿ ಸಮವಸ್ತ್ರ, ಪಾಕಿಸ್ತಾನಿ ಕರೆನ್ಸಿ, ಸಿಗರೇಟ್, ಮ್ಯಾಚ್ ಬಾಕ್ಸ್, ಲೈಟರ್ ಮತ್ತು ಸಿಮ್ ಕಾರ್ಡ್‌ಗಳನ್ನು ಖರೀದಿಸುವಂತೆ ಒತ್ತಾಯಿಸಲಾಗಿತ್ತು. ಸೆಪ್ಟೆಂಬರ್‌ನಲ್ಲಿ ಮಲ್ಲಾಹ್ ಮೀನುಗಾರಿಕೆಗೆ ಹೊರಟಿದ್ದಾಗ ಭಾರತೀಯ ಕರಾವಳಿ ಕಾವಲು ಪಡೆ ಆತನನ್ನು ಬಂಧಿಸಿತ್ತು ಎಂದು ಹೇಳಿದರು.

ಪಾಕಿಸ್ತಾನ ನೌಕಾಪಡೆ, ಪಾಕಿಸ್ತಾನ ಸೇನೆ ಮತ್ತು ಸಿಂಧ್ ರೇಂಜರ್‌ಗಳ ಸಮವಸ್ತ್ರಗಳನ್ನು ಒಳಗೊಂಡಿರುವ ಕೆಲವು ವಸ್ತುಗಳನ್ನು ಸಂಗ್ರಹಿಸಲು ಪಾಕಿಸ್ತಾನಕ್ಕೆ ಮೀನುಗಾರರನ್ನು ಕಳುಹಿಸಲಾಗಿತ್ತು. ಮೀನುಗಾರನು ತನ್ನ ಹ್ಯಾಂಡ್ಲರ್‌ಗಳು ಹೇಳಿದಂತೆ ವಸ್ತುಗಳನ್ನು ಖರೀದಿಸಲು ಪ್ರಯತ್ನಿಸಿದಾಗ ಪಾಕಿಸ್ತಾನದ ಗುಪ್ತಚರ ಸಂಸ್ಥೆಗಳು ಆತನನ್ನು ಪತ್ತೆಹಚ್ಚಿವೆ ಎಂದಿದ್ದಾರೆ.

ಗೆಳೆಯನೊಂದಿಗೆ ಕಾರಿನಲ್ಲಿ ಕುಳಿತಿದ್ದ ಕಾಲೇಜು ವಿದ್ಯಾರ್ಥಿನಿ ಅಪಹರಿಸಿ, ಲೈಂಗಿಕ ದೌರ್ಜನ್ಯ


ಕೊಯಮತ್ತೂರು, ನ. 3– ಕೊಯಮತ್ತೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಭಾನುವಾರ ತಡರಾತ್ರಿ ಮೂವರು ವ್ಯಕ್ತಿಗಳು ಕಾಲೇಜು ವಿದ್ಯಾರ್ಥಿನಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ.



ಪೊಲೀಸರ ಪ್ರಕಾರ ಮೂಲತಃ ಮಧುರೈನ ಯುವತಿ ಮತ್ತು ಪ್ರಸ್ತುತ ಕೊಯಮತ್ತೂರಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯನ್ನು ವಿಮಾನ ನಿಲ್ದಾಣದ ಬಳಿಯ ಬೃಂದಾವನ ನಗರದಲ್ಲಿ ರಾತ್ರಿ 11 ಗಂಟೆ ಸುಮಾರಿಗೆ ಕಾರಿನಲ್ಲಿ ಕುಳಿತಿದ್ದಾಗ ಅಪ ಹರಿಸಲಾಗಿದೆ. ಮೂವರು ದುಷ್ಕರ್ಮಿಗಳು ಯುವತಿ ಕುಳಿತಿದ್ದ ಕಾರಿನ ಬಳಿ ಬಂದು, ಆಕೆಯ ಸ್ನೇಹಿತನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ, ಅಪಹರಿಸಿದ್ದಾರೆ. ನಂತರ ಹಲ್ಲೆಕೋರರು ಸಂತ್ರಸ್ತೆಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಅಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಪರಾರಿ ಯಾಗಿದ್ದಾರೆ. ಗಾಯಗೊಂಡು, ಪ್ರಜ್ಞೆ ತಪ್ಪಿದ್ದ ಆಕೆಯ ಸ್ನೇಹಿತ ಸ್ವಲ್ಪ ಸಮಯದ ನಂತರ ಪ್ರಜ್ಞೆ ಮರಳಿದ ಬಳಿಕ ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಪಾಕಿಸ್ತಾನದಲ್ಲಿ ಹಿಂದೂ ಬಾಲಕಿ ಅಪಹರಣ; ಮತಾಂತರ, ವೃದ್ಧನೊಂದಿಗೆ ಬಲವಂತದ ಮದುವೆ

ಕರಾಚಿ, ನ. 3– ಅಪಹರಣಕ್ಕೊಳಗಾಗಿ, ಬಲವಂತದಿಂದ ಮತಾಂತರಗೊಂಡು ಮುಸ್ಲಿಂ ವ್ಯಕ್ತಿಯೊಂದಿಗೆ ಮದುವೆಯಾದ 3 ತಿಂಗಳ ನಂತರ ಸಿಂಧ್ ನ್ಯಾಯಾಲಯದ ಆದೇಶದಂತೆ 15 ವರ್ಷದ ಬಾಲಕಿ ಮರಳಿ ಕುಟುಂಬವನ್ನು ಸೇರಿದ್ದಾಳೆ ಎಂದು ಹಿಂದೂ ಸಮುದಾಯದ ಮುಖಂಡರು ತಿಳಿಸಿದ್ದಾರೆ.



ಕರಾಚಿಯಿಂದ 310 ಕಿ.ಮೀ. ದೂರದಲ್ಲಿರುವ ಉಮೆರ್‌ಕೋಟ್‌ನ ಆದೇಶದಂತೆ, ಸುನೀತಾ ಕುಮಾರಿ ಮಹಾರಾಜ್ ಅವರು ತಮ್ಮ ಕುಟುಂಬವನ್ನು ಸೇರಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಹಿಂದೂ ಸಮುದಾಯದ ಮುಖಂಡ ಶಿವ ಕಾಚಿ, ಕುನ್ರಿ ಎಂಬ ಪ್ರದೇಶದಿಂದ ಸುನೀತಾ ಅವರನ್ನು ಅಪಹರಿಸಲಾಗಿತ್ತು. ನಂತರ ಅವರನ್ನು ಬಲವಂತದಿಂದ ಮತಾಂತರಗೊಳಿಸಲಾಗಿತ್ತು. ಮುಸ್ಲಿಂ ಸಮುದಾಯದ ವೃದ್ಧನೊಂದಿಗೆ ಮದುವೆಯನ್ನೂ ಮಾಡಿದ್ದರು. ಇಂತಹ ಬಹಳಷ್ಟು ಪ್ರಕರಣಗಳು ಪಾಕಿಸ್ತಾನದಲ್ಲಿ ನಡೆಯುತ್ತಿವೆ. ಆದರೆ ಸುನೀತಾ ಅವರಂಥ ಕೆಲವೇ ಕೆಲವು ಯುವತಿಯರು ಕುಟುಂಬವನ್ನು ಮರಳಿ ಸೇರುತ್ತಿದ್ದಾರೆ ಎಂದಿದ್ದಾರೆ.

ಸೋ.ಪೇಟೆಯಲ್ಲಿ ಅರಣ್ಯ ಅಧಿಕಾರಿಗಳ ಕಿರುಕುಳ ವಿರೋಧಿಸಿ

ಕಾಫಿ ಬೆಳೆಗಾರರು, ರೈತರ ಬೃಹತ್ ಪ್ರತಿಭಟನೆ

ಮಡಿಕೇರಿ, ನ.3– ಅರಣ್ಯ ಇಲಾಖೆ ಕಿರುಕುಳ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ರೈತ ಹೋರಾಟ ಸಮಿತಿ, ಕಾಫಿ ಬೆಳೆಗಾರರ ಸಂಘ ಹಾಗೂ ವಿವಿಧ ಸಂಘಟನೆಗಳು ಸೋಮವಾರಪೇಟೆಯಲ್ಲಿ ಬೃಹತ್ ಪ್ರತಿಭಟನೆ ನಡೆಸಿದವು.



ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ರೈತ ಹೋರಾಟ ಸಮಿತಿ, ಸೋಮವಾರ ಪೇಟೆಯಲ್ಲಿ ಮಾನವ ಸರಪಳಿ ರಚಿಸಿ ಬೃಹತ್ ಪ್ರತಿಭಟನೆ ನಡೆಸಿದವು.

ಪಟ್ಟಣದ ಪುಟ್ಟಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸುವ ಮೂಲಕ ಕೆಲ ಕಾಲ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು ರೈತರು ಮತ್ತು ಬೆಳೆಗಾರರು ಎದುರಿಸುತ್ತಿರುವ ಭೂಮಿ ಸಮಸ್ಯೆ ಪರಿಹಾರಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಮುಂದಾಗಬೇಕು ಎಂದು ಆಗ್ರಹಿಸಿದರು.

ಇತ್ತೀಚೆಗೆ ಮುಕ್ಕೋಡ್ಲು ಗ್ರಾಮದ ಕೃಷಿಕ ಕಾಳಿಚಂಡ ನಾಣಿಯಪ್ಪ ಎಂಬವರು ಸರಕಾರಿ ಜಾಗದಲ್ಲಿ ಬೆಳೆಸಿದ್ದ ಕೃಷಿ ಫಸಲನ್ನು ನಾಶ ಮಾಡಿದ್ದ ಅರಣ್ಯ ಇಲಾಖೆಯ ಕ್ರಮವನ್ನು ಖಂಡಿಸಿ ಅರಣ್ಯ ಇಲಾಖೆಯ ಸರ್ವೇ ಆದೇಶದ ಪ್ರತಿಗೆ ಬೆಂಕಿ ಹಚ್ಚುವ ಮೂಲಕ ಪ್ರತಿಭಟನಾಕಾರರು ಸರ್ಕಾರ ಮತ್ತು ಅರಣ್ಯ ಇಲಾಖೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘದ ಮತ್ತು ಹಸಿರು ಸೇನೆ ಅಧ್ಯಕ್ಷೀಯ ಮಂಡಳಿ ಸದಸ್ಯ ಹಾನೂರು ಪ್ರಕಾಶ್ ಮಾತನಾಡಿ, ರೈತರು ಮತ್ತು ಬೆಳೆಗಾರರು ಹಲ ವಾರು ವರ್ಷಗಳಿಂದ ಉಳುಮೆ ಮಾಡಿಕೊಂಡು ಕೃಷಿ ಮಾಡಿ ಬದುಕು ಕಟ್ಟಿಕೊಂಡಿರುವ ಭೂಮಿಯನ್ನು ಕೃಷಿಗೆ ಯೋಗ್ಯವಲ್ಲದ ಭೂಮಿ ಎಂದು ವರ್ಗೀಕರಿಸಿ ವರದಿ ನೀಡಿದ ಅಧಿಕಾರಿ ವರ್ಗದ ವಿರುದ್ಧ ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಬದುಕು ಕೊಟ್ಟಿರುವ ಭೂಮಿಯನ್ನು ಸರಕಾರಕ್ಕೆ ನೀಡಿದರೆ ಜಗತ್ತಿನ ಬೇರೆಡೆ ಬದುಕಲು ಸಾಧ್ಯವಿಲ್ಲ. ಇಂತಹ ಅವ್ಯವಸ್ಥೆಯ ವಿರುದ್ಧ ರೈತರು ಒಗ್ಗೂಡಿ ಹೋರಾಟ ನಡೆಸಬೇಕು. ಸಿ ಮತ್ತು ಡಿ ಭೂಮಿ ಕುರಿತು ಕಳೆದ ಒಂದೂವರೆ ವರ್ಷದಿಂದ ಹೋರಾಟ ಮಾಡಿದರೂ ಜಿಲ್ಲಾಡಳಿತ, ಜನಪ್ರತಿನಿಧಿಗಳು ಸಭೆ ನಡೆಸಿಲ್ಲ. ಮುಂದಿನ ವಾರದೊಳಗೆ ಸಭೆ ಕರೆಯದಿದ್ದಲ್ಲಿ ಜಿಲ್ಲೆಯ ಹೋರಾಟವನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವುದಾಗಿ ಎಚ್ಚರಿಸಿದರು.

ರಾಜ್ಯ ಸಮಿತಿ ಕಾರ್ಯಕಾರಿಣಿ ಮಂಡಳಿ ಸದಸ್ಯ ಮಂಜು ಕಿರಣ್, ರೈತ ಸಂಘದ ಜಿಲ್ಲಾಧ್ಯಕ್ಷ ಮನು ಸೋಮಯ್ಯ, ರೈತ ಹೋರಾಟ ಸಮಿತಿ ಸಂಚಾಲಕ ಚಕ್ರವರ್ತಿ ಸುರೇಶ್, ಹಸಿರು ಸೇನೆಯ ಪ್ರಮುಖರಾದ ಕಣಗಾಲು ಮೂರ್ತಿ ಮಾತನಾಡಿ, ಹಾಸನದಲ್ಲೂ 2 ಸಾವಿರ ಎಕರೆ ಪ್ರದೇಶವನ್ನು ಅರಣ್ಯ ಇಲಾಖೆ 'ಮೀಸಲು ಅರಣ್ಯ' ಎಂದು ಘೋಷಿಸಲು ಮುಂದಾಗಿದ್ದು, ಹಾಸನದಲ್ಲೂ ಹೋರಾಟ ಪ್ರಾರಂಭವಾಗಿದೆ. ರೈತರು ತಮ್ಮ ಜಮೀನಿನಲ್ಲಿ ನೇಗಿಲು ಗುರುತಿನ ಬೋರ್ಡ್ ಹಾಕಿ ಅಧಿಕಾರಿಗಳು ಗ್ರಾಮ ಪ್ರವೇಶಿಸಬಾರದು ಎಂದು ಸೂಚನೆ ನೀಡಿದ್ದಾರೆ. ಕೊಡಗು ಜಿಲ್ಲೆಯೂ ಇಂತಹ ಬೋರ್ಡ್‌ಗಳನ್ನು ಹಾಕುವ ಸ್ಥಿತಿ ಬಂದಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ರೈತ ಹೋರಾಟ ಸಮಿತಿಯ ಕಾನೂನು ಸಲಹೆಗಾರ ಬಿ.ಜೆ. ದೀಪಕ್, ಪ್ರಮುಖರಾದ ಹೂವಯ್ಯ ಮಾಸ್ಟರ್, ದಿನೇಶ್, ಕಾಫಿ ಬೆಳೆಗಾರರ ಸಂಘದ ಉಮಾ ಶಂಕರ್, ಸುಜು ಪೆಮ್ಮಯ್ಯ, ಹರಪಳ್ಳಿ ರವೀಂದ್ರ, ಗಿರೀಶ್ ಮಲ್ಲಪ್ಪ, ಶೇಖರ್ ಕೊಡ್ಲಿಪೇಟೆ, ಜಿಲ್ಲಾ ರೈತ ಸಂಘದ ಪುಚ್ಚಿಮಾಡ ಸುಭಾಷ್, ಕಾಫಿ ಬೆಳೆಗಾರರ ಸಂಘದ ಪದಾಧಿಕಾರಿಗಳು, ಚಾಮರಾಜನಗರ, ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳ ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರಗಳ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಗೋಣಿಕೊಪ್ಪದಲ್ಲಿ ಕಾಡಾನೆ ಸಂಚಾರ

ಗೋಣಿಕೊಪ್ಪ, ನ.3–ಸೋಮವಾರ ಮುಂಜಾನೆ ಕಾಡಾನೆಯೊಂದು ಪಟ್ಟಣದಲ್ಲಿ ಓಡಾಡಿ ಸಾರ್ವಜನಿಕರಲ್ಲಿ ಭಯ ಮೂಡಿಸಿದೆ. ಮುಂಜಾನೆ 3 ಗಂಟೆಗೆ ಸರ್ಕಾರಿ ಪ್ರೌಢಶಾಲೆ ಮೂಲಕ ಕೃಷಿ ವಿಜ್ಞಾನ ಕೇಂದ್ರ, ವಸತಿ ನಿಲಯದ ಮೂಲಕ ತೆರಳಿರುವ ಆನೆ ಯಾವ ಕಡೆ ಸೇರಿಕೊಂಡಿದೆ ಎಂಬ ಸುಳಿವು ಇಲ್ಲ. ಕೃಷಿ ವಿಜ್ಞಾನ ಕೇಂದ್ರದ ಬೇಲಿ ಮುರಿದಿದ್ದು, ಕಳ್ಳರು ಬಂದಿರಬಹುದು ಎಂದು ಸಿಸಿ ಕ್ಯಾಮೆರಾ ಪರಿಶೀಲಿಸಿದಾಗ ಕಾಡಾನೆ ತೆರಳಿರುವುದು ಪತ್ತೆಯಾಗಿದೆ. ಅತ್ತೂರು ಗ್ರಾಮದ ಕಾಫಿ ತೋಟದಲ್ಲಿ ಸೇರಿಕೊಂಡಿರಬಹುದು ಎಂದು ಅಂದಾಜಿಸಲಾಗಿದೆ.

ಇಂದು ನಾಪೋಕ್ಲು ಸುತ್ತಮುತ್ತ ವಿದ್ಯುತ್ ವ್ಯತ್ಯಯ

ಮಡಿಕೇರಿ, ನ.3–ನಾಪೋಕ್ಲು ಫೀಡರ್‌ನಲ್ಲಿ ನ.4ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಜಾಲದ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಹೊದ್ದೂರು, ಕಬಡಗೇರಿ, ಕೊಳಕೇರಿ, ಕಕ್ಕಬೆ, ಕುಂಜಿಲ, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ, ಪೇರೂರು, ನಾಪೋಕ್ಲು ಟೌನ್, ಕೊಟ್ಟಮುಡಿ, ಪಾಲೂರು, ಚೆರಿಯ ಪರಂಬು, ಹಳೆತಾಲೂಕು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಿಗಮದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕೆಂಬಟ್ಟಿ ಹೆಸರನ್ನು ಜಾತಿ ಪಟ್ಟಿಯಲ್ಲಿ ಸೇರಿಸಲು ನಿಯೋಗದ ಮನವಿ

ಮಡಿಕೇರಿ, ನ.3–ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಅಖಿಲ ಕೊಡಗು ಕೆಂಬಟ್ಟಿ ಸಮಾಜದ ನಿಯೋಗ ಅಧ್ಯಕ್ಷ ಬಿಲ್ಲರೀಕುಟ್ಟಡ ಪ್ರಭು ಅಯ್ಯಪ್ಪ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿತು. ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡ ಕೆಂಬಟ್ಟಿ ಸಮಾಜದ ಪ್ರಮುಖರು ಕೆಂಬಟ್ಟಿ ಹೆಸರನ್ನು ಜಾತಿ ಪಟ್ಟಿಯಲ್ಲಿ ಸೇರಿಸಬೇಕೆಂದು ಮನವಿ ಮಾಡಿದರು. ಅಲ್ಲದೆ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಕೋರಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಶಾಸಕ ಪೊನ್ನಣ್ಣ ಅವರು ಕೆಂಬಟ್ಟಿ ಸಮಾಜದ ಬೇಡಿಕೆಗಳ ಕುರಿತು ಮುಖ್ಯಮಂತ್ರಿಗಳ ಗಮನ ಸೆಳೆದರು. ಕೆಂಬಟ್ಟಿ ಸಮಾಜದ ಬೇಡಿಕೆಗಳ ಮನವಿ ಪತ್ರವನ್ನು ಸಿಎಂಗೆ ಸಲ್ಲಿಸಿದರು. ಅಲ್ಲದೆ ಮುಖ್ಯಮಂತ್ರಿಗಳನ್ನು ಸನ್ಮಾನಿಸಿ ಗೌರವಿಸಿದರು.



ಕೆಂಬಟ್ಟಿ ಹೆಸರನ್ನು ಜಾತಿ ಪಟ್ಟಿಯಲ್ಲಿ ಸೇರಿಸುವಂತೆ ಕೆಂಬಟ್ಟಿ ಸಮಾಜದ ನಿಯೋಗ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತು

ಜೇನು ಹುಳುಗಳ ಕಡಿತಕ್ಕೆ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥ



ಜೇನು ಹುಳುಗಳ ಕಡಿತದಿಂದ ವಿದ್ಯಾರ್ಥಿಗಳು ವಿರಾಜಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡರು.

ಮಡಿಕೇರಿ, ನ.3– ಜೇನು ಹುಳುಗಳ ಕಡಿತದಿಂದ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವ ಘಟನೆ ವಿರಾಜಪೇಟೆಯಲ್ಲಿ ನಡೆದಿದೆ.

ಪಟ್ಟಣದ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಶಾಲೆಗೆ ಬಂದು ಎಂದಿನಂತೆ ಸಾಮೂಹಿಕ ಪ್ರಾರ್ಥನೆ ನೆರವೇರಿಸಿದ್ದರು. ಕೆಲ ಹೊತ್ತಿನ ಬಳಿಕ ಹಾಲು ಸೇವನೆಗೆಂದು ತೆರಳಿದಾಗ ಅಲ್ಲೇ ಗದ್ದೆ ಬಯಲಿನಿಂದ ಏಕಾಏಕಿ ಜೇನು ಹುಳುಗಳು ದಾಳಿ ನಡೆಸಿವೆ. ಈ ವೇಳೆ ಸುಮಾರು 30 ಮಂದಿ ವಿದ್ಯಾರ್ಥಿ ಗಳು ಸೇರಿದಂತೆ ಶಾಲೆಯ ಮುಖ್ಯಶಿಕ್ಷಕಿ ಪಿ.ಡಿ. ಅನ್ನಮ್ಮರವರೂ ಸಹ ಜೇನು ಹುಳಗಳ ಕಡಿತಕ್ಕೊಳಗಾಗಿದ್ದಾರೆ. ಕೂಡಲೇ ಎಲ್ಲರನ್ನೂ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದ್ದು, ಎಲ್ಲಾ ವಿದ್ಯಾರ್ಥಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ನಗರ ಠಾಣೆ ಅಧಿಕಾರಿ ಪ್ರಮೋದ್ ಕುಮಾರ್ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹದ್ದು ಜೇನುಗೂಡಿನ ಮೇಲೆ ದಾಳಿ ನಡೆಸಿದ ಪರಿಣಾಮ ಈ ಘಟನೆ ನಡೆದಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದೆ.

ಎಲ್ಲಾ ಸಮುದಾಯಕ್ಕೂ ಪಂಚ ಗ್ಯಾರಂಟಿ ಯೋಜನೆ ಸೌಲಭ್ಯ

ಸಚಿವ ಎನ್.ಚಲುವರಾಯಸ್ವಾಮಿ ಅಭಿಮತ

ಮಂಡ್ಯ, ನ.3– ಗ್ಯಾರಂಟಿ ಯೋಜನೆ ಕೇವಲ ಬಡವರಿಗೆ ಹಾಗೂ ದಲಿತರಿಗೆ ಸೀಮಿತವಾದದ್ದಲ್ಲ, ರಾಜ್ಯದಲ್ಲಿನ ಎಲ್ಲಾ ಸಮುದಾಯದವರಿಗಾಗಿ ರೂಪಿತವಾಗಿರುವುದೇ ಪಂಚ ಗ್ಯಾರಂಟಿ ಯೋಜನೆಯಾಗಿದ್ದು, ಪ್ರತಿ ಸಮುದಾಯದವರಿಗೂ ಇದರ ಸೌಲಭ್ಯ ತಲುಪಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಗ್ಯಾರಂಟಿ ಯೋಜನೆ ಕುರಿತು ಕಾರ್ಯಾಗಾರ ಹಾಗೂ ಪ್ರಗತಿ ಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಯನ್ನು ರಾಜ್ಯ ಸರ್ಕಾರವು ಬಡವರ ಜೀವನ ಸುಧಾರಣೆಗಾಗಿ ಜಾರಿಗೆ ತಂದಿದ್ದು ಇದು ರಾಹುಲ್ ಗಾಂಧಿಯವರ ಕನಸು ಆಗಿದೆ. ಮತ್ತು ಸಿದ್ದರಾಮಯ್ಯರವರ ಬಡವರ ಮೇಲಿನ ಕಾಳಜಿಯಿಂದ ಪಂಚ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿರುವುದು ಎಂದು ಹೇಳಿದರು.

ರಾಜ್ಯ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಉಪಾಧ್ಯಕ್ಷ ದಿನೇಶ್ ಗೂಳೀಗೌಡ ಮಾತನಾಡಿದರು. ಪಂಚ ಗ್ಯಾರಂಟಿ ಯೋಜನೆ ಕುರಿತು ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಗೃಹಲಕ್ಷ್ಮಿ ಹಣದಿಂದ ಸರ್ಕಾರಿ ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿರುವ ಶ್ರೀರಂಗಪಟ್ಟಣ ತಾಲೂಕಿನ ವಿಜಯಲಕ್ಷ್ಮಿ ಅವರನ್ನು ಗೌರವಿಸಲಾಯಿತು.



ತಮಗೆ ಬಂದ ಗೃಹಲಕ್ಷ್ಮಿ ಹಣದಿಂದ ಸರ್ಕಾರಿ ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿರುವ ಶ್ರೀರಂಗಪಟ್ಟಣ ತಾಲೂಕಿನ ವಿಜಯಲಕ್ಷ್ಮಿ ಅವರನ್ನು ಸಚಿವ ಚಲುವರಾಯಸ್ವಾಮಿ ಗೌರವಿಸಿದರು

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಚಿಕ್ಕಲಿಂಗಯ್ಯ, ಶಾಸಕರಾದ ರವಿಕುಮಾರ್, ಕೆ.ಎಂ ಉದಯ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷ ಸಿ.ಡಿ.ಗಂಗಾಧರ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ನಯೀಮ್, ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಸೂರಜ್ ಹೆಗ್ಡೆ, ಡಾ.ವಾಸು, ಜಿಲ್ಲಾಧಿಕಾರಿ ಡಾ. ಕುಮಾರ, ಜಿಪಂ ಸಿಇಒ ಕೆ.ಆರ್.ನಂದಿನಿ ಹಾಗೂ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಪುಟ್ಟಸ್ವಾಮಿಗೌಡರಿಗೆ ಅಭಿನಂದನೆ

ಪಾಂಡವಪುರ, ನ.3– ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್(ಡಿಸಿಸಿ) ನಿರ್ದೇಶಕರಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ನಿರ್ದೇಶಕ ಎಚ್.ಸಿ.ಪುಟ್ಟಸ್ವಾಮೀಗೌಡ(ಹೊಸಕೋಟೆಪುಟ್ಟಣ್ಣ) ಅವರನ್ನು ಪಟ್ಟಣದಲ್ಲಿ ಜೆಡಿಎಸ್ ಮುಖಂಡರು ಹಾಗೂ ಹಳೇಬೀಡು ಗ್ರಾಪಂ ವ್ಯಾಪ್ತಿಯ ಮುಖಂಡರು ಅಭಿನಂದಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡಿದ ನನ್ನನ್ನು ಗುರುತಿಸಿ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸುವ ಮೂಲಕ ನನ್ನನ್ನು ನಿರ್ದೇಶಕನಾಗಿ ಆಯ್ಕೆ ಮಾಡಿದ್ದಾರೆ. ಸಾಮಾಜಿಕ ನ್ಯಾಯದಡಿ ಸಾಮಾನ್ಯ ಕಾರ್ಯಕರ್ತರಿನಿಗೂ ಅಧಿಕಾರಿ ನೀಡಬೇಕು ಎಂಬ ಗುಣವುಳ್ಳಂತ ಅವರ ಸಲಹೆ, ಸೂಚನೆ, ಮಾರ್ಗದರ್ಶನದಲ್ಲಿ ಮುಂದಿನ ದಿನಗಳಲ್ಲಿ ಕೆಲಸ ಮಾಡುವ ಮೂಲಕ ರೈತರಿಗೆ ಅನುಕೂಲ ದೊರಕಿಸಿಕೊಡಲಾಗುವುದೆಂದು ಅಭಿನಂದನೆ ಸ್ವೀಕರಿಸಿದ ಎಚ್.ಸಿ.ಪುಟ್ಟಸ್ವಾಮೀಗೌಡ ತಿಳಿಸಿದರು. ಗ್ರಾಪಂ ಅಧ್ಯಕ್ಷ ಧನಂಜಯ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಎಚ್.ಲಿಂಗರಾಜು, ಮಾಜಿ ಅಧ್ಯಕ್ಷ ಕುಳ್ಳೇಗೌಡ, ಉಪಾಧ್ಯಕ್ಷ ಎಚ್.ಗುರುಮೂರ್ತಿ, ನಿರ್ದೇಶಕ ಎಚ್.ಎಂ.ರಮೇಶ್ ಮೊದಲಾದವರಿದ್ದರು.



ನಿರ್ದೇಶಕ ಪುಟ್ಟಸ್ವಾಮೀಗೌಡರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಸಾಹಿತಿಗಳ ಹೆಸರಿನಲ್ಲಿ ನಗರಗಳನ್ನು ನಿರ್ಮಿಸಿ ಕನ್ನಡಿಗರಿಗೆ ಸೂರು ಕಲ್ಪಿಸಿ

ಕೆ.ಆರ್.ಪೇಟೆ, ನ.3–ಬೆಂಗಳೂರಿನಲ್ಲಿ ಪರಭಾಷಿಕರ ಹಾವಳಿ ಜಾಸ್ತಿಯಾಗಿದ್ದು, ಕನ್ನಡಿಗರು ಅಲ್ಪಸಂಖ್ಯಾತರಾಗಿ ಜೀವನ ನಡೆಸುತ್ತಿದ್ದಾರೆ. ಸಾಹಿತಿಗಳ ಹೆಸರಿನಲ್ಲಿ ನಗರಗಳನ್ನು ನಿರ್ಮಾಣ ಮಾಡಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಕನ್ನಡಿಗರಿಗೆ ಸ್ವಂತ ಸೂರು ಕಲ್ಪಿಸುವ ಮೂಲಕ ಕನ್ನಡಿಗರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಕೇಂದ್ರಾಡಳಿತ ಪ್ರದೇಶವಾಗುವ ಅಪಾಯವಿದೆ ಎಂದು ಶಾಸಕ ಹೆಚ್.ಟಿ.ಮಂಜು ಆತಂಕ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ತಾಲೂಕು ಪಂಚಾಯಿತಿ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕ ಹಾಗೂ ತಾಲೂಕು ಘಟಕದ ವತಿಯಿಂದ ನಡೆಸಿದ ರಾಜ್ಯೋತ್ಸವದಲ್ಲಿ ನಾಡ ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ವಾಸಿಸುವ ಪ್ರತಿಯೊಬ್ಬ ಪರಭಾಷಿಕರು ಕನ್ನಡ ಭಾಷೆಯನ್ನು ಕಲಿಯಬೇಕು ಎಂದರು.

ಕನ್ನಡಿಗರ ಸಬಲೀಕರಣಕ್ಕೆ ಬೆಂಗಳೂರಿನಲ್ಲಿ ವಾಸವಿರುವ ಕನ್ನಡಿಗರಿಗೆ ವಿಶೇಷ ಪ್ಯಾಕೇಜ್ ಒದಗಿಸಿ ಕನ್ನಡಿಗರ ಸಬಲೀಕರಣಕ್ಕೆ ಮುಂದಾಗಬೇಕು. ತೆಲುಗು ಬಾರದಿದ್ದರೆ ಆಂಧ್ರ–ತೆಲಂಗಾಣದಲ್ಲಿ, ತಮಿಳು ಬಾರದಿದ್ದರೆ ತಮಿಳು ನಾಡಿನಲ್ಲಿ, ಮಲಯಾಳಂ ಬಾರದಿದ್ದರೆ ಕೇರಳದಲ್ಲಿ ವಾಸಿಸಲು ಹೇಗೆ ಸಾಧ್ಯವಾಗುವುದಿಲ್ಲ. ಅದೇ ರೀತಿಯ ಕರ್ನಾಟಕದಲ್ಲಿ ವಾಸಿಸಲು ಕನ್ನಡ ಭಾಷೆ ಕಡ್ಡಾಯವಾಗಿ ಕಲಿಯಬೇಕು ಎಂಬ ವಾತಾವರಣವನ್ನು ನಿರ್ಮಾಣ ಮಾಡುವ ಮೂಲಕ ಭಾಷೆಯ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಶಾಸಕ ಹೆಚ್.ಟಿ.ಮಂಜು ಎಂದು ಒತ್ತಾಯ ಮಾಡಿದರು.



ಕನ್ನಡ ರಾಜ್ಯೋತ್ಸವದಲ್ಲಿ ಶಾಸಕ ಹೆಚ್.ಟಿ.ಮಂಜು ಧ್ವಜಾರೋಹಣ ಮಾಡಿದರು.

ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷ ಬಿ.ನಾಗೇಂದ್ರಕುಮಾರ್ ಮಾತನಾಡಿದರು. ಗವೀಮಠದ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಕರವೇ ಅಧ್ಯಕ್ಷ ಡಿ.ಎಸ್.ವೇಣು, ಉಪಾಧ್ಯಕ್ಷ ಸಾಸಲು ಗುರುಮೂರ್ತಿ, ತಾಲ್ಲೂಕು ಅಧ್ಯಕ್ಷ ಟೆಂಪೋ ಶ್ರೀನಿವಾಸ್, ಪದವೀಧರ ಘಟಕದ ಅಧ್ಯಕ್ಷ ಸಿ.ಬಿ.ಚೇತನ್‌ಕುಮಾರ್, ಕೊಮ್ಮೇನಹಳ್ಳಿ ಅನಿಲ್–ಸುನೀಲ್, ಪದಾಧಿಕಾರಿಗಳಾದ ಹೊಸಹೊಳಲು ಗೋಪಿ, ಆನಂದ್, ಮನು, ಸ್ವಾಮಿ, ಸೋಮ ಶೇಖರ್, ಅಗ್ರಹಾರ ಬಾಚಹಳ್ಳಿ ಸ್ವಾಮಿ, ಸೊಳ್ಳೇಪುರ ಪದ್ಮನಾಭ್, ಜಾಹೀರ್, ನಜೀರ್, ಲೋಲಾಕ್ಷಿ ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ವಿಸಿ ನಾಲೆಗೆ ಬಿದ್ದ ಕಾರು: ಚಾಲಕ ಪಾರು



ಮಂಡ್ಯ, ನ.3–ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಬಳಿ ವಿ.ಸಿ. ನಾಲೆಗೆ ಕಾರೊಂದು ಪಲ್ಟಿಯಾದ ಪರಿಣಾಮ ಕಾರು ಚಾಲಕ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ಬಿ.ಯರಹಳ್ಳಿ ಗ್ರಾಮದಲ್ಲಿ ನಡೆದಿದೆ. ಸೋಮವಾರ ಬೆಳಗಿನ ಜಾವ 4.30ರ ಸಮಯದಲ್ಲಿ ನಗರದ ಕಲ್ಲಹಳ್ಳಿ ನಿವಾಸಿ ಕೃಷ್ಣ ಎಂಬುವರು ತಡೆಗೋಡೆ ಇಲ್ಲದ ಬಿ.ಯರಹಳ್ಳಿಯ ವಿ.ಸಿ.ನಾಲಾ ರಸ್ತೆಯಲ್ಲಿ ಹೋಗುತ್ತಿದ್ದ ಸಂದರ್ಭದಲ್ಲಿ ರಸ್ತೆ ಕಿರಿದಾಗಿದ್ದರಿಂದ ಜೊತೆಗೆ ಕತ್ತಲಾಗಿದ್ದರಿಂದ ಕಾರು ಆಯತಪ್ಪಿ ನಾಲೆಗೆ ಬಿದ್ದಿದೆ.

ಚಾಲಕ ಕೃಷ್ಣ ಸಮಯಪ್ರಜ್ಞೆಯಿಂದ ಜೀವ ಉಳಿಸಿಕೊಂಡಿದ್ದು, ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಕಾರನ್ನು ಮೇಲೆತ್ತಿದ್ದಾರೆ. ಮಂಡ್ಯ ಗ್ರಾಮಾಂತರ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ.

ರಾಜಲಕ್ಷ್ಮಿ ನಿಧನ



ಚಿನಕುರಳಿ, ನ.3– ಕನಗನಹಳ್ಳಿ ಗ್ರಾಮದ ನಿವಾಸಿ ರಾಜಲಕ್ಷ್ಮಿ (79) ಅವರು ಸೋಮವಾರ ಬೆಳಿಗ್ಗೆ ನಿಧನರಾದರು.

ಮೃತ ರಾಜಲಕ್ಷ್ಮೀ ಅವರಿಗೆ ಸಹೋದರ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ರಾಮಕೃಷ್ಣೇಗೌಡ, ಪುತ್ರಿ ಜಿಪಂ ಮಾಜಿ ಸದಸ್ಯೆ ಶಾಂತಲ ರಾಮಕೃಷ್ಣೇಗೌಡ ಸೇರಿದಂತೆ ಇಬ್ಬರು ಪುತ್ರಿಯರು, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿ ಅಂತಿಮ ದರ್ಶನಪಡೆದರು. ಸೋಮವಾರ ಮಧ್ಯಾಹ್ನ ಗ್ರಾಮದ ಹೊರವಲಯದ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ಸುದರ್ಶನ್



ಚಿನಕುರಳಿ, ನ.3– ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ದೇವಸ್ಥಾನದ ಅರ್ಚಕ ಸುದರ್ಶನ್(60) ಅನಾರೋಗ್ಯದಿಂದ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಚಿನಕುರಳಿ ಗ್ರಾಮದ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ಸೋಮವಾರ ಸಂಜೆ ನಡೆಯಿತು.

ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ



ದೂಳ್ಳಿಪುರದಿಂದ ಬ್ಯಾಡಮೂಡ್ಲು ಗ್ರಾಮಕ್ಕೆ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು

ಚಾಮರಾಜನಗರ, ನ.3–ಗ್ರಾಮೀಣ ರಸ್ತೆಗಳು ಮತ್ತು ಸಂಪರ್ಕ ರಸ್ತೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು, ರಸ್ತೆಗಳು ಗ್ರಾಮೀಣ ಅಭಿವೃದ್ಧಿಯ ಪ್ರತೀಕವಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ಲೋಕೋಪಯೋಗಿ ಇಲಾಖೆ ವತಿಯಿಂದ 2 ಕೋಟಿ ರೂ ವೆಚ್ಚದಲ್ಲಿ ತಾಲೂಕಿನ ದೂಳ್ಳಿಪುರ ಗ್ರಾಮದಿಂದ ಬ್ಯಾಡ ಮೂಡ್ಲು ಗ್ರಾಮಕ್ಕ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ತಮ್ಮ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ರಸ್ತೆ. ಕುಡಿಯುವ ನೀರು, ಸಮುದಾಯ ಭವನ, ನಾಗರಿಕರ ಬೇಡಿಕೆಗೆ ಪೂರಕವಾಗುವಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿವಿಧ ಯೋಜನೆಗಳಡಿ ಅನುದಾನ ಮಂಜೂರು ಮಾಡಿಸಿ, ಸಿಸಿ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು. ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಗುತ್ತಿಗೆದಾರರಿಗೆ ಶಾಸಕರು ಸೂಚಿಸಿದರು. ಗ್ರಾಪಂ ಸದಸ್ಯರಾದ ಭಾಗ್ಯಮ್ಮ, ಮಂಜುನಾಥ್, ಮಾಜಿ ಗ್ರಾಪಂ ಅಧ್ಯಕ್ಷ ಬ್ಯಾಡಮೂಡ್ಲು ನಾಗರಾಜು, ಕೃಷ್ಣಶೆಟ್ಟಿ ಸೇರಿದಂತೆ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಮಾದಪ್ಪನ ಬೆಟ್ಟಕ್ಕೆ ಹರಿದು ಬಂದ ಭಕ್ತಸಾಗರ

ಹನೂರು: ತಾಲೂಕಿನ ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳ ಮಲೆ ಮಹದೇಶ್ವರ ಬೆಟ್ಟಕ್ಕೆ ಸಾವಿರಾರು ಮಂದಿ ಭಕ್ತರು ಭೇಟಿ ನೀಡಿ ಮಾದಪ್ಪನ ದರ್ಶನ ಪಡೆದರು.



ಬೆಟ್ಟದಲ್ಲಿ ದೀಪಾವಳಿ ಜಾತ್ರಾ ಮಹೋತ್ಸವ ಪ್ರಯುಕ್ತ ಲಕ್ಷಾಂತರ ಭಕ್ತಾದಿಗಳು ಭೇಟಿ ನೀಡಿದ್ದರು. ಶನಿವಾರ, ಭಾನುವಾರ ಹಾಗೂ ಕಾರ್ತಿಕ ಸೋಮವಾರದ ವಿಶೇಷ ದಿನಗಳಂದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಭೇಟಿ ನೀಡಿ ತಮ್ಮ ಹರಕೆ ಕಾಣಿಕೆಗಳನ್ನು ಸಲ್ಲಿಸಿ ದೇವರ ದರ್ಶನ ಪಡೆದರು. ಹರಕೆಹೊತ್ತ ಭಕ್ತರು ಮುಡಿಸೇವೆ, ಉರುಳುಸೇವೆ, ಪಂಜಿನ ಸೇವೆ ಹಾಗೂ ರಜಾ ಹೊಡೆಯುವ ಸೇವೆಯನ್ನು ಕೈಗೊಂಡಿದ್ದರು. ಚಿನ್ನದ ರಥೋತ್ಸವ, ಬೆಳ್ಳಿ ರಥೋತ್ಸವ, ಬಸವ ವಾಹನ, ಹುಲಿ ವಾಹನ ರುದ್ರಾಕ್ಷಿ ಮಂಟಪ ಸೇವೆಗಳು ನೆರವೇರಿದವು.

ಚಿನ್ನದ ತೇರಿನ ಟಿಕೆಟ್ ಮಾರಾಟ: ಚಿನ್ನದ ತೇರು ಎಳೆಸಲು ಹರಕೆ ಹೊತ್ತ ಭಕ್ತರು ವಾರಾಂತ್ಯದಲ್ಲಿ ದಾಖಲೆಯ ಟಿಕೆಟ್ ಖರೀದಿ ಮಾಡಿ ಚಿನ್ನದ ತೇರು ಎಳೆದಿದ್ದಾರೆ. ಇದೇ ಮೊದಲ ಬಾರಿಗೆ ವಾರಾಂತ್ಯದಲ್ಲಿ 540 ಟಿಕೆಟ್ ಖರೀದಿಯಾಗಿದ್ದು ಚಿನ್ನದ ತೇರಿನ ಟಿಕೆಟ್ ಮಾರಾಟವಾಗಿದೆ. ದಾಖಲೆ ಮೊತ್ತದಲ್ಲಿ ಹಣ ಪ್ರಾಧಿಕಾರಕ್ಕೆ ಹರಿದು ಬಂದಿದೆ.

ಬೆಟ್ಟಕ್ಕೆ ಆಗಮಿಸಿದ್ದ ಭಕ್ತಾದಿಗಳ ಅನುಕೂಲಕ್ಕೆ ಪ್ರಾಧಿಕಾರದಿಂದ ಸಕಲ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ವಿಶೇಷ ಚೇತನರು ಹಾಗೂ ವಯೋವೃದ್ಧರಿಗೆ ರಾಜಗೋಪುರದ ಪ್ರತ್ಯೇಕ ಕ್ಯೂನಲ್ಲಿ ನೇರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಬಾರಿ ನೂಕು ನುಗ್ಗಲು ಆಗದಂತೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಅತಿಥಿ ಗಣ್ಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಕುಡಿಯುವ ನೀರು, ವಿಶೇಷ ದಾಸೋಹ, ನೆರಳಿನ ವ್ಯವಸ್ಥೆ ಕಲ್ಪಿಸಲಾಗಿತ್ತು.

ಹದಿಹರೆಯದ ಹೆಣ್ಣು ಮಕ್ಕಳ ಸಮಗ್ರ ಯೋಗಕ್ಷೇಮಕ್ಕೆ ಪ್ರಾಣಸಖಿ ನೆರವಾಗಲಿದೆ

ಚಾಮರಾಜನಗರ, ನ.3–ಜಿಲ್ಲೆಯಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಆರೋಗ್ಯ, ಶಿಕ್ಷಣ, ಮಾರ್ಗದರ್ಶನ, ಅಪೌಷ್ಟಿಕತೆಯಲ್ಲಿ ಸುಧಾರಣೆ, ಆತ್ಮವಿಶ್ವಾಸ ಸಬಲೀಕರಣ ಹಾಗೂ ಸಮಗ್ರ ಯೋಗಕ್ಷೇಮಕ್ಕೆ 'ಪ್ರಾಣಸಖಿ' ಕಾರ್ಯಕ್ರಮ ನೆರವಾಗಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದರು.



ಪ್ರಾಣಸಖಿ ಕಾರ್ಯಕ್ರಮ ಕುರಿತು ವಿವಿಧ ಶಾಲಾ ಶಿಕ್ಷಕರಿಗೆ ಹಮ್ಮಿಕೊಳ್ಳಲಾಗಿದ್ದ ತರಬೇತಿಯಲ್ಲಿ ವಿವಿಧ ಆಸನಗಳನ್ನು ಮಾಡಿಸುತ್ತಿರುವುದನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್ ವೀಕ್ಷಿಸಿದರು

ನಗರದ ಜಿಲ್ಲಾ ಪಂಚಾಯತ್ ಹಳೇ ಕೆಡಿಪಿ ಸಭಾಂಗಣದಲ್ಲಿಂದು ಅನುಷ್ಠಾನಗೊಳಿಸುತ್ತಿರುವ "ಪ್ರಾಣಸಖಿ" ಕಾರ್ಯಕ್ರಮ ಕುರಿತು ವಿವಿಧ ಶಾಲಾ ಶಿಕ್ಷಕರಿಗೆ ಹಮ್ಮಿಕೊಳ್ಳಲಾಗಿದ್ದ ತರಬೇತಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಜಿಲ್ಲೆಯ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 10ರಿಂದ 19ರ ವಯೋಮಾನದ ಹದಿಹರೆಯದ ಹೆಣ್ಣುಮಕ್ಕಳಲ್ಲಿ ಆರೋಗ್ಯ ಕುರಿತ ಸೀಮಿತ ಅರಿವು, ಪೌಷ್ಟಿಕಾಂಶದ ತಿಳಿವಳಿಕೆಯ ಕೊರತೆ, ಬಾಲ್ಯವಿವಾಹದ ಒತ್ತಡ ಹಾಗೂ ತಮ್ಮ ಭಾವನೆಗಳನ್ನು ಸುರಕ್ಷಿತವಾಗಿ ಅಭಿವ್ಯಕ್ತಪಡಿಸಲು ಅವಕಾಶಗಳ ಸವಾಲನ್ನು ಎದುರಿಸುತ್ತಿರುವುದು ಕಂಡುಬಂದಿದೆ. ಪ್ರಾಣಸಖಿ ಕಾರ್ಯಕ್ರಮವು ಈ ಅಂತರವನ್ನು ಕಡಿಮೆ ಮಾಡಿ ಸಮಗ್ರ ಹಾಗೂ ಮಾನವ ಕೇಂದ್ರಿತ ವಿಧಾನಗಳ ಮೂಲಕ ಸಮಸ್ಯೆಗಳನ್ನು ನಿವಾರಿಸಲು ಸಹಾಯಕವಾಗಲಿದೆ ಎಂದರು.

ಪ್ರಾಣಸಖಿ ಕಾರ್ಯಕ್ರಮ ಅನುಷ್ಠಾನದಿಂದ ಶಾಲೆಗಳಲ್ಲಿ ನಿರ್ಮಿಸಲಾದ ಸುರಕ್ಷಿತ ಸ್ಥಳಗಳಲ್ಲಿ ಹದಿಹರೆಯದ ಬಾಲಕಿಯರಿಗೆ ಮುಟ್ಟಿನ ನೈರ್ಮಲ್ಯ, ವಿಶ್ರಾಂತಿ, ಆರೋಗ್ಯ ಸಂಬಂಧಿತ ಮಾಹಿತಿ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಶಾಲೆಗಳು, ವಿದ್ಯಾರ್ಥಿನಿಲಯಗಳಲ್ಲಿ ಶುಚಿ ಪ್ಯಾಡ್ ಒದಗಿಸಲಾಗುತ್ತದೆ. ಮುಟ್ಟಿನ ದಿನಗಳಲ್ಲಿ ಹೆಣ್ಣುಮಕ್ಕಳು 4–5 ದಿನಶಾಲೆಗೆ ಗೈರಾಗುತ್ತಾರೆ. ಇದರಿಂದ ಶಾಲಾ ಕಾರ್ಯಕ್ರಮದಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಕುಂಠಿತವಾಗಿ ಕಲಿಕೆಗೆ ತೊಂದರೆಯಾಗಲಿದೆ. ಹೆಣ್ಣುಮಕ್ಕಳು ಪ್ರತಿದಿನವು ಶಾಲೆಗೆ ಬರುವಂತಾಗಬೇಕು. ಪ್ರಾಣಸಖಿ ಕಾರ್ಯಕ್ರಮದಿಂದ ನೈರ್ಮಲ್ಯ ಅಭ್ಯಾಸಗಳ ಅರಿವಿನಿಂದ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಕಡಿಮೆಯಾಗಲಿದೆ ಎಂದರು

ನರೇಗಾ, ಸ್ವಚ್ಛಭಾರತ್ ಮಿಷನ್ ಸೇರಿದಂತೆ ಇತರೆ ಯೋಜನೆಗಳಡಿ ಎಲ್ಲಾ ಶಾಲೆಗಳಲ್ಲಿಯೂ ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಆದರೂ ಕೆಲ ಶಾಲೆಗಳಲ್ಲಿ ನೀರಿನ ಸಮಸ್ಯೆ ಇದೆ. ಹಾಸ್ಟೆಲ್‌ಗಳಲ್ಲಿ ಓದುವ ಕೆಲ ಹೆಣ್ಣುಮಕ್ಕಳಿಗೆ ತಮ್ಮ ಸಮಸ್ಯೆ ಹೇಳಿಕೊಳ್ಳಲು ತಾಯಿ ಇರುವುದಿಲ್ಲ. ಪ್ರಾಣಸಖಿ ಎಂದರೇ ಪ್ರಾಣಸ್ನೇಹಿತೆ ಎಂದರ್ಥ. ಮಹಿಳಾ ಶಿಕ್ಷಕರೇ ಮಕ್ಕಳಿಗೆ ಸ್ನೇಹಿತರಾಗುವ ಮೂಲಕ ಮಕ್ಕಳಿಗೆ ತಂದೆ– ತಾಯಿಯಾಗಬೇಕು. ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಬೇಕು. ಅದಕ್ಕಾಗಿ ಈಗಿನಿಂದಲೇ ಶಿಕ್ಷಕರು ಪರಿಶ್ರಮ ಹಾಕಬೇಕು. ಕಾರ್ಯಕ್ರಮದಿಂದ ಸಾಕಷ್ಟು ಹೆಣ್ಣುಮಕ್ಕಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಆರು ತಿಂಗಳಿನಿಂದ 6 ವರ್ಷದ ಅಂಗನವಾಡಿ ಮಕ್ಕಳ ವಾಕ್ ಮತ್ತು ಶ್ರವಣ ಸಮಸ್ಯೆ ಗುರುತಿಸಿ, ಪರಿಹರಿಸುವ ಸಲುವಾಗಿ ಇಡೀ ರಾಜ್ಯದಲ್ಲಿಯೇ ಮೊದಲ ಬಾರಿಗೆ ಜಿಲ್ಲೆಯಲ್ಲಿ 'ಪ್ರಯಾಸ್' ಕಾರ್ಯಕ್ರಮ ಅನುಷ್ಠಾನ ಮಾಡಲಾಗಿತ್ತು. ಇದೇ ಮಾದರಿ ಯಲ್ಲಿ ಪ್ರಾಣಸಖಿಯು ಯಶಸ್ವಿಯಾಗ ಬೇಕು. ಪ್ರಯಾಸ್ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಕಿವಿ, ಮಾತಿನ ದೋಷವುಳ್ಳ 37 ಸಾವಿರ ಮಕ್ಕಳನ್ನು ಸ್ಕ್ರೀನಿಂಗ್ ಮಾಡಲಾಗಿದ್ದು, ಈ ಪೈಕಿ 16 ಸಾವಿರ ಮಕ್ಕಳಿಗೆ ಸಮಸ್ಯೆ ಇರುವುದು ತಿಳಿದು ಬಂದಿದೆ. ಕಳೆದ ವಾರ ಗುಂಡ್ಲುಪೇಟೆ ತಾಲೂಕಿನಲ್ಲಿ ಸ್ಕ್ರೀನಿಂಗ್ ಆರಂಭಿಸಲಾಗಿದ್ದು, ಮುಂದಿನ ಫೆಬ್ರವರಿ ಶ್ರವಣ, ವಾಕ್ ದೋಷ ಮುಕ್ತ ಜಿಲ್ಲೆಯಾಗಿಸಲು ಗುರಿ ಹೊಂದಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಜಾನ್ ಶಾಂತಕುಮಾರ್ ಪಿ.ಪಿ.ಟಿ ಹಾಗೂ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಪ್ರಾಣಸಖಿ ಕಾರ್ಯಕ್ರಮದ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ ಎಸ್. ಚಿದಂಬರ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚಂದ್ರಕಾಂತ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಐಎಚ್‌ಸಿ ಆರ್‌ಎಫ್ ಸಂಸ್ಥೆಯ ಮಲ್ಲಿ ಕಾರ್ಜುನ, ವಿಘ್ನೇಶ್, ಕಾರ್ತಿಕೇಯ ಗೋಪಿನಾಥನ್, ಪಲ್ಲವಿ, ಧನಲಕ್ಷ್ಮೀ, ಎಲ್ಲಾ ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿ ಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 4 ನವೆಂಬರ್ 2025

ಮೈಸೂರು ಡಿಸಿ ಕಚೇರಿ ಮುಂದೆ ಡಿ.ದೇವರಾಜ ಅರಸು ಪ್ರತಿಮೆ ಸಿಎಂ ಸಿದ್ದರಾಮಯ್ಯ ಅನಾವರಣ

ಸಾಮಾಜಿಕ ನ್ಯಾಯಪರ, ಅರಸು ಗುಣಗಾನ ಮಾಡಿದ ಮುಖ್ಯಮಂತ್ರಿಗಳು



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ನೂತನ ಕಚೇರಿ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಅನಾವರಣಗೊಳಿಸಿದರು.

ಮೈಸೂರು,ನ.3(ಎಂಟಿವೈ)– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ನೂತನ ಕಚೇರಿ ಮುಂದೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಪ್ರತಿಮೆಯನ್ನು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರು ತಿಂಗಳ ಹಿಂದೆಯೇ ಪ್ರತಿಷ್ಠಾಪಿಸಿ ಪರದೆ ಮುಚ್ಚಿದ್ದ ಡಿ.ದೇವರಾಜ ಅರಸು ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿ, ಪುಷ್ಪಾರ್ಚನೆ ಮಾಡಿ ಗೌರವ ಸಮರ್ಪಿಸಿದರು.

ಸಾಮಾಜಿಕ ನ್ಯಾಯದ ಹರಿಕಾರ: ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿ, ಡಿ.ದೇವರಾಜ ಅರಸು ಮೈಸೂರು ಜಿಲ್ಲೆಯವರೇ ಆಗಿದ್ದು, ಸುದೀರ್ಘ 8 ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. ನಾನು ಆಗ ಜನತಾ ಪರಿವಾರದಲ್ಲಿದ್ದೆ, ದೇವರಾಜ ಅರಸ್ ಕಾಂಗ್ರೆಸ್‌ನಲ್ಲಿದ್ದರು. ಆದರೆ, ದೇವರಾಜ ಅರಸು ಅವರ ಸಾಮಾಜಿಕ ನ್ಯಾಯ ಬದ್ಧತೆ ನಮ್ಮೆಲ್ಲರಿಗೂ ಮಾದರಿಯಾಗಿತ್ತು. ಅಸಮಾನತೆಯನ್ನು ಹೋಗಲಾಡಿಸಲು ಅವರು ತಮ್ಮ ಕಾರ್ಯಕ್ರಮಗಳ ಮೂಲಕ ಶ್ರಮಿಸಿದರು. ಅಲ್ಲದೆ, ಪ್ರಾತಿನಿಧ್ಯತೆ ಇಲ್ಲದ ಸಣ್ಣ ಸಮುದಾಯಗಳಿಗೆ ಅವಕಾಶ ನೀಡಿದರು. ಇದರಿಂದ ಹಲವು ಸೂಕ್ಷ್ಮ ಸಮುದಾಯದ ಜನ ವಿಧಾನಸೌಧದ ಮೆಟ್ಟಿಲು ಹತ್ತಲು ಸಾಧ್ಯವಾಯಿತು ಎಂದರು.

ನೊಂದವರ ಪರ ಇದ್ದ ಡಿ.ದೇವರಾಜ ಅರಸ್ ಅವರ ಕಾರ್ಯವೈಖರಿ ಇತರೆ ರಾಜಕಾರಣಿಗಳಿಗೆ ಮಾದರಿಯಾಗಿದೆ. ಸಮಾಜದಲ್ಲಿರುವ ಅಸಮಾನತೆ ಹೋಗಲಾಡಿಸಲು ರಾಜಕಾರಣಿಗಳು ಮುಂದಾಗಬೇಕು. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ನ್ಯಾಯ ಒದಗಿಸಬೇಕು. ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿರುವ ಸಮುದಾಯಗಳಿಗೆ ದೇವರಾಜ ಅರಸು ನ್ಯಾಯ ಒದಗಿಸುವ ಕೆಲಸ ಮಾಡಿದರು. ದೇವರು ನಮಗೆ ವರವನ್ನೂ ನೀಡುವುದಿಲ್ಲ, ಶಾಪವನ್ನೂ ನೀಡುವುದಿಲ್ಲ. ಆದರೆ ಅವಕಾಶ ನೀಡುತ್ತಾನೆ. ಸಿಕ್ಕ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣ. ಆ ಕಾರಣದಿಂದಾಗಿಯೇ ದೇವರಾಜ ಅರಸು ಅವರು ಸಣ್ಣ ಪುಟ್ಟ ಸಮುದಾಯಗಳಿಗೆ ಅವಕಾಶ ಕಲ್ಪಿಸಿಕೊಟ್ಟರು. ಅವಕಾಶ ವಂಚಿತ ಸಮಾಜಗಳಿಗೆ ನ್ಯಾಯ ಒದಗಿಸುವ ಕಾರ್ಯ ಮಾಡಿದ್ದಾರೆ. ಆ ಮೂಲಕ ಸಮಾಜದಲ್ಲಿರುವ ತಪ್ಪುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವರಾಜ ಅರಸು ಅವರ ಪ್ರತಿಮೆ ಉದ್ಘಾಟನಾ ಸಮಾರಂಭ ಅದ್ಧೂರಿಯಾಗಿ ನೆರವೇರಬೇಕಿತ್ತು. ನವೆಂಬರ್ 15ಕ್ಕೆ ಉದ್ಘಾಟನೆ ಮಾಡಲು ಚಿಂತಿಸಲಾಗಿತ್ತು. ಆದರೆ ಇಂದು ಉದ್ಘಾಟನೆ ನೆರವೇರಿದೆ. ಮೈಸೂರು ಜಿಲ್ಲೆ ದೇವರಾಜ ಅವರ ಜನ್ಮಭೂಮಿ. ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಅವರ ಪ್ರತಿಮೆ ನಿರ್ಮಿಸುವ ಚಿಂತನೆ ಮೊದಲಿನಿಂದಲೂ ಇತ್ತು. ಸಾಕಷ್ಟು ಜನ ಪ್ರತಿಮೆ ನಿರ್ಮಾಣಕ್ಕೆ ಅಪೇಕ್ಷೆ ಪಟ್ಟಿದ್ದರು. ಜನರ ಅಪೇಕ್ಷೆಯನ್ನು ನಮ್ಮ ಸರ್ಕಾರ ಈಡೇರಿಸಿದೆ ಎಂದರು.

ಏಕೀಕರಣವಾಗಿದ್ದರೂ ರಾಜ್ಯಕ್ಕೆ 'ಕರ್ನಾಟಕ' ಎಂದು ಡಿ.ದೇವರಾಜ ಅರಸರು ನಾಮಕರಣ ಮಾಡಿ 52ವರ್ಷ ಕಳೆದಿದೆ. ಈ ಸಂಭ್ರಮಾಚರಣೆಯನ್ನು ಈ ಹಿಂದೆ ಇದ್ದ ಬಿಜೆಪಿ ಸರ್ಕಾರ ಮಾಡ ಬೇಕಾಗಿತ್ತು. ಆದರೆ, ನಮ್ಮ ಸರ್ಕಾರ ಕಳೆದ ವರ್ಷ ರಾಜ್ಯದಾದ್ಯಂತ ರಥಯಾತ್ರೆ ನಡೆಸಿದ ಬಳಿಕ ವಿಧಾನಸೌಧದ ಮುಂದೆ ಭುವನೇಶ್ವರಿ ಪ್ರತಿಮೆಯನ್ನು ಅನಾವರಣ ಮಾಡಿದೆ. ದೇವರಾಜ ಅರಸು ಅವರ ಹುಟ್ಟೂರಾದ ಕಲ್ಲಹಳ್ಳಿಯಲ್ಲಿ ದೇವರಾಜ ಅರಸು ಅವರ ಸ್ಮಾರಕ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಶಾಸಕ ತನ್ವೀರ್ ಸೇಠ್ ಮಾತನಾಡಿ, ಡಿ.ದೇವರಾಜ ಅರಸು ಅವರು ಸಮಾಜದಲ್ಲಿರುವ ಅನಿಷ್ಟ ಪದ್ಧತಿಯನ್ನು ದೂರ ಮಾಡಲು ಪ್ರಯತ್ನಿಸಿದರು. ಶೋಷಿತ ವರ್ಗಗಳಿಗೆ ನ್ಯಾಯ ಒದಗಿಸುವ ಕೆಲಸ ಮಾಡಿದ್ದಾರೆ. ಅವರ ಹುಟ್ಟೂರಾದ ಕಲ್ಲಹಳ್ಳಿಯಲ್ಲಿ ಸ್ಮಾರಕ ಮಾಡಿ ಅಭಿವೃದ್ಧಿಪಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರುಗಳಾದ ಡಿ.ರವಿಶಂಕರ್, ಸಿ ಪುಟ್ಟರಂಗಶೆಟ್ಟಿ, ವಿಧಾನ ಪರಿಷತ್ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಡಾ.ಯತೀಂದ್ರ, ಕೆ.ಶಿವಕುಮಾರ್, ದೇವರಾಜ ಅರಸು ಅವರ ಪುತ್ರಿ ಭಾರತಿ ಅರಸ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

> ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷ ಕಳೆದಿದ್ದರೂ ಇಂದಿಗೂ ಅಸಮಾನತೆ ಇದೆ. ಸಂವಿಧಾನ ಜಾರಿಯಾಗಿದ್ದರೂ, ಅಸ್ಪೃಶ್ಯತೆ, ಅಸಮಾನತೆ ಇಂದಿಗೂ ಆಚರಣೆಯಲ್ಲಿದೆ. ಅದನ್ನು ಹೋಗಲಾಡಿಸಬೇಕಾದ ಕರ್ತವ್ಯ ನಮ್ಮದಾಗಿದೆ. ಜಾತಿ ವ್ಯವಸ್ಥೆಯಿಂದ ಅಸಮಾನತೆ ಉಂಟಾಗಿದೆ, ಕೆಲವು ಸಮಾಜಗಳು ಅಕ್ಷರ ಸಂಸ್ಕೃತಿಯಿಂದ ದೂರ ಇದ್ದ ಹಿನ್ನೆಲೆಯಲ್ಲಿ ವೈರುಧ್ಯ, ಅಸಮಾನತೆ ಉಂಟಾಗಿದೆ, ನಮ್ಮ ಸರ್ಕಾರ ಅಸಮಾನತೆಯನ್ನು ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ. ವಿದ್ಯೆ ಯಾರ ಅಪ್ಪನ ಸ್ವತ್ತಲ್ಲ. ಹಾಗಾಗಿ ಅವಕಾಶ ಬಳಸಿಕೊಂಡು ಶಿಕ್ಷಣ ಪಡೆದು ಸಾಧನೆ ಮಾಡುವ ನಿಟ್ಟಿನಲ್ಲಿ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಂದು ದೇವರಾಜ ಅರಸು; ಇಂದು ಸಿದ್ದರಾಮಯ್ಯ!

ಮೈಸೂರು, ನ.3– ತಮ್ಮನ್ನು ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರಿಗೆ ಹೋಲಿಸಿ ಅಭಿಮಾನಿಗಳು ಘೋಷಣೆ ಕೂಗಿದ್ದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ ಆದ ಘಟನೆ ಇಂದು ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ನಡೆಯಿತು. ದೇವರಾಜ ಅರಸು ಪ್ರತಿಮೆ ಲೋಕಾರ್ಪಣೆ ಬಳಿಕ ಸಭಾ ಕಾರ್ಯಕ್ರಮದಲ್ಲಿ ಭಾಷಣ ಮಾಡಲು ಮುಖ್ಯಮಂತ್ರಿಗಳು ಪೋಡಿಯಂ ಬಳಿ ಬರುತ್ತಿದ್ದಂತೆಯೇ ಅಭಿಮಾನಿಗಳು 'ಅಂದು ದೇವರಾಜ ಅರಸು, ಇಂದು ಸಿದ್ದರಾಮಯ್ಯ' ಎಂದು ಘೋಷಣೆ ಕೂಗಿದರು.

ಘೋಷಣೆ ಕಿವಿಗೆ ಬೀಳುತ್ತಿದ್ದಂತೆಯೇ ಗರಂ ಆದ ಸಿದ್ದರಾಮಯ್ಯ, ;ಹೇ... ಯಾರು ಘೋಷಣೆ ಕೂಗಿದ್ದು, 'ದೇವರಾಜ ಅರಸು ದೇವರಾಜ ಅರಸುರವರೇ... ಸಿದ್ದರಾಮಯ್ಯ ಸಿದ್ದರಾಮಯ್ಯನೇ, ಅರಸು ಅವರಿಗೆ ನನ್ನನ್ನು ಹೋಲಿಸಬೇಡಿ' ಎಂದು ಗದರಿದರು. ಬಳಿಕ ಅಭಿಮಾನಿಗಳು, 'ಸಿಎಂ ಸಿದ್ದರಾಮಯ್ಯಗೆ ಜಯವಾಗಲಿ' ಎಂದು ಜಯಕಾರ ಕೂಗಿದರು. ಅದಕ್ಕೂ ಕೋಪಿಸಿಕೊಂಡ ಸಿಎಂ, ಘೋಷಣೆ ಕೂಗುತ್ತಿದ್ದವರ ಬಾಯ್ಮುಚ್ಚಿಸಿ ಭಾಷಣ ಆರಂಭಿಸಿದರು.

ಮೂರನೇ ಪುಟದಿಂದ

ಗ್ರೇಟರ್ ಮೈಸೂರು ಭಾಗ್ಯ

ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಒಂದು ನಗರ ಸಭೆ, 4 ಪಟ್ಟಣ ಪಂಚಾಯಿತಿ, 8 ಗ್ರಾಮ ಪಂಚಾಯಿತಿ ಸೇರಿಸಿ ಗ್ರೇಟರ್ ಮೈಸೂರು ರಚಿಸಲಾಗುವುದು ಎಂದು ಭೈರತಿ ಸುರೇಶ್ ಮಾಹಿತಿ ನೀಡಿದರು.

ಮೈಸೂರು ನಗರ ಪಾಲಿಕೆಯಲ್ಲಿ 2011ರ ಜನಗಣತಿ ಪ್ರಕಾರ 11,19,705 ಜನಸಂಖ್ಯೆ ಇದ್ದು, 2025 ಕ್ಕೆ 14,16,871 ಯೋಜಿತ ಜನಸಂಖ್ಯೆ ಇದೆ. ಗ್ರೇಟರ್ ಮೈಸೂರು ರಚನೆ ಮಾಡಿದರೆ ಜನ ಸಂಖ್ಯೆಗೆ ಅನುಗುಣವಾಗಿ ಯೋಜನೆ ರೂಪಿಸಲಾಗುತ್ತದೆ. ನಗರ ಸಭೆ, ಪಪಂ ಮತ್ತು ಗ್ರಾಪಂ ಸೇರ್ಪಡೆಯಾಗುವ ಗ್ರೇಟರ್ ಮೈಸೂರು ವ್ಯಾಪ್ತಿಯಲ್ಲಿ ಕಸ ವಿಲೇವಾರಿ, ಕುಡಿಯುವ ನೀರು, ಒಳಚರಂಡಿ, ಸಂಪರ್ಕ ರಸ್ತೆ ಸೇರಿದಂತೆ ಇತರೆ ಮೂಲ ಭೂತ ಸೌಕರ್ಯ ಕಲ್ಪಿಸುವ ಬಗ್ಗೆ ಯೋಜನೆ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು.

ಹಣದ ಅಂದಾಜು ಪಟ್ಟಿ: ವ್ಯವಸ್ಥಿತವಾಗಿ ಗ್ರೇಟರ್ ಮೈಸೂರು ರಚನೆ ಮಾಡಲು ಅಗತ್ಯವಿರುವ ಹಣವೆಷ್ಟು ಎಂಬ ಬಗ್ಗೆ ವರದಿ ನೀಡುವಂತೆ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ. ಈ ಹಿನ್ನೆಲೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಈ ಬಗ್ಗೆ ಅಂದಾಜು ಪಟ್ಟಿ ತಯಾರಿಸಲಾಗುವುದು ಎಂದು ಭೈರತಿ ಸುರೇಶ್ ಹೇಳಿದರು.

ಗ್ರೇಟರ್ ಮೈಸೂರು ರಚನೆ ಮಾಡುವ ಸಂಬಂಧ ತಜ್ಞರ ಸಮಿತಿ ರಚನೆ ಮಾಡಲಾಗುವುದು. ಇದಕ್ಕೆ ನಗರಾಭಿವೃದ್ಧಿ ಸಚಿವನಾದ ನಾನು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಉಪಾಧ್ಯಕ್ಷರಾಗಿರುತ್ತಾರೆ ಎಂದು ತಿಳಿಸಿದರು.

ಸ್ಥಳೀಯ ಯೋಜನಾ ವ್ಯಾಪ್ತಿ ಸಾವಿರ ಚದರ ಕಿಮೀಗೆ ವಿಸ್ತರಣೆ: ಸಮಗ್ರ ಮೈಸೂರು ಅಭಿವೃದ್ಧಿಗಾಗಿ ಸ್ಥಳೀಯ ಯೋಜನಾ ವ್ಯಾಪ್ತಿ (ಲೋಕಲ್ ಪ್ಲಾನಿಂಗ್ ಏರಿಯಾ) ಯನ್ನು 500 ರಿಂದ 1 ಸಾವಿರ ಚದರ ಕಿಲೋಮೀಟರ್‌ಗೆ ಹೆಚ್ಚಳ ಮಾಡಲಾಗುವುದು. 2 ಸಾವಿರ ಕೋಟಿ ವೆಚ್ಚದಲ್ಲಿ ಮೈಸೂರಿನಲ್ಲಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಮಾಡಲು ಈಗಾಗಲೇ ಡಿಪಿಆರ್ ಸಿದ್ಧವಾಗಿದೆ. ಪಿಪಿಪಿ ಮಾಡಲ್‌ನಲ್ಲಿ ಈ ಯೋಜನೆ ಕೂಡ ಅನುಷ್ಠಾನ ಮಾಡಲಾಗುವುದು. ಸರ್ಕಾರದ ಈ ತೀರ್ಮಾನಕ್ಕೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಶಾಸಕರು ಸಮ್ಮತಿಸಿದ್ದಾರೆ ಎಂದರು.

ಮೈಸೂರು ನಗರದ ಅಭಿವೃದ್ಧಿ ಮಾತ್ರವಲ್ಲದೆ ಸಮಗ್ರ ಮೈಸೂರು ಜಿಲ್ಲೆಯ ಅಭಿವೃದ್ಧಿಗೆ ಕೂಡ ಯೋಜನೆ ರೂಪಿಸಲು ನಿರ್ಧಾರ ಮಾಡಲಾಗಿದೆ. ಈ ಸಂಬಂಧ ತಜ್ಞರ ಸಮಿತಿಯೊಂದನ್ನು ರಚನೆ ಮಾಡಲಾಗುವುದು. ಈ ಸಮಿತಿಯಲ್ಲಿ ಕೂಡ ನಾನು ಹಾಗೂ ಡಾ.ಮಹದೇವಪ್ಪ ಅವರು ಉಪಾಧ್ಯಕ್ಷರಾಗಿರುತ್ತೇವೆ ಎಂದು ತಿಳಿಸಿದರು.

ರಾಜಧಾನಿ ಬೆಂಗಳೂರು ಬಿಟ್ಟರೆ ಮೈಸೂರು ವೇಗವಾಗಿ ಬೆಳೆಯುತ್ತಿರುವ ನಗರವಾಗಿದೆ. ಮೈಸೂರಿನಲ್ಲಿ ಉತ್ತಮ ಗಾಳಿ, ಸಮರ್ಪಕ ನೀರು ಹಾಗೂ ಹೆಚ್ಚಿನ ಪ್ರಮಾಣದ ಅರಣ್ಯವಿದೆ. ಮೈಸೂರಿನ ಮಾಲಿನ್ಯ ಇನ್ನು ಕೆಟ್ಟಿಲ್ಲ. ಈ ಹಿನ್ನೆಲೆಯಲ್ಲಿ ಇದನ್ನು ಹಾಗೆ ಉಳಿಸಿಕೊಳ್ಳಲು ಯೋಜನೆ ರೂಪಿಸಿ ಅದನ್ನು ಅನುಷ್ಠಾನ ಮಾಡಲಾಗುವುದು ಎಂದು ಭೈರತಿ ಸುರೇಶ್ ಮಾಹಿತಿ ನೀಡಿದರು.

ನಾನು ಪ್ರೆಸ್‌ನವರ ಹತ್ತಿರ ಮಾತನಾಡುವುದಿಲ್ಲ!

ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿಜ್ಞೆ

ಮೈಸೂರು, ನ.3(ಬಿಎಲ್‌ಯು)– ನಾನು ಇನ್ನು ಮುಂದೆ ಪ್ರೆಸ್‌ನವ್ರ ಹತ್ತಿರ ಮಾತಾಡಲ್ಲ. ಹೀಗೆಂದು ಪ್ರತಿಜ್ಞೆ ಮಾಡಿದವರು ಮುಖ್ಯಮಂತ್ರಿ ಸಿದ್ದರಾಮಯ್ಯ.

ಮೈಸೂರಿನ ಶಾರದಾದೇವಿನಗರದ ವಲಯ ಕಚೇರಿಯಲ್ಲಿ ಇಂದು ಗ್ರೇಟರ್ ಮೈಸೂರು ರಚನೆ ಸಂಬಂಧ ನಡೆದ ಸಭೆಯ ತರುವಾಯ ಪತ್ರಕರ್ತರು ಪ್ರತಿಕ್ರಿಯೆ ಕೇಳಿದರು. ಆದರೆ ನಾನು ಪ್ರೆಸ್‌ನವರ ಹತ್ತಿರ ಮಾತನಾಡುವುದಿಲ್ಲ. ಭೈರತಿ ಸುರೇಶ್ ಹಾಗೂ ಡಾ.ಮಹದೇವಪ್ಪ ಮಾತನಾಡುತ್ತಾರೆ. ನಾನು ಇನ್ನು ಮುಂದೆ ಪ್ರೆಸ್ ನವರ ಹತ್ತಿರ ಮಾತನಾಡಬಾರದೆಂದು ತೀರ್ಮಾನ ಮಾಡಿದ್ದೇನೆ ಎಂದು ಹೇಳಿದರು.

ರಾಜಕೀಯದ ಬಗ್ಗೆ ಮಾತನಾಡಬೇಡಿ, ಗ್ರೇಟರ್ ಮೈಸೂರು ಬಗ್ಗೆ ಮಾಹಿತಿ ನೀಡಿ ಎಂದು ಪತ್ರಕರ್ತರು ಕೇಳಿದಾಗ, ನಿಮ್ಮ ಜೊತೆಯಲ್ಲೆ ಮಾತನಾಡುವುದಿಲ್ಲ ಎಂದು ಹೇಳಿದೆನಲ್ಲ ಎಂದು ಸಿದ್ದರಾಮಯ್ಯ ಪುನರುಚ್ಚರಿಸಿದರು.

ಯಾಕೆ ಸಾರ್, ಪ್ರೆಸ್‌ನವರ ಬಗ್ಗೆ ಇಷ್ಟೊಂದು ಬೇಜಾರಾ ಎಂದು ಕೇಳಿದಾಗ, ಹಾಗೇನಿಲ್ಲ ನಾನು ನಿಮ್ಮ ಜೊತೆ ಮಾತಾಡಲ್ಲ ಅಂದರೆ ಮಾತಾಡಲ್ಲ ಎಂದು ಕಡ್ಡಿ ತುಂಡಾದಂತೆ ಹೇಳಿದರು.

ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಮಾಡುವ ಕುರಿತಂತೆ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ಹೋದ ಬಂದ ಕಡೆ ಪ್ರಶ್ನೆ ಕೇಳುತ್ತಿರುವ ಪತ್ರಕರ್ತರ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕೋಪಗೊಂಡಿದ್ದಾರೆ. ಈ ಹಿನ್ನೆಲೆ ಇಂತಹ ಪ್ರತಿಜ್ಞೆ ಮಾಡಿದ್ದಾರೆ.

ಹಿರಿಯರನ್ನೆಲ್ಲಾ ಹಿಂದೆ ಹಾಕಿದ್ದೀರಲ್ಲ

ಹಿರಿಯರನ್ನೆಲ್ಲಾ ಹಿಂದೆ ಹಾಕಿದ್ದೀರಾ ಎಂದು ವಿಧಾನ ಪರಿಷತ್ ಸದಸ್ಯ ವಿಶ್ವ ನಾಥ್ ಕಿಡಿಕಾರಿದರು. ಗ್ರೇಟರ್ ಮೈಸೂರು ಸಭೆಯಲ್ಲಿ ಪಾಲ್ಗೊಂಡಿದ್ದ ವಿಶ್ವನಾಥ್ ಅವರು, ಸಭೆಯಲ್ಲಿ ತಮ್ಮ ಆಸನವನ್ನು ಹಿಂದೆ ಗುರುತಿಸಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಶಾಸಕ ತನ್ವೀರ್ ಸೇಠ್ ಅವರು, ಈ ಬಗ್ಗೆ ಉತ್ತರ ಕೊಡುವ ಅಧಿಕಾರ ನನಗಿಲ್ಲ ಎಂದು ಹೇಳಿದರು. ಆದರೆ ಪಕ್ಕದಲ್ಲೆ ಕುಳಿತಿದ್ದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮಾತ್ರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಮಣಿಪಾಲ್ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ



ಮೈಸೂರು, ನ.3– ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಜೀವಧಾರ ಸಂಸ್ಥೆಯ ಸಹಯೋಗದೊಂದಿಗೆ ಅ.31ರಂದು ಆಯೋಜಿಸಲಾಗಿದ್ದ ರಕ್ತದಾನ ಶಿಬಿರವು ಸಮಾಜದ ಅಭೂತಪೂರ್ವ ಸ್ಪಂದನೆಯೊಂದಿಗೆ ಯಶಸ್ವಿಯಾಗಿದೆ.

ಈ ವೇಳೆ ಮಾತನಾಡಿದ ಮಣಿಪಾಲ್ ಆಸ್ಪತ್ರೆ ಮೈಸೂರಿನ ನಿರ್ದೇಶಕ ಪ್ರಮೋದ್ ಕುಂದರ್, ರಕ್ತವನ್ನು ಯಾವುದೇ ಪ್ರಯೋಗಾಲಯದಲ್ಲಿ ಸೃಷ್ಟಿಸಲಾಗದು. ದಾನಿಗಳ ಉದಾರ ಮನಸ್ಸಿನಿಂದ ಮಾತ್ರ ಲಭಿಸುತ್ತದೆ. ತುರ್ತು ಆಘಾತಗಳ ಸಂದರ್ಭಗಳಲ್ಲಿ ಸಮಯ ಮತ್ತು ರಕ್ತವೇ ಜೀವ ಉಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಶಿಬಿರದಂತಹ ಸಾರ್ಥಕ ಉಪಕ್ರಮಗಳ ಮೂಲಕ, ಸೂಕ್ತ ಕಾಲಕ್ಕೆ ಸರಿಯಾಗಿ ರಕ್ತ ಲಭ್ಯವಿಲ್ಲದೆ ಯಾವುದೇ ಜೀವಕ್ಕೆ ಅಪಾಯವಾಗದಂತೆ ಖಚಿತಪಡಿಸಿಕೊಳ್ಳುವುದೇ ನಮ್ಮ ಪರಮ ಧ್ಯೇಯ ಎಂದರು.

ಮೈಸೂರು ನಗರದ ಎನ್.ಆರ್.ಸಂಚಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀಮತಿ ರೇಖಾ ಬಾಯಿ ಅವರು, ಪೊಲೀಸ್ ಅಧಿಕಾರಿಗಳಾಗಿ, ಅಪಘಾತ ಅಥವಾ ಅಪರಾಧ ನಡೆದ ಸ್ಥಳಗಳಿಗೆ ಮೊದಲು ತಲುಪುವುದೇ ನಾವು. ಅಲ್ಲಿ ಸಂತ್ರಸ್ತರು ತೀವ್ರ ರಕ್ತಸ್ರಾವದಿಂದ ತೊಂದರೆಗೆ ಒಳಗಾಗಿರುತ್ತಾರೆ. ಆ 'ಸುವರ್ಣ ನಿಮಿಷಗಳಲ್ಲಿ' ರಕ್ತದ ಲಭ್ಯತೆ ಎಷ್ಟು ಅಮೂಲ್ಯ ಎಂಬುದನ್ನು ನಾವು ಬಲ್ಲೆವು. ಮಣಿಪಾಲ್ ಆಸ್ಪತ್ರೆಯ ಈ ಶಿಬಿರವು ಕೇವಲ ವೈದ್ಯಕೀಯ ಉಪಕ್ರಮವಾಗಿ ಉಳಿದಿಲ್ಲ, ಇದು ದುರಂತವನ್ನು ಬದುಕಾಗಿ ಪರಿವರ್ತಿಸುವ ಒಂದು ಮಾನವೀಯ ಮಹಾಕಾರ್ಯ ಎಂದು ಶ್ಲಾಘಿಸಿದರು.

ಇಂದು ಲೇಖಕ, ಪ್ರಕಾಶಕರ ಒಕ್ಕೂಟದ ಸಭೆ



ಮೈಸೂರು, ನ.3–ಕರ್ನಾಟಕ ಲೇಖಕ ಮತ್ತು ಪ್ರಕಾಶಕರ ಒಕ್ಕೂಟದಿಂದ ನ.4ರಂದು ಸಂಜೆ 5ಕ್ಕೆ ರಾಮಕೃಷ್ಣ ನಗರ ವೃತ್ತದ ಸಮೀಪವಿರುವ ನೀಲಾಂಜನ ಮಹೇಶ್ ಪ್ರಸಾದ್ ಹೋಟೆಲ್‌ನ ಮೊದಲ ಮಹಡಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಈ ಸಭೆಯಲ್ಲಿ ಪ್ರಕಾಶಕರು ಪ್ರಸ್ತುತ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು ಎಂದು ಒಕ್ಕೂಟದ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನಗರದ ಪ್ರಕಾಶಕರು ಮತ್ತು ಲೇಖಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಪಾಲ್ಗೊಂಡು ತಮ್ಮ ಸಲಹೆ ಸೂಚನೆಯನ್ನು ಸೂಚಿಸಬೇಕೆಂದು ಕೋರಿದ್ದಾರೆ.

ಕನ್ನಡ ರಾಜ್ಯೋತ್ಸವ



ಮೈಸೂರಿನ ಮಂಚೇಗೌಡನ ಕೊಪ್ಪಲು ಸರ್ಕಾರಿ ಪದವಿ ಕಾಲೇಜಿನಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಕಾಲೇಜಿನ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು ಉದ್ಘಾಟಿಸಿದರು.

ಪರಂಪರೆ, ಘನತೆಗೆ ಧಕ್ಕೆಯಾಗಬಾರದು

ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳಿ: ಬೆಂಗಳೂರಿನಂತೆ ಟ್ರಾಫಿಕ್ ಸಮಸ್ಯೆ ಯಾವುದೇ ಕಾರಣಕ್ಕೂ ತಲೆದೋರಬಾರದು ಎಂದು ಮತ್ತೊಮ್ಮೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ ಎಂದು ಒತ್ತಿ ಹೇಳಿದ ಸಿದ್ದರಾಮಯ್ಯ, ಘನತ್ಯಾಜ್ಯ ನಿರ್ವಹಣೆಗೆ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಯೋಜನೆ ಸಿದ್ಧಪಡಿಸಿ. ವಸತಿ ಪ್ರದೇಶಗಳ ಕಸ ವಿಲೇವಾರಿ ಮಾತ್ರವಲ್ಲದೆ ಕೈಗಾರಿಕಾ ಪ್ರದೇಶಗಳ ತ್ಯಾಜ್ಯ ವಿಲೇವಾರಿ ಕೂಡ ವೈಜ್ಞಾನಿಕವಾಗಿರಬೇಕು. ಇದಕ್ಕಾಗಿ ಆಧುನಿಕ ತಂತ್ರಜ್ಞಾನದ ನೆರವು ಪಡೆದುಕೊಳ್ಳಿ ಎಂದು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ಹೊಸ ಬಡಾವಣೆಗಳನ್ನು ನಿರ್ಮಿಸುವಾಗ ರಸ್ತೆ ಕುಡಿಯುವ ನೀರು, ಒಳ ಚರಂಡಿ, ಉದ್ಯಾನವನ, ವಿದ್ಯುತ್ ಸಂಪರ್ಕ ಸೇರಿದಂತೆ ಹಲವು ಮೂಲಭೂತ ಸೌಕರ್ಯಗಳು ಕಡ್ಡಾಯವಾಗಿರಬೇಕು. ಮೈಸೂರಿನಲ್ಲಿ ಪೆರಿಫೆರಲ್ ರಿಂಗ್ ರಸ್ತೆ ಅವಶ್ಯವಿದ್ದು, ಈಗಾಗಲೇ ಇದರ ಯೋಜನೆ ಸಿದ್ಧವಾಗಿದೆ ಎಂದರು.

ಆದಾಯ ವೃದ್ಧಿ ಆಗಬೇಕು: ಗ್ರೇಟರ್ ಮೈಸೂರು ರಚನೆಯಿಂದ ಆದಾಯ ವೃದ್ಧಿಯಾಗಬೇಕು, ಇದಕ್ಕಾಗಿ ಸ್ಪಷ್ಟ ಅಂದಾಜು ಹಾಗೂ ಯೋಜನೆ ರೂಪಿಸಿಕೊಳ್ಳಿ. ವಿಶಾಲವಾದ ರಸ್ತೆಗಳು ಮೈಸೂರಿನ ಹೆಗ್ಗಳಿಕೆಯಾಗಿದ್ದು, ಇತರೆ ನಗರಗಳಿಗೆ ಮಾದರಿಯಾಗಿದೆ. ಈ ಹಿನ್ನೆಲೆ ಗ್ರೇಟರ್ ಮೈಸೂರು ವ್ಯವಸ್ಥಿತ, ಯೋಜನಾ ಬದ್ಧವಾಗಿರಬೇಕು. ಮೈಸೂರಿನ ಜನಸಂಖ್ಯೆಗೆ ಅನುಗುಣವಾಗಿ ಪೌರ ಕಾರ್ಮಿಕರ ಸಂಖ್ಯೆ ಕೂಡ ಹೆಚ್ಚಾಗಬೇಕು ಎಂದು ಸಿದ್ದರಾಮಯ್ಯ ಸೂಚನೆ ನೀಡಿದರು.

ನಿವಾಸಿಗಳಿಗೆ ನೆಮ್ಮದಿ ಸಿಗಲಿದೆ

ಸಲಹೆ–ಸೂಚನೆ ಪಡೆಯಲು ತಿಳಿಸಿದ್ದಾರೆ. ಬೃಹತ್ ಮೈಸೂರು ವ್ಯಾಪ್ತಿಗೆ ಕಡಕೊಳ ಹಾಗೂ ನಾಗವಾಲ ಗ್ರಾಪಂ ಸೇರಿಸಿಕೊಳ್ಳುವಂತೆ ಕೇಳಿದ್ದೇನೆ. ಜೊತೆಗೆ ನಗರ್ತಳ್ಳಿ ಹಾಗೂ ಬೀರಿಹುಂಡಿ ಭಾಗವನ್ನೂ ಸೇರಿಸಬೇಕೆಂದು ಒತ್ತಾಯಿಸಿದ್ದೇನೆ. ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ) ಅಸ್ತಿತ್ವದಲ್ಲಿರುವುದರಿಂದ ಯಾವುದೇ ಬಡಾವಣೆ ಅಭಿವೃದ್ಧಿಪಡಿಸುವಾಗ ಸೆಪ್ಟಿಕ್ ಟ್ಯಾಂಕ್, ಪಾರ್ಕ್, ಕುಡಿಯುವ ನೀರು, ಬೀದಿ ದೀಪ, ಯುಜಿಡಿ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸುವುದು ಕಡ್ಡಾಯವಾಗಿದೆ. ಜೊತೆಗೆ ಸಿಡಿಪಿ ಹಾಗೂ ಪೆರಿಫೆರಲ್ ರಿಂಗ್ ರಸ್ತೆ ಮಾಡುವುದು ಅತ್ಯವಶ್ಯವಾಗಿದೆ. ಮೈಸೂರು ನಗರ ಸುತ್ತಲೂ ವ್ಯವಸ್ಥಿತವಾಗಿ ಬೆಳೆಯಬೇಕು ಎಂಬುದು ನಮ್ಮ ಒತ್ತಾಸೆ. ಇದಾಗಬೇಕಾದರೆ ಎದುರಿಗಿರುವ ಸಮಸ್ಯೆಗಳು ಪರಿಹಾರವಾಗಬೇಕು. ಇದಕ್ಕಾಗಿ ನಮ್ಮ ಹೋರಾಟ ನಡೆದಿದೆ ಎಂದು ಜಿಟಿಡಿ ವಿವರಿಸಿದ್ದಾರೆ.

ನಿಷ್ಕ್ರಿಯ ಬ್ಯಾಂಕ್ ಖಾತೆಗಳಲ್ಲಿ 157 ಕೋಟಿ ನೆನೆಗುದಿಗೆ

ಎಸ್‌ಬಿಐನಿಂದ 'ನಿಮ್ಮ ಹಣ ನಿಮ್ಮ ಹಕ್ಕು' ವಿಶೇಷ ಅಭಿಯಾನ

- ಇಂತಹ ಖಾತೆಗಳ ಹಣ ಗ್ರಾಹಕರ ಕೈಸೇರಲು ಅನುವು
- ಇಲ್ಲವೇ ಖಾತೆಗೆ ಮರುಚಾಲನೆ ನೀಡಿ ವಹಿವಾಟಿಗೆ ಅವಕಾಶ ಕಲ್ಪಿಸುವ ಉದ್ದೇಶ

ಮೈಸೂರು,ನ.3(ಎಂಟಿವೈ)– ಮೈಸೂರು ಜಿಲ್ಲೆಯ ವಿವಿಧ ಬ್ಯಾಂಕ್‌ಗಳ ಹಲವು ಶಾಖೆಗಳಲ್ಲಿ ನಿಷ್ಕ್ರಿಯ ಖಾತೆಗಳಲ್ಲಿರುವ 157 ಕೋಟಿ ರೂ.ಗಳನ್ನು ವಾರಸುದಾರರಿಗೆ ತಲುಪಿಸಲು ಮೂರು ತಿಂಗಳ ಅವಧಿಯ 'ನಿಮ್ಮ ಹಣ ನಿಮ್ಮ ಹಕ್ಕು' ವಿಶೇಷ ಅಭಿಯಾನಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಿರ್ಧರಿಸಿದೆ.

ಮೈಸೂರು ಜಿ.ಪಂ. ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆಯೋಜಿಸಿದ್ದ ಸಭೆಯಲ್ಲಿ ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಪಾಲ್ಗೊಂಡು ಜಿಲ್ಲೆಯಲ್ಲಿ ನಿಷ್ಕ್ರಿಯಗೊಂಡ ಬ್ಯಾಂಕ್ ಖಾತೆಗಳು ಹಾಗೂ ಅವುಗಳಲ್ಲಿರುವ ಹಣದ ಬಗ್ಗೆ ಮಾಹಿತಿ ನೀಡಿದರಲ್ಲದೆ, ಖಾತೆಗಳು ನಿಷ್ಕ್ರಿಯಗೊಳ್ಳಲು ಕಾರಣ ಕುರಿತಂತೆ ವಿವರಿಸಿದರು.

ಬ್ಯಾಂಕ್‌ನ ವಿವಿಧ ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ವಾದಿರಾಜ್ ದೇಶಪಾಂಡೆ ಮಾತನಾಡಿ, ನಿಷ್ಕ್ರಿಯಗೊಂಡಿರುವ ಖಾತೆಗಳನ್ನು ಅಗತ್ಯ ದಾಖಲೆಗಳನ್ನು ಪಡೆದು ಸಕ್ರಿಯಗೊಳಿಸುವ ಪ್ರಕ್ರಿಯೆ ವಿಶೇಷ ಅಭಿಯಾನ ಆರಂಭಿಸಲಾಗುತ್ತದೆ. ಮೂರು ತಿಂಗಳ ಅವಧಿಯಲ್ಲಿ ಖಾತೆಗಳನ್ನು ಸಕ್ರಿಯಗೊಳಿಸುವುದಕ್ಕಾಗಿ 'ನಿಮ್ಮ ಹಣ ನಿಮ್ಮ ಹಕ್ಕು' ವಿಶೇಷ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ. ಈ ಅಭಿಯಾನದ ಸದುಪಯೋಗ ಪಡೆದುಕೊಂಡು ಖಾತೆಯಲ್ಲಿರುವ ಹಣವನ್ನು ಪಡೆದುಕೊಳ್ಳಲು ಗ್ರಾಹಕರು ಮುಂದಾಗಬೇಕು ಎಂದು ಸಲಹೆ ನೀಡಿದರು.



ಮೈಸೂರು ಜಿಪಂ ಸಭಾಂಗಣದಲ್ಲಿ ನಡೆದ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ಸಭೆಯಲ್ಲಿ ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ವಾದಿರಾಜ್ ದೇಶಪಾಂಡೆ ಮಾತನಾಡಿದರು.

ಮೈಸೂರು ಜಿಲ್ಲೆಯಲ್ಲಿ 31 ಬ್ಯಾಂಕ್‌ಗಳ 534 ಶಾಖೆಗಳಲ್ಲಿ 5,05,424 ಖಾತೆಗಳು ನಿಷ್ಕ್ರಿಯಗೊಂಡಿವೆ. ಈ ಖಾತೆಗಳಲ್ಲಿ ಒಟ್ಟು 157.33 ಕೋಟಿ ರೂ. ಇದೆ. ಸಂಬಂಧಿಸಿದವರು ಅಗತ್ಯ ದಾಖಲೆಗಳನ್ನು ನೀಡುವ ಮೂಲಕ ಈ ಖಾತೆಗಳನ್ನು ಸಕ್ರಿಯಗೊಳಿಸಬಹುದು. ಬ್ಯಾಂಕ್ ಖಾತೆಗಳನ್ನು ನಿರಂತರವಾಗಿ ಬಳಕೆ ಮಾಡದ ಹಿನ್ನೆಲೆಯಲ್ಲಿ ಸಾಕಷ್ಟು ಖಾತೆಗಳು ನಿಷ್ಕ್ರಿಯಗೊಂಡಿವೆ. ಸಂಬಂಧಿಸಿದವರು ಪಾಸ್‌ಬುಕ್, ಅವಧಿ ಠೇವಣಿ ರಶೀದಿ, ಚೆಕ್‌ಬುಕ್‌ನೊಂದಿಗೆ ಸಂಬಂಧಿಸಿದ ಶಾಖೆಗಳಿಗೆ ತೆರಳಿ ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಖಾತೆಯನ್ನು ಚಾಲನೆಗೊಳಿಸಬಹುದು. ಕಳೆದ 10 ವರ್ಷಗಳಿಂದ ಯಾವುದೇ ಖಾತೆ ನಿಷ್ಕ್ರಿಯಗೊಂಡಿದ್ದರೆ ಆ ಖಾತೆಯು ಆರ್‌ಬಿಐಗೆ ವರ್ಗಾವಣೆಯಾಗಿರುತ್ತದೆ. ಅಂತಹ ಖಾತೆಗಳ ಮಾಹಿತಿಯನ್ನು ಆರ್‌ಬಿಐಗೆ ಸಲ್ಲಿಸಿ ಮತ್ತೆ ಸಕ್ರಿಯಗೊಳಿಸಲಾಗುವುದು. ಇದರಿಂದ ಜನರಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಬ್ಯಾಂಕ್ ಅಧಿಕಾರಿಗಳು ತಮ್ಮ ಶಾಖೆಗಳಿಗೆ ಮಾಹಿತಿ ನೀಡಿ ಈ ಅಭಿಯಾನವನ್ನು ಸಕ್ರಿಯಗೊಳಿಸಬೇಕು ಎಂದು ತಿಳಿಸಿದರು.


ನಮ್ಮ ಗ್ರಾಹಕರೊಬ್ಬರ ಖಾತೆಯಲ್ಲಿ 52 ಲಕ್ಷ ರೂ. ಇತ್ತು. ಆದರೆ, ಆ ಖಾತೆ ನಿಷ್ಕ್ರಿಯಗೊಂಡಿತ್ತು. ನಂತರ ಕೆವೈಸಿ ನೀಡಿ ಖಾತೆಯನ್ನು ಸಕ್ರಿಯಗೊಳಿಸಲಾಯಿತು. ಮೃತಪಟ್ಟ ಗ್ರಾಹಕರಿಗೆ ಸಂಬಂಧಿಸಿದಂತೆ ಸಂಬಂಧಿಕರು ಅಗತ್ಯ ದಾಖಲೆಗಳನ್ನು ನೀಡಿ ಖಾತೆಯಲ್ಲಿರುವ ಹಣವನ್ನು ಪಡೆಯಬಹುದು. ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಮರಣ ಕ್ಲೈಮ್ ಇತ್ಯರ್ಥಪಡಿಸಲಾಗುವುದು. ಹಾಗಾಗಿ ಎಲ್ಲ ಬ್ಯಾಂಕ್‌ಗಳು ತಮ್ಮ ಬ್ಯಾಂಕ್‌ಗಳ ಮುಂದೆ ಬ್ಯಾನರ್‌ಗಳನ್ನು ಹಾಕಿಸಿ ಜನರಲ್ಲಿ ಈ ವಿಚಾರವಾಗಿ ಹೆಚ್ಚಿನ ಜಾಗೃತಿ ಮೂಡಿಸಬೇಕು. ನಿಷ್ಕ್ರಿಯಗೊಂಡ ಖಾತೆಗಳನ್ನು ಗುರುತಿಸಿ ಗ್ರಾಹಕರಿಂದ ಅಗತ್ಯ ದಾಖಲೆಗಳನ್ನು ಪಡೆದು ಸಕ್ರಿಯಗೊಳಿಸುವ ಕಾರ್ಯವನ್ನು ಈಗಾಗಲೇ ಎಸ್‌ಬಿಐ ಕೈಗೊಂಡು ನಿಷ್ಕ್ರಿಯಗೊಂಡಿದ್ದ ಖಾತೆಯಲ್ಲಿದ್ದ 10 ಕೋಟಿ ರೂ.ಮೊತ್ತವನ್ನು ಸಕ್ರಿಯಗೊಳಿಸಿದೆ. ಈ ಅಭಿಯಾನವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಿದರೆ ಹೆಚ್ಚಿನ ಜನರಿಗೆ ಅನುಕೂಲ ದೊರೆಯುತ್ತದೆ. ನಿಷ್ಕ್ರಿಯ ಬ್ಯಾಂಕ್ ಖಾತೆಗಳನ್ನು ಸಕ್ರಿಯಗೊಳಿಸುವುದರಿಂದ ಬ್ಯಾಂಕ್‌ಗಳಲ್ಲೂ ಹಣಕಾಸಿನ ವಹಿವಾಟು ಹೆಚ್ಚಾಗುತ್ತದೆ ಎಂದು ವಿವರಿಸಿದರು.

ಸಭೆಯಲ್ಲಿ ಆರ್‌ಬಿಐ ವ್ಯವಸ್ಥಾಪಕಿ ಜೀವಿಕಾ ಮಾತನಾಡಿ, ಮೂರು ತಿಂಗಳು ಒಮ್ಮೆ ನಡೆಯುವ ಅಭಿಯಾನವನ್ನು ಯಶಸ್ವಿಗೊಳಿಸಲು ಪ್ರತಿಯೊಂದು ಬ್ಯಾಂಕ್ ಶ್ರಮಿಸಬೇಕು. ಸಾಕಷ್ಟು ಜನರಿಗೆ ನಿಷ್ಕ್ರಿಯಗೊಂಡಿರುವ ತಮ್ಮ ಖಾತೆಯಲ್ಲಿ ಎಷ್ಟು ಹಣ ಇದೆ ಎಂಬ ಅರಿವು ಇರುವುದಿಲ್ಲ. ಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಿ ಅವರ ಖಾತೆಗಳನ್ನು ಸಕ್ರಿಯಗೊಳಿಸಬೇಕು. ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಅಭಿಯಾನವನ್ನು ಯಶಸ್ವಿಗೊಳಿಸಬೇಕು. ಕೆಲವೊಂದು ಖಾತೆಗಳಲ್ಲಿ ಲಕ್ಷಾಂತರ ರೂ.ಗಳು ಇರುತ್ತದೆ. ಆ ಹಣ ಅವರಿಗೆ ತುಂಬಾ ಅವಶ್ಯಕವಾಗಿರುತ್ತದೆ. ನಿಷ್ಕ್ರಿಯಗೊಂಡ ಖಾತೆಗಳ ಕುರಿತು ಸಂಬಂಧಿಸಿದವರಿಗೆ ಮಾಹಿತಿ ನೀಡಿ ಸಕ್ರಿಯಗೊಳಿಸಿದರೆ ಹಲವಾರು ಕುಟುಂಬಗಳಿಗೆ ಇದರಿಂದ ಉಪಯೋಗವಾಗಲಿದೆ ಎಂದರು. ಸಭೆಯಲ್ಲಿ ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಈಶ್ವರ್ ನಾಯಕ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಭೀಮಪ್ಪ ಇದ್ದರು.

ಎಲ್ಲೆಲ್ಲಿ ಎಷ್ಟೆಷ್ಟು ಹಣವಿದೆ

ಮೈಸೂರು ಜಿಲ್ಲೆಯಲ್ಲಿ ಕೆನರಾ, ಎಸ್‌ಬಿಐ, ಬ್ಯಾಂಕ್ ಆಫ್ ಬರೋಡಾ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಹಾಗೂ ಕರ್ನಾಟಕ ಬ್ಯಾಂಕ್‌ನಲ್ಲಿ ಹೆಚ್ಚು ನಿಷ್ಕ್ರಿಯಗೊಂಡ ಖಾತೆಗಳಿವೆ. ಜಿಲ್ಲೆಯ ಕೆನರಾ ಬ್ಯಾಂಕ್ ವಿವಿಧ ಶಾಖೆಗಳಲ್ಲಿ 1,22,559 ಖಾತೆಗಳು ನಿಷ್ಕ್ರಿಯಗೊಂಡಿವೆ. ಇದರಲ್ಲಿ 44.38 ಕೋಟಿ ರೂ.ಗಳು ಇವೆ. ಎಸ್‌ಬಿಐನಲ್ಲಿ ನಿಷ್ಕ್ರಿಯಗೊಂಡಿರುವ 85,061 ಖಾತೆಗಳಲ್ಲಿ 43.86 ಕೋಟಿ ರೂ., ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 60,712 ಖಾತೆಗಳಲ್ಲಿ 14.74 ಕೋಟಿ ರೂ., ಬ್ಯಾಂಕ್ ಆಫ್ ಬರೋಡಾದಲ್ಲಿ 25,432 ಖಾತೆಗಳಲ್ಲಿ 10.74 ಕೋಟಿ ರೂ. ಸೇರಿದಂತೆ ವಿವಿಧ ಬ್ಯಾಂಕ್‌ಗಳಲ್ಲಿ ನಿಷ್ಕ್ರಿಯಗೊಂಡಿರುವ ಖಾತೆಗಳಲ್ಲಿ ಕೋಟ್ಯಾಂತರ ರೂ. ಇದೆ.

ಮೈಸೂರು ಉನ್ನತ ಹಂತಕ್ಕೆ ಬೆಳೆಯಲು ಸಹಕಾರಿ



ಮೈಸೂರು, ನ.3– ಗ್ರೇಟರ್ ಮೈಸೂರು ಅನುಷ್ಠಾನದೊಂದಿಗೆ ಮೈಸೂರಿನ ನಿಜವಾದ ಅಭಿವೃದ್ಧಿಯನ್ನು ಎದುರು ನೋಡಬಹುದು ಎಂದು ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಅಭಿಪ್ರಾಯಿಸಿದ್ದಾರೆ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಗ್ರೇಟರ್ ಮೈಸೂರು ಸಾಕಾರವಾಗಬೇಕು ಎಂಬುದು ಎಲ್ಲರ ಆಶಯವಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ..ಶಿವಕುಮಾರ್ ಅವರು ಬೆಂಗಳೂರನ್ನು ಕನಕಪುರದವರೆಗೂ ವಿಸ್ತರಿಸುತ್ತಿದ್ದಾರೆ. ಹಾಗೆಯೇ ಸಿದ್ದರಾಮಯ್ಯನವರೂ ಗ್ರೇಟರ್ ಮೈಸೂರು ಎಂಬ ದೊಡ್ಡ ಯೋಜನೆ ಮೂಲಕ ತವರು ಜಿಲ್ಲೆಗೆ ಮಹತ್ವದ ಕೊಡುಗೆ ನೀಡುವ ಅವಕಾಶವಿದೆ.

ಇದರಿಂದ ಮೈಸೂರು ಬೆಳೆಯುತ್ತದೆ. ನಗರವನ್ನು ಉನ್ನತ ಹಂತಕ್ಕೆ ಕೊಂಡೊಯ್ಯಲು ಅನುಕೂಲವಾಗುತ್ತದೆ. ಬೃಹತ್ ಮೈಸೂರು ಆದಾಗ ತನ್ನಂತಾನೆ ಇಲ್ಲಿನ ಆರ್ಥಿಕತೆಯೂ ಹೆಚ್ಚಾಗುತ್ತದೆ. ನಗರದ ಹೊರವಲಯದಲ್ಲಿ ನಿವೇಶನ ಖರೀದಿಸಿ, ಮನೆ ನಿರ್ಮಾಣಕ್ಕೆ ಕಾದಿರುವ ಜನರ ವಿಶ್ವಾಸ ಹೆಚ್ಚುತ್ತದೆ. ಮೂಲ ಸೌಕರ್ಯಗಳ ಜೊತೆಗೆ ಸರ್ಕಾರದ ಸವಲತ್ತುಗಳೂ ಸಿಗುತ್ತವೆ ಎಂದಾದಾಗ ಖಂಡಿತವಾಗಿ ಅವರು ಸ್ವಂತ ನಿವೇಶದಲ್ಲಿ ಸೂರು ನಿರ್ಮಿಸಿಕೊಳ್ಳುತ್ತಾರೆ. ಆ ಮೂಲಕ ನಗರದ ಜನದಟ್ಟಣೆಯೂ ಕಡಿಮೆಯಾಗುತ್ತದೆ. ನಗರ ವಿಸ್ತಾರವಾದಂತೆ ಹಳ್ಳಿಗಳೆಲ್ಲಾ ಸೇರುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಗ್ರೇಟರ್ ಮೈಸೂರು ಗಡಿ ಗುರುತು ಮಾಡಿರುವ ಪ್ರದೇಶದಲ್ಲೆಲ್ಲಾ ಬಹುತೇಕ ಬಡಾವಣೆಗಳ ನಿರ್ಮಾಣವಾಗಿದ್ದು, ನಿವೇಶಗಳ ಮಾರಾಟವೂ ನಡೆದಿದೆ. ಗ್ರೇಟರ್ ಮೈಸೂರು ಆಗುತ್ತಿದ್ದಂತೆ ಅಲ್ಲೆಲ್ಲಾ ಮನೆಗಳು ನಿರ್ಮಾಣವಾಗುತ್ತವೆ ಎಂದು ತಿಳಿಸಿದ್ದಾರೆ.

ಹುಣಸೂರು ತಾಲೂಕಿನ ವಿವಿಧೆಡೆ ಅದ್ದೂರಿ ಕನ್ನಡ ರಾಜ್ಯೋತ್ಸವ





ಹುಣಸೂರಿನಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿದರು. ಬಲಚಿತ್ರದಲ್ಲಿ ಉದ್ದೂರ್ ಕಾವಲ್‌ಗ್ರಾಪಂ ಕಚೇರಿಯಲ್ಲಿ ನಡೆದ ರಾಜ್ಯೋತ್ಸವವನ್ನು ಕಾಣಬಹುದು.

ಹುಣಸೂರು, ನ.3– ಹುಣಸೂರಿನಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ಸಾಮೂಹಿಕ ಗಾಯನ, ಕನ್ನಡ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಮೆರವಣಿಗೆಯೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಬೆಳಗ್ಗೆ ಶಾಸಕ ಜಿ.ಡಿ.ಹರೀಶ್‌ಗೌಡ ಕನ್ನಡನಾಡ ಧ್ವಜಾರೋಹಣ ಮಾಡಿದರು. ರಾಷ್ಟ್ರಧ್ವಜರೋಹಣವನ್ನು ಉಪವಿಭಾಗಾಧಿಕಾರಿ ಹೆಚ್.ಬಿ.ವಿಜಯಕುಮಾರ್ ನೇರವೇರಿಸಿದರು. ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆ ಜಯ ಭಾರತ ಜನನಿಯ ತನುಜಾತೆ ಹಾಡಿಗೆ 100 ವಸಂತಗಳ ಸಂಭ್ರಮದ ಸವಿ ನೆನಪಿಗಾಗಿ ನಗರದ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಬಂದಿದ್ದ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ನಾಡಗೀತೆಯ ಸಮೂಹ ಗಾಯನ ನಡೆಸುವ ಮೂಲಕ ರಾಜ್ಯೋತ್ಸವಕ್ಕೆ ಮೆರಗು ನೀಡಿದರು.

ಈ ವೇಳೆ ಶಾಸಕ ಹರೀಶ್‌ಗೌಡ ಮಾತನಾಡಿ, ಇಂದಿನ ವಿದ್ಯಾರ್ಥಿಗಳಿಗೆ ಕನ್ನಡ ಬಾಷೆಯ ಮೇಲಿನ ಹಿಡಿತವೇ ಇಲ್ಲದಂತಾಗಿದೆ ಕನ್ನಡ ಸಾಹಿತ್ಯಕ್ಕೆ ಹೊಸ ಬರಹಗಾರರು ಉದಯಿಸುವಂತಾಗಬೇಕು. ಈ ನೆಲದ ಸಂಸ್ಕೃತಿ ಬಾಷೆಯ ಗುಣ ತಿಳಿಸುವ ಸಾಹಿತ್ಯ ಬರಬೇಕಾಗಿದೆ ಎಂದರು.

ಉಪವಿಭಾಗಾಧಿಕಾರಿ ಹೆಚ್.ಬಿ.ವಿಜಯ ಕುಮಾರ್ ಮಾತನಾಡಿ, ಕನ್ನಡ ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಯುವಜನರು ಬೆಳೆಸಿದಾಗಲೇ ಎಲ್ಲರಲ್ಲೂ ದೇಶಪ್ರೇಮ ಮೊಳಗುತ್ತದೆ ಎಂದರು.

ನಗರದ ಪ್ರಮುಖ ಸರ್ಕಲ್‌ಗಳಲ್ಲಿ ಅಟೋ ಚಾಲಕರ ಸಂಘ. ಕಾರು ಚಾಲಕರ ಸಂಘದ ಸದಸ್ಯರು ತಮ್ಮ ನಿಲ್ದಾಣಗಳಲ್ಲಿ ದೀಪಾಲಂಕಾರಗಳಿಂದ ಸಿಂಗಾರ ಮಾಡಿ ತಾಯಿ ಭುವನೇಶ್ವರಿಯ ವಿಗ್ರಹ ವಿರಿಸಿ ಪೂಜೆಗೈದು. ಸಿಹಿ ಹಂಚಿ ಮತ್ತು ಅನ್ನಸಂತರ್ಪಣೆ ನಡೆಸಿದರು

ಉದ್ದೂರ್ ಕಾವಲ್ ಗ್ರಾಪಂ: ತಾಲೂಕಿನ ರತ್ನಪುರಿ ಗ್ರಾಮದ ಉದ್ದೂರ್ ಕಾವಲ್ ಗ್ರಾಪಂನಲ್ಲಿ 70ನೇ ಕನ್ನಡ ರಾಜೋತ್ಸವದಲ್ಲಿ ಕನ್ನಡಾಂಬೆ ಭಾವಚಿತ್ರಕ್ಕೆ ಗ್ರಾ.ಪಂ. ಸದಸ್ಯ ಮನುಕುಮಾರ್ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅರುಣ್, ಗ್ರಾಪಂ ಅಧ್ಯಕ್ಷರಾದ ಮೀನಾ ದೇವರಾಜು, ಉಪಾಧ್ಯಕ್ಷೆ ಶಾಂತಿ, ಮಾಜಿ ಅಧ್ಯಕ್ಷರಾದ ಪದ್ಮಮ್ಮ ನಾರಾಯಣಗೌಡ, ಮುಭಾರಕ್ ಭಾನು, ಮಾಜಿ ಉಪಾಧ್ಯಕ್ಷೆ ಗೌರಮ್ಮ ಶಂಕರ್ ನಾಯಕ್, ಸದಸ್ಯರಾದ ವಿಜೇಂದ್ರಕುಮಾರ್, ಶೋಭಾ, ಗೋವಿಂದ ಶೆಟ್ಟಿ, ಗ್ರಾಮ ಲೆಕ್ಕಿಗ ಕಿರಣ್ ಕುಮಾರ್, ನೌಕರರು, ನೀರುಗಂಟಿಗಳು ಹಾಜರಿದ್ದರು.

ಧರ್ಮಾಪುರ ಗ್ರಾಪಂ: ತಾಲೂಕಿನ ಧರ್ಮಾಪುರ ಗ್ರಾಪಂನಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಕನ್ನಡಾಂಬೆ ಭಾವಚಿತ್ರಕ್ಕೆ ಗ್ರಾಪಂ ಅಧ್ಯಕ್ಷ ವಿ.ಮಹದೇವ್ ಪುಷ್ಪಾರ್ಚನೆ ಮಾಡಿದರು. ಉಪಾಧ್ಯಕ್ಷೆ ಜ್ಯೋತಿ ಶಂಕರ್, ಸೇರಿದಂತೆ ಸದಸ್ಯರು ಭಾಗವಹಿಸಿದ್ದರು.

ಒಳ ಮೀಸಲಾತಿ ಹೋರಾಟಗಾರರ ವಿರುದ್ಧ ಪ್ರಕರಣ ರದ್ದುಪಡಿಸುವಂತೆ ಆಗ್ರಹ



ಪಟ್ಟಣದ ಹಳೇ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಾಬು ಜಗಜೀವನ್ ರಾಂ ಸಂಘದ ಮಾಜಿ ಅಧ್ಯಕ್ಷ ಹುಣಸೂರು ಪುಟ್ಟಯ್ಯ ಮಾತನಾಡಿದರು.

ತಿ.ನರಸೀಪುರ, ನ.3– ಸಂಪೂರ್ಣ ಒಳ ಮೀಸಲಾತಿ ಜಾರಿಗಾಗಿ ನಡೆದ ಹೋರಾಟದ ವೇಳೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಅಪಮಾನ ಮಾಡಿದ್ದಾರೆಂದು ಹೋರಾಟಗಾರರ ವಿರುದ್ಧ ತಿ.ನರಸೀಪುರ ಠಾಣೆಯಲ್ಲಿ ದಾಖಲಿಸಿರುವ ಸುಳ್ಳು ಪ್ರಕರಣವನ್ನು ಸರ್ಕಾರ ರದ್ದು ಮಾಡಬೇಕೆಂದು ಬಾಬು ಜಗಜೀವನ್ ರಾಂ ಸಂಘದ ಮಾಜಿ ಅಧ್ಯಕ್ಷ ಹುಣಸೂರು ಪುಟ್ಟಯ್ಯ ಆಗ್ರಹಿಸಿದರು.

ಪಟ್ಟಣದ ಹಳೇ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.28ರಂದು ರಾಜೇಶ್ ಎಂಬ ವ್ಯಕ್ತಿ ಮಾದಿಗ ಒಳ ಮೀಸಲಾತಿ ಹೋರಾಟಗಾರರಾದ ಭಾಸ್ಕರ್ ಪ್ರಸಾದ್, ವಕೀಲ ಅರುಣ್‌ಕುಮಾರ್, ಮರಡೀಪುರ ರವಿಕುಮಾರ್, ಗೋಪಾಲಪುರ ಮಂಜುನಾಥ್ ಇನ್ನಿತರರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದು, ಇದು ಮಾದಿಗರ ಒಳ ಮೀಸಲಾತಿ ಹೋರಾಟವನ್ನು ಹತ್ತಿಕ್ಕುವ ವ್ಯರ್ಥ ಪ್ರಯತ್ನ. ಇದು ಸಚಿವ ಮಹದೇವಪ್ಪ ಅವರ ಪ್ರಾಯೋಜಿತ ನಾಟಕ ಎಂದರು.

ಸಚಿವ ಮಹದೇವಪ್ಪ ಅವರು ಕೇವಲ ಒಂದು ವರ್ಗಕ್ಕೆ ಸೀಮಿತ ಎಂಬಂತೆ ವರ್ತಿಸುತ್ತಿದ್ದು, ಸುದೀರ್ಘ ರಾಜಕೀಯ ಅನುಭವವುಳ್ಳ ಅವರ ವ್ಯಕ್ತಿತ್ವಕ್ಕೆ ಇದು ಶೋಭೆ ತರುವುದಿಲ್ಲ. ಒಳ ಮೀಸಲಾತಿ ಹೋರಾಟವನ್ನು ವಾಮಮಾರ್ಗ ಮುಖೇನ ತಡೆಗಟ್ಟುವ ತಂತ್ರಗಾರಿಕೆಯನ್ನು ಸಚಿವ ಮಹದೇವಪ್ಪ ಅನುಸರಿಸುತ್ತಿದ್ದು, ತಾಲೂಕಿನ ಮಾದಿಗ ಸಮುದಾಯದ ಜನರಲ್ಲಿ ತಮಗೆ ಓಟು ಹಾಕಿ ತಪ್ಪು ಮಾಡಿದ್ದೇವೆ ಎಂಬ ಪಾಪಪ್ರಜ್ಞೆ ಕಾಡುತ್ತಿದೆ. ಇದು ಮುಂದಿನ ಚುನಾವಣೆಯಲ್ಲಿ ನಿಮಗೆ ಮುಳುವಾಗುವ ಸಾಧ್ಯತೆಯಿದೆ ಎಂದರು.

ಮಾದಿಗ ಸಮುದಾಯ ಮತ್ತು ಹೋರಾಟಗಾರರು ಒಳ ಮೀಸಲಾತಿ ಕುರಿತ ಸುಪ್ರೀಂಕೋರ್ಟ್ ಆದೇಶ ಮತ್ತು ನ್ಯಾ.ನಾಗಮೋಹನ್ ದಾಸ್ ಆಯೋಗದ ಶಿಫಾರಸ್ಸಿನ ಪರವಿದ್ದು, ನಮ್ಮ ಸಮುದಾಯ ಸಂಪೂರ್ಣ ಒಳಮೀಸಲಾತಿ ಜಾರಿಗೆ ರಾಜ್ಯ ಸರ್ಕಾರವನ್ನು ಅಗ್ರಹಿಸುತ್ತದೆ ಎಂದರು.

ಸುದ್ದಿಘೋಷ್ಠಿಯಲ್ಲಿ ಮಾದಿಗ ಜನಾಂಗದ ವಾಟಾಳು ಪುಟ್ಟಸ್ವಾಮಿ, ಕುಪ್ಯ ಶಂಭಯ್ಯ, ಹೊಸಹಳ್ಳಿ ಚಿನ್ನಸ್ವಾಮಿ, ಕಳ್ಳಿಪುರ ನಾರಾಯಣ್, ಗೋಪಾಲಪುರದ ಶ್ರೀಧರ್, ರಾಜೇಶ್, ವಿಜಯ್, ಸಿದ್ದನ ಹುಂಡಿ ವಡ್ಡಲ್ಲಯ್ಯ, ಗೋಪಿ, ಕೆ. ಜಯರಾಂ ಇತರರು ಹಾಜರಿದ್ದರು.

ಭ್ರಷ್ಟಾಚಾರದ ವಿರುದ್ಧ ಹೋರಾಟಗಳು ನಡೆಯದಿದ್ದರೆ ಪ್ರಜೆಗಳಿಗೆ ಭವಿಷ್ಯ ಇರುವುದಿಲ್ಲ

ಕೆ.ಆರ್.ನಗರ, ನ.3– ಭ್ರಷ್ಟಾಚಾರದ ವಿರುದ್ದ ಹೋರಾಟಗಳು ನಡೆಯದಿದ್ದರೆ ಭವಿಷ್ಯದಲ್ಲಿ ಮುಂದಿನ ಪ್ರಜೆಗಳಿಗೆ ಯಾವುದೆ ಭವಿಷ್ಯ ಇರುವುದಿಲ್ಲ ಎಂದು ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಕಾರ್ಯಾಚರಣೆ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ದಯಾನಂದ್ ಹೇಳಿದರು.

ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ನಡೆದ ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಕಾರ್ಯಾಚರಣೆ ಸಮಿತಿ ಇಂಡಿಯಾದ ತಾಲೂಕು ಘಟಕದ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಸಮಾವೇಶ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ನಮ್ಮ ಹೋರಾಟ ಸರಕಾರಿ ನೌಕರರ ವಿರುದ್ದ ಅಲ್ಲ ಭ್ರಷ್ಟ ನೌಕರರ ವಿರುದ್ದ ಎಂದು ಹೇಳಿದ ಅವರು, ಈಮೂಲಕ ಭ್ರಷ್ಟರಹಿತ ಸಮಾಜ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು.

ಸಂಘದ ತಾಲೂಕು ಅಧ್ಯಕ್ಷ ಎಂ.ಆರ್.ಶಿವಕುಮಾರ್, ಕಾರ್ಯಾಧ್ಯಕ್ಷ ಕೆ.ಎನ್.ಲೋಕೇಶ್‌ಕುಮಾರ್, ರಾಜ್ಯ ಮಹಿಳಾ ಕಲ್ಯಾಣ ಮುಖ್ಯಸ್ಥೆ ರಜನಿ ರಾಜ್, ಮೈಸೂರು ಜಿಲ್ಲಾಧ್ಯಕ್ಷ ಡಿ.ದೇವರಾಜಪ್ಪ, ಹಾಸನ ಜಿಲ್ಲಾಧ್ಯಕ್ಷ ಟಿ.ಮಲ್ಲೇಶ್, ಮೈಸೂರು ವಿಭಾಗ ಅಧ್ಯಕ್ಷ ಎಸ್.ಗುರುಸ್ವಾಮಿ, ರಾಜ್ಯ ಕಾರ್ಯದರ್ಶಿ ಶ್ರೀನಿವಾಸಮೂರ್ತಿ ಮತ್ತಿತರರು ಮಾತನಾಡಿ, ಎಲ್ಲಾ ರಂಗಗಳಲ್ಲಿ ಭ್ರಷ್ಟಾಚಾರ ಎಂಬುದು ಮಿತಿ ಮೀರಿದ್ದು ಭ್ರಷ್ಟಾಚಾರವನ್ನು ತಡೆಯಲು ಪ್ರತಿಯೊಬ್ಬರೂ ಕಾನೂನು ಅರಿತು ಒಗ್ಗಟ್ಟಿನಿಂದ ಹೋರಾಟ ಮಾಡಿದಲ್ಲಿ ದೌರ್ಜನ್ಯ, ಲಂಚ, ಭ್ರಷ್ಟಾಚಾರ, ಅತ್ಯಾಚಾರ ತಡೆಯಲು ಸಾಧ್ಯ ಎಂದರು.



ಸಮಾವೇಶವನ್ನು ಅರಕೆರೆವಿರಕ್ತಮಠದ ಶ್ರೀಸಿದ್ದೇಶ್ವರಸ್ವಾಮೀಜಿ ಉದ್ಘಾಟಿಸಿದರು.

ಅರಕೆರೆ ವಿರಕ್ತ ಮಠದ ಶ್ರೀಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ರಾಜ್ಯ ಮೀಡಿಯಾ ಕಾರ್ಯದರ್ಶಿ ಪ್ರಸನ್ನಕುಮಾರ್, ಹಾಸನ ಜಿಲ್ಲಾ ಕಾರ್ಯಾಧ್ಯಕ್ಷ ಎ.ಎಸ್.ಸುಂದರ್, ಸಮಾಜ ಸೇವಕಿ ಸರ್ವಮಂಗಳ, ಕಮಲಮ್ಮ, ಮೈಸೂರು ವಿಭಾಗದ ಮಹದೇವಪ್ಪ, ಸಿದ್ದಲಿಂಗಸ್ವಾಮಿ, ರಾಜೇಂದ್ರಸ್ವಾಮಿ, ಜಯಶೆಟ್ಟಿ, ತಾಲೂಕು ಪ್ರಧಾನ ಕಾರ್ಯದರ್ಶಿ ಎಸ್.ಟಿ.ತೀರ್ಥೇಶ್, ಕಾರ್ಯದರ್ಶಿ ಮಾದಪ್ಪ ಉಪಾಧ್ಯಕ್ಷರಾದ ಎ.ಪಿ.ಶಿವಕುಮಾರ್, ಎಂ.ಆರ್.ರಂಗಮ್ಮ ವಿ.ಆರ್.ಪುಟ್ಟರಾಜು, ಸಂಘಟನಾ ಕಾರ್ಯದರ್ಶಿ ಕೆ.ಬಸವರಾಜು ಮತ್ತಿತರರು ಹಾಜರಿದ್ದರು.

ಎರಡೂವರೆ ಕೆಜಿ ಗಾಂಜಾ ವಶ; ಓರ್ವನ ಬಂಧನ

ಕೆ.ಆರ್.ನಗರ, ನ.3– ಪಟ್ಟಣದ ವಿದ್ಯಾನಗರದ ಮನೆಯೊಂದರ ಮೇಲೆ ದಾಳಿ ನಡೆಸಿದ ಪೊಲೀಸರು ಎರಡೂವರೆ ಕೆಜಿ ಗಾಂಜಾದೊಂದಿಗೆ ಓರ್ವನನ್ನು ಬಂಧಿಸಿದ್ದಾರೆ. ಪಟ್ಟಣದ ವಿದ್ಯಾನಗರದಲ್ಲಿ ಜಿಬ್ರಾನ್ ಜೈನುಲ್ ಅರಬ್ ಎಂಬಾತನ ಬಾಡಿಗೆ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು ಮನೆ ಶೋಧಿಸಿದಾಗ ಎರಡೂವರೆ ಕೆಜಿ ಗಾಂಜಾ ಸಿಕ್ಕಿದೆ. ಮಾಲು ಸಮೇತ ಆರೋಪಿಯನ್ನು ಬಂಧಿಸಲಾಗಿದೆ.

ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಅವರು ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸಲಾಗುವುದು ಎಂದು ಮಾಹಿತಿ ನೀಡಿದರು. ದಾಳಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಲಿಂಗರಾಜು, ಸ್ವಾಮಿಗೌಡ ಮತ್ತು ಸಿಬ್ಬಂದಿ ಇದ್ದರು.

ಮಾನವ–ಪ್ರಾಣಿ ಸಂಘರ್ಷದಿಂದ ಅನಾಹುತ ಸಂಭವಿಸಿದಲ್ಲಿ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಿ ಕ್ರಮ

ಅಧಿಕಾರಿಗಳ ಸಭೆಯಲ್ಲಿ ಶಾಸಕ ದರ್ಶನ್ ಎಚ್ಚರಿಕೆ



ನಂಜನಗೂಡು, ನ.3– ನಂಜನಗೂಡು ವಿಧಾನ ಸಭಾ ಕ್ಷೇತ್ರದಲ್ಲಿ ಮಾನವ ಪ್ರಾಣಿ ಸಂಘರ್ಷದಿಂದ ಯಾವುದೇ ಅನಾಹುತ ಸಂಭವಿಸದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕು. ಯಾವುದಾದರೂ ಅನಾಹುತ ಸಂಭವಿಸಿದಲ್ಲಿ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಎಚ್ಚರಿಕೆ ನೀಡಿದರು.

ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಮತ್ತು ನಗರ ಪ್ರದೇಶದ ಸುತ್ತಮುತ್ತ ಹುಲಿ ಚಿರತೆ ಮತ್ತು ಕಾಡು ಪ್ರಾಣಿಗಳಿಂದ ರೈತರಿಗೆ ಆಗುತ್ತಿರುವ ಹಾನಿಯನ್ನು ತಡೆಗಟ್ಟುವ ಸಲುವಾಗಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ತಾಲೂಕು ಮಟ್ಟದ ಅಧಿಕಾರಿಗಳ ತುರ್ತು ಸಭೆ ನಡೆಸಿ ಮಾತನಾಡಿದರು.

ಯಡಿಯಾಲ ಭಾಗದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹೆಚ್ಚಾಗಿ ಹುಲಿ ಕಾಣಿಸಿಕೊಂಡಿದೆ, ಹುಲಿಯಿಂದ ತಾಲೂಕಿನಲ್ಲಿ ಪ್ರಾಣ ಹಾನಿಯೂ ಸಂಭವಿಸಿದೆ. ಅಲ್ಲದೆ ನಮ್ಮ ಪಕ್ಕದ ಕ್ಷೇತ್ರದ ಸರಗೂರಿನಲ್ಲಿ ಕಾಡು ಪ್ರಾಣಿಗಳ ಸಂಘರ್ಷದಿಂದ ಅತ್ಯಂತ ಹೆಚ್ಚು ಪ್ರಾಣ ಹಾನಿ ಸಂಭವಿಸಿದೆ. ಈ ಘಟನೆ ನಮಗೆ ಪಾಠವಾಗಬೇಕಿದೆ ಆದ್ದರಿಂದ ಮುಂದಿನ ಎರಡರಿಂದ ಮೂರು ತಿಂಗಳು ಅತ್ಯಂತ ಹೆಚ್ಚಾಗಿ ಪ್ರಾಣಿಗಳು ಆಹಾರ ಹುಡುಕಿ ನಾಡಿನತ್ತ ಬರುವ ಕಾರಣ, ಕಾಡು ಪ್ರಾಣಿಗಳಿಂದ ಅನಾಹುತ ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ. ಅರಣ್ಯ ಪ್ರದೇಶದಲ್ಲಿ ಹೆಚ್ಚು ಪೊದೆ ಇರುವ ಪ್ರದೇಶಗಳನ್ನು ತೆರವುಗೊಳಿಸಿ ಜಂಗಲ್ ಕ್ಲೀನಿಂಗ್ ನಡೆಸಬೇಕು. ಗ್ರಾಮ ಪಂಚಾಯಿತಿ ಅಧಿಕಾರಿಗಳು ಹುಲಿ ಕಾಣಿಸಿಕೊಂಡ ನಂತರ ಡಂಗೂರ ಹೊಡೆಸಿ ಗ್ರಾಮಸ್ಥರು ಎಚ್ಚರಿಕೆ ವಹಿಸುವಂತೆ ಜಾಗೃತಿ ಮೂಡಿಸಬೇಕು. ಕೋಂಬಿಂಗ್ 144 ಸೆಕ್ಷನ್ ಜಾರಿಗೊಳಿಸಿ ಜನರು ಜಮಾವಣೆಗೊಂಡು ಕೋಂಬಿಂಗ್ ಕಾರ್ಯಾಚರಣೆಗೆ ತಡೆ ಉಂಟಾಗದಂತೆ ಪೊಲೀಸರು ಕ್ರಮ ವಹಿಸಬೇಕು, ಅಲ್ಲದೆ ಎಐ ಚಿತ್ರೀಕರಣದ ಮೂಲಕ ಚಿತ್ರಗಳನ್ನು ಸೃಷ್ಟಿಸಿ, ಜನರಲ್ಲಿ ಭಯದ ವಾತಾವರಣ ಸೃಷ್ಟಿ ಮಾಡುವವರ ವಿರುದ್ಧ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಕಂಟ್ರೋಲ್ ರೂಂ ತೆರೆಯಿರಿ: ತಾಲೂಕು ಆಡಳಿತ ಮಾನವ ಪ್ರಾಣಿ ಸಂಘರ್ಷವನ್ನು ತಡೆಯುವ ನಿಟ್ಟಿನಲ್ಲಿ ಜನರಿಗೆ ಅನುಕೂಲವಾಗುವಂತೆ ಕಂಟ್ರೋಲ್ ರೂಂ ತೆರೆದು ಸಾರ್ವಜನಿಕರಿಗೆ ಸಹಾಯವಾಣಿ ದಿನದ 24 ಗಂಟೆಗಳನ್ನು ಲಭ್ಯವಾಗುವಂತೆ ಕ್ರಮವಹಿಸಬೇಕು ಎಂದು ತಹಸೀಲ್ದಾರ್ ಶಿವಕುಮಾರ್‌ರವರಿಗೆ ಸೂಚನೆ ನೀಡಿದರು.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಎಸಿಎಫ್ ಪರಮೇಶ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಅರಣ್ಯಾಧಿಕಾರಿಗಳು ಮತ್ತು ತಾಲೂಕು ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

2018, 2019ನೇ ಸಾಲಿನ ಕನ್ನಡ ಚಲನಚಿತ್ರ ಪ್ರಶಸ್ತಿ ಪ್ರದಾನ

ಫಿಲಂಸ್ ನಿರ್ಮಾಣ ಹಾಗೂ ರಿಷಬ್ ಶೆಟ್ಟಿ ನಿರ್ದೇಶನದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ, ಚಂದ್ರಿಕಾ ಫಿಲಂಸ್ ನಿರ್ಮಾಣ ಹಾಗೂ ಬಿ.ಮಂಜುನಾಥ್ ನಿರ್ದೇಶನದ 'ಹೂವು ಬಳ್ಳಿ' ಅತ್ಯುತ್ತಮ ಮಕ್ಕಳ ಚಿತ್ರ, ರಾಜ್ ಹಮ್ಮಿಣಿ ಸಿನಿಮಾಸ್ ನಿರ್ಮಾಣ ಹಾಗೂ ಬಸವರಾಜ್ ವಿ.ಹಮ್ಮಿಣಿ ನಿರ್ದೇಶನದ 'ಬೆಳಕಿನ ಕನ್ನಡಿ' ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ, ಸಂಕ್ರಿ ಮೋಷನ್ ಪಿಕ್ಚರ್ಸ್ ನಿರ್ಮಾಣ ಹಾಗೂ ಸುರ್ಯೋದಯ ಪೆರಂಪಳ್ಳಿ ನಿರ್ದೇಶನದ 'ದೇಯಿ ಬೈದೇತಿ (ತುಳು)' ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರವಾಗಿ ಹೊರಹೊಮ್ಮಿವೆ.

ರಾಘವೇಂದ್ರ ರಾಜ್‌ಕುಮಾರ್ ಅತ್ಯುತ್ತಮ ನಟ (ಅಮ್ಮನ ಮನೆ ಚಿತ್ರ), ಮೇಘನಾ ರಾಜ್ ಅತ್ಯುತ್ತಮ ನಟಿ (ಇರುವುದೆಲ್ಲ ಬಿಟ್ಟು ಚಿತ್ರ), ಬಾಲಾಜಿ ಮನೋಹರ್ ಅತ್ಯುತ್ತಮ ಪೋಷಕ ನಟ (ಚೂರಿಕಟ್ಟೆ ಚಿತ್ರ), ವೀಣಾ ಸುಂದರ್ ಅತ್ಯುತ್ತಮ ಪೋಷಕ ನಟಿ (ಆ ಕರಾಳ ರಾತ್ರಿ), ಎಸ್.ಹರೀಶ್ ಅತ್ಯುತ್ತಮ ಕಥೆ (ನಾಯಿಗೆರೆ ಚಿತ್ರ), ಪಿ.ಶೇಷಾದ್ರಿ ಅತ್ಯುತ್ತಮ ಚಿತ್ರಕಥೆ (ಮೂಕಜ್ಜಿಯ ಕನಸುಗಳು), ಶಿರೀಷ್ ಜೋಶಿ ಅತ್ಯುತ್ತಮ ಸಂಭಾಷಣೆ (ಸಾವಿತ್ರಿ ಬಾಯಿಫುಲೆ ಚಿತ್ರ), ಐನವೀನ್ ಕುಮಾರ್ ಅತ್ಯುತ್ತಮ ಛಾಯಾಗ್ರಹಣ (ಅಮ್ಮಚ್ಚಿಯೆಂಬ ನೆನಪು ಚಿತ್ರ), ರವಿ ಬಸ್ರೂರ್ ಅತ್ಯುತ್ತಮ ಸಂಗೀತ ನಿರ್ದೇಶನ (ಕೆಜಿಎಫ್), ಸುರೇಶ್ ಆರುಮುಗಂ ಅತ್ಯುತ್ತಮ ಸಂಕಲನ (ತ್ರಾಟಕ ಚಿತ್ರ), ಮಾಸ್ಟರ್ ಆರ್ಯುನ್ ಅತ್ಯುತ್ತಮ ಬಾಲ ನಟ (ರಾಮನ ಸವಾರಿ ಚಿತ್ರ), ಬೇಬಿ ಸಿಂಚನ ಅತ್ಯುತ್ತಮ ಬಾಲ ನಟಿ (ಅಂದವಾದ ಚಿತ್ರ), ಜೆ.ಶಿವಕುಮಾರ್ ಅತ್ಯುತ್ತಮ ಕಲಾ ನಿರ್ದೇಶನ (ಕೆಜಿಎಫ್ ಚಿತ್ರ), ಡಾ.ಬರಗೂರು ರಾಮಚಂದ್ರಪ್ಪ ಅತ್ಯುತ್ತಮ ಗೀತರಚನೆ (ಬಯಲಾಟದ ಭೀಮಣ್ಣ ಚಿತ್ರ), ಸಿದ್ಧಾರ್ಥ ಬೆಳ್ಮಣ್ಣು ಅತ್ಯುತ್ತಮ ಹಿನ್ನೆಲೆಗಾಯಕ (ಸಂತಕವಿ ಕನಕದಾಸರ ರಾಮಧಾನ್ಯ), ಕಲಾವತಿ ದಯಾನಂದ ಅತ್ಯುತ್ತಮ ಹಿನ್ನೆಲೆಗಾಯಕಿ (ದೇಯಿಬೈದೇತಿ ತುಳು ಚಿತ್ರ, ಹಾಡು–ಹೆಜ್ಜೆಗಿರಿ ನಂದನಾ...), ಹೆಚ್.ಅನಂತರಾಯಪ್ಪ ತೀರ್ಪುಗಾರರ ವಿಶೇಷ ಪ್ರಶಸ್ತಿ (ಸಮಾನತೆಯ ಕಡೆಗೆ ಚಿತ್ರ), ವಿ.ಥಾಮಸ್ ತೀರ್ಪುಗಾರರ ವಿಶೇಷ ಪ್ರಶಸ್ತಿಗೆ (ನಿರ್ಮಾಣ ನಿರ್ವಾಹಕ ವಿಭಾಗ, ಅಬ್ಬೆ ತುಮಕೂರು ಸಿದ್ದಪುರುಷ ವಿಶ್ವಾರಾಧ್ಯರು ಚಿತ್ರ) ಭಾಜನರಾದರು.

ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿಗೆ ಲೇಖಕರಾದ ಎನ್.ಎಸ್.ಶಂಕರ್ (ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರಕಾಶನದ 'ಚಿತ್ರಕಥೆ ಗಾಗೆಂದರೇನು') ಹಾಗೂ ಡಾ.ಶರಣು ಹುಲ್ಲೂರು (ಸಾಮಣ್ಣ ಎಂಟರ್ ಪ್ರೈಸಸ್ ಪ್ರಕಾಶನದ 'ಅಂಬರೀಷ್ ವ್ಯಕ್ತಿ–ವ್ಯಕ್ತಿತ್ವ ವರ್ಣರಂಜಿತ ಬದುಕು') ಭಾಜನರಾದರು. ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ವಿ.ಮನೋಜ್ ಕುಮಾರ್ ನಿರ್ಮಾಣ ಹಾಗೂ ನಿರ್ದೇಶನದ 'ಪಡುವಾರಹಳ್ಳಿ' ಭಾಜನವಾಯಿತು.

2019ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳ ವಿವರ; ಮಿತ್ರಚಿತ್ರ ನಿರ್ಮಾಣ, ಪಿ.ಶೇಷಾದ್ರಿ ನಿರ್ದೇಶನದ 'ಮೋಹನದಾಸ್' ಮೊದಲನೇ ಅತ್ಯುತ್ತಮ ಚಿತ್ರ ಕೃಷ್ಣ ಟಾಕೀಸ್ ನಿರ್ಮಾಣ, ಡಾರ್ಲಿಂಗ್ ಕೃಷ್ಣ ನಿರ್ದೇಶನದ 'ಲವ್ ಮಾಕ್‌ಟೈಲ್' ಎರಡನೇ ಅತ್ಯುತ್ತಮ ಚಿತ್ರ, ಶ್ರೀ ಪರಮೇಶ್ವರಿ ಆರ್ಟ್ಸ್ ನಿರ್ಮಾಣ, ವೈ.ಶ್ರೀನಿವಾಸ್ ನಿರ್ದೇಶನದ 'ಅರ್ಘ್ಯಂ' ಮೂರನೇ ಅತ್ಯುತ್ತಮ ಚಿತ್ರ, ಬುಡ್ಡಿದೀಪ ಸಿನಿಮಾ ಹೌಸ್ ನಿರ್ಮಾಣ, ಎನ್.ಮಂಜುನಾಥ್ ನಿರ್ದೇಶನದ 'ಕನ್ನೇರಿ' ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ, ನಾಗತಿಹಳ್ಳಿ ಸಿನಿ ಕಂಬೈನ್ಸ್ ನಿರ್ಮಾಣ, ಡಾ.ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಇಂಡಿಯಾ ವರ್ಸಸ್ ಇಂಗ್ಲೆಂಡ್' ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ, ಎಸ್.ಆರ್.ಎಂಟರ್ ಪ್ರೈಸಸ್ ನಿರ್ಮಾಣ, ಜಿ.ಅರುಣ್‌ಕುಮಾರ್ ನಿರ್ದೇಶನದ 'ಎಲ್ಲಿ ಆಡೋದು ನಾವು ಎಲ್ಲಿ ಆಡೋದು' ಅತ್ಯುತ್ತಮ ಮಕ್ಕಳ ಚಿತ್ರ, ಶ್ರೀ ರೇವಣಸಿದ್ದೇಶ್ವರ ಮೂವೀಸ್ ನಿರ್ಮಾಣ, ಎನ್.ನಾಗೇಶ್ ನಿರ್ದೇಶನದ ಗೋಪಾಲ ಗಾಂಧಿ' ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ, ಗುಲ್ವಾಡಿ ಟಾಕೀಸ್ ನಿರ್ಮಾಣ, ಯಾಕೂಬ್ ಖಾದರ್ ಗುಲ್ವಾಡಿ ನಿರ್ದೇಶನದ 'ಟ್ರಿಬಲ್ ತಲಾಕ್ (ಬ್ಯಾರಿ)' ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ ಪ್ರಶಸ್ತಿಗಳಿಗೆ ಭಾಜನವಾದವು.

ಕಿಚ್ಚ ಸುದೀಪ್ ಅತ್ಯುತ್ತಮ ನಟ (ಪೈಲ್ವಾನ್ ಚಿತ್ರ), ಕುಮಾರಿ ಅನುಪಮಾ ಗೌಡ ಅತ್ಯುತ್ತಮ ನಟಿ (ತ್ರಯಂಬಕಂ ಚಿತ್ರ), ತಬಲಾ ನಾಣಿ ಅತ್ಯುತ್ತಮ ಪೋಷಕ ನಟ (ಕೆಮಿಸ್ಟ್ರಿ ಆಫ್ ಕರಿಯಪ್ಪ), ಕುಮಾರಿ ಅನುಷಾ ಕೃಷ್ಣ ಅತ್ಯುತ್ತಮ ಪೋಷಕ ನಟಿ (ಬ್ರಾಹ್ಮಿ), ಜಯಂತ್ ಕಾಯ್ಕಿಣಿ ಅತ್ಯುತ್ತಮ ಕಥೆ (ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ), ಡಾರ್ಲಿಂಗ್ ಕೃಷ್ಣ ಅತ್ಯುತ್ತಮ ಚಿತ್ರಕಥೆ (ಲವ್ ಮಾಕ್‌ಟೈಲ್), ಡಾ.ಬರಗೂರು ರಾಮಚಂದ್ರಪ್ಪ ಅತ್ಯುತ್ತಮ ಸಂಭಾಷಣೆ (ಅಮೃತ ಮತಿ), ಜಿ.ಎಸ್.ಭಾಸ್ಕರ್ ಅತ್ಯುತ್ತಮ ಛಾಯಾಗ್ರಹಣ (ಮೋಹನದಾಸ), ವಿ.ಹರಿಕೃಷ್ಣ ಅತ್ಯುತ್ತಮ ಸಂಗೀತ ನಿರ್ದೇಶನ (ಯಜಮಾನ), ಜಿ.ಬಸವರಾಜ್ ಅರಸ್ ಅತ್ಯುತ್ತಮ ಸಂಕಲನ (ಝಾನ್ಸಿ ಐಪಿಎಸ್), ಮಾಸ್ಟರ್ ಪ್ರೀತಂ ಅತ್ಯುತ್ತಮ ಬಾಲ ನಟ (ಮಿಂಚು ಹುಳು), ಬೇಬಿ ವೈಷ್ಣವಿ ಅಡಿಗ ಅತ್ಯುತ್ತಮ ಬಾಲ ನಟಿ (ಸುಗಂಧಿ), ಹೊಸ್ಮನೆ ಮೂರ್ತಿ ಅತ್ಯುತ್ತಮ ಕಲಾ ನಿರ್ದೇಶನ (ಮೋಹನದಾಸ), ರಘುಕ್ ಮುತ್ತೂರು ಅತ್ಯುತ್ತಮ ಗೀತರಚನೆ (ಪೆನ್ಸಿಲ್ ಬಾಕ್ಸ್), ರಘು ದೀಕ್ಷಿತ್ ಅತ್ಯುತ್ತಮ ಹಿನ್ನೆಲೆಗಾಯಕ (ಲವ್‌ಮಾಕ್‌ಟೈಲ್), ಡಾ.ಜಯದೇವಿ ಜಂಗಮ ಶೆಟ್ಟಿ ಅತ್ಯುತ್ತಮ ಹಿನ್ನೆಲೆಗಾಯಕಿ (ರಾಗಬೈರವಿ, ಹಾಡು–ವಚನಗಳ ಮರಿ ಹಾಗೂ ಖ್ಯಾಲ್ ಗಾಯನ), ಆರ್.ಗಂಗಾಧರ್ ತೀರ್ಪುಗಾರರ ವಿಶೇಷ ಪ್ರಶಸ್ತಿಗೆ ಭಾಜನರಾದರು. ಇಂಚರ ಪುಟ್ಟಣ್ಣ ಪ್ರೊಡಕ್ಷನ್ಸ್ ತೀರ್ಪುಗಾರರ ವಿಶೇಷ ಪ್ರಶಸ್ತಿಗೆ ಭಾಜನವಾಯಿತು.

ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿಗೆ ಲೇಖಕರಾದ ರಘುನಾಥ ಚ.ಹ (ಅಂಕಿತ ಪುಸ್ತಕ ಪ್ರಕಾಶನದ ಬೆಳ್ಳಿ ತೊರೆ–ಸಿನಿಮಾ ಪ್ರಬಂಧಗಳು), ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ಮನೋಹರ್ ಎಸ್.ಐಯ್ಯರ್ ನಿರ್ಮಾಣ ಹಾಗೂ ಶ್ರೀನಾಥ್ ಎಸ್.ಹಡಗಲಿ ನಿರ್ದೇಶನದ 'ಗುಳೆ' ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ಭಾಜನವಾಯಿತು.

ರೆಸಾರ್ಟ್‌ಗಳಿಗೆ ಕಡಿವಾಣ

ಒಂದು ಸತ್ಯ ಹೇಳುತ್ತೇನೆ ಕೇಳಿ, ಜನರು ಕಾಡಿನೊಳಗೆ ಓಡಾಡಲು ಶುರು ಮಾಡಿ ದ್ದಾರೆ. ಹೀಗಾಗಿ ಪ್ರಾಣಿಗಳು ಕಾಡಿನಿಂದ ಹೊರ ಬರಲು ಪ್ರಾರಂಭಿಸಿವೆ. ಕಾಡಿನೊಳಗೆ ಪ್ರಾಣಿಗಳಿಗೆ ಮೇವು, ನೀರು ಸಿಗುತ್ತಿಲ್ಲ. ಇದರಿಂದಲೂ ಪ್ರಾಣಿಗಳು ನಾಡಿಗೆ ಬರಲು ಆರಂಭಿಸಿವೆ ಎಂದು ಹೇಳಿದರು. ಹುಲಿ ದಾಳಿ ಪ್ರಕರಣಕ್ಕೆ ಸಂಬಂಧಿಸಿ ದುತೆ ನಾನೇ ಪ್ರತ್ಯೇಕ ಸಭೆ ಕರೆಯುತ್ತಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಹೈಕಮಾಂಡ್ ತೀರ್ಮಾನವೇ ಅಂತಿಮ

ಸಂಪುಟ ಪುನಾರಚನೆ ಬಗ್ಗೆ ಹೈಕಮಾಂಡ್ ಏನು ನಿರ್ದೇಶನ ನೀಡುತ್ತದೆಯೋ ಅದರಂತೆ ನಡೆದುಕೊಳ್ಳುತ್ತೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಬಿಹಾರ ಚುನಾವಣಾ ಪ್ರಚಾರಕ್ಕೆ ನನ್ನ ಕರೆದಿಲ್ಲ. ಆದ ಕಾರಣ ನಾನು ಅಲ್ಲಿಗೆ ಹೋಗಿಲ್ಲ, ಕರೆದರೆ ಹೋಗುತ್ತೇನೆ. ಆದರೆ ಈ ಬಾರಿ ಬಿಹಾರದಲ್ಲಿ ಇಂಡಿ ಒಕ್ಕೂಟ ಅಧಿಕಾರಕ್ಕೆ ಬರುತ್ತದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು. ನಿತೀಶ್ ಕುಮಾರ್ ಅವರ ಆಡಳಿತ ಬಿಹಾರ ಜನತೆಗೆ ಬೇಸರ ತಂದಿದೆ. ಎಲ್ಲಾ ಪಕ್ಷ ಸುತ್ತಿರುವ ನಿತೀಶ್ ಕುಮಾರ್ ಬಗ್ಗೆ ಜನರಿಗೆ ಅಸಮಾಧಾನವಿದೆ. ಅಲ್ಲದೆ ಆಡಳಿತ ವಿರೋಧಿ ಅಲೆ ಇರುವ ಹಿನ್ನೆಲೆಯಲ್ಲಿ ಬಿಹಾರದಲ್ಲಿ ಇಂಡಿ ಒಕ್ಕೂಟ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಹೇಳಿದರು. ನಮ್ಮ ಗ್ಯಾರಂಟಿಗಳನ್ನೆ ನಿತೀಶ್ ಕುಮಾರ್ ಕೂಡ ಕಾಪಿ ಮಾಡಿದ್ದಾರೆ. ಆದರೆ ಅಲ್ಲಿನ ಜನರು ಅವರನ್ನು ಕೈ ಹಿಡಿಯುವುದಿಲ್ಲ. ಬಿಹಾರದಲ್ಲಿ ಕರ್ನಾಟಕದ ಮತದಾರರಿದ್ದು, ಅವರೂ ಕೂಡ ಇಂಡಿ ಒಕ್ಕೂಟವನ್ನು ಬೆಂಬಲಿಸಲಿದ್ದಾರೆ ಎಂದು ಸಿದ್ದರಾಮಯ್ಯ ತಿಳಿಸಿದರು.


ಮೈಸೂರು ಚಿತ್ರ ನಗರಿ ಯೋಜನೆ ಅತೀ ಶೀಘ್ರ ಆರಂಭ



ಜಯಂತ್ ಕಾಯ್ಕಿಣಿ, ಅನುಪಮಾ ಗೌಡ, ರಾಘವೇಂದ್ರ ರಾಜ್‌ಕುಮಾರ್ ಮೊದಲಾದವರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.



2018ನೇ ಸಾಲಿನ ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರವಾಗಿ ಆಯ್ಕೆಯಾದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಚಿತ್ರದ ನಿರ್ದೇಶಕ ರಿಷಬ್‌ಶೆಟ್ಟಿ ಹಾಗೂ ನಿರ್ಮಾಪಕಿ ಪ್ರಗತಿ ರಿಷಬ್ ಶೆಟ್ಟಿ ಪ್ರಶಸ್ತಿಗಳನ್ನು ಸ್ವೀಕರಿಸಿದರು.



ಮೇಘನಾ ರಾಜ್ 2018ನೇ ಸಾಲಿನ ಅತ್ಯುತ್ತಮ ನಟಿ ಪ್ರಶಸ್ತಿ ಸ್ವೀಕರಿಸಿದರು. ಚಿತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೇಘನಾ ರಾಜ್ ಪೋಷಕರಾದ ಸುಂದರ್ ರಾಜ್, ಪ್ರಮೀಳಾ ಜೋಶಾಯ್ ಇತರರು ಚಿತ್ರದಲ್ಲಿದ್ದಾರೆ.

ಆದರೂ ಸಿನಿಮಾ ತಾರೆಯರನ್ನು ಅನುಸರಿಸುತ್ತಾರೆ. ಆದ್ದರಿಂದ ಮೌಲ್ಯಗಳು ತೆರೆ ಮೇಲಿನ ನಟನೆಗಷ್ಟೇ ಸೀಮಿತವಾಗಬಾರದು. ಕಲಾವಿದರು ನಿಜ ಜೀವನದಲ್ಲೂ ಹಾಗೆಯೇ ನಡೆದುಕೊಳ್ಳುವ ಪ್ರಯತ್ನ ಮಾಡಬೇಕು. ತೆರೆ ಮೇಲಿನ ನಟನೆಗೂ ನಿಜ ಜೀವನಕ್ಕೂ ಭಿನ್ನವಾಗಿರಬಾರದು. ಡಾ.ರಾಜ್‌ಕುಮಾರ್ ಅವರು ಒಂದೇ ರೀತಿಯಲ್ಲಿ ಇದ್ದಿದ್ದರಿಂದಲೇ ಅವರನ್ನು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ ಎಂದರು.

ಮೌಲ್ಯಯುತ ಸಿನಿಮಾಗಳಾಗಲಿ: ಹಿಂದೆ ನಟ–ನಟಿಯರು, ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರು, ಸಂಗೀತಗಾರರು ಸೇರಿದಂತೆ ಚಿತ್ರರಂಗದ ಎಲ್ಲಾ ಹಂತದ ಪ್ರತಿನಿಧಿಗಳ ಸಂಖ್ಯೆ ಕಡಿಮೆ ಇತ್ತು. ಪರಿಣಾಮ ವರ್ಷದಲ್ಲಿ ನಾಲ್ಕೈದು ಸಿನಿಮಾಗಳು ನಿರ್ಮಾಣವಾದರೆ ಹೆಚ್ಚಿತ್ತು. ನಾವು ನೋಡಿದ ಸಿನಿಮಾಗಳಲ್ಲೇ ಮತ್ತೆ ಮತ್ತೆ ವೀಕ್ಷಿಸಬೇಕಿತ್ತು. ಆದರೆ ಈಗ ನಟ–ನಟಿಯರು ಸೇರಿದಂತೆ ಎಲ್ಲಾ ವರ್ಗದವರ ಸಂಖ್ಯೆಯೂ ಹೆಚ್ಚಾಗಿದ್ದು, ಸಿನಿಮಾ ನಿರ್ಮಾಣವೂ ಹೆಚ್ಚಾಗಿದೆ. ಆದರೆ ಸಾಮಾಜಿಕ ಕಳಕಳಿ ಇರುವ ಮೌಲ್ಯಯುತ ಸಿನಿಮಾಗಳ ಸಂಖ್ಯೆ ಕಡಿಮೆಯಾಗಿದೆ. ಹಿಂದಿನಂತೆ ಮೌಲ್ಯಯುತ ಸಿನಿಮಾಗಳ ನಿರ್ಮಾಣ ಹೆಚ್ಚಾಗಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಶಾಸಕರಾದ ಕೆ.ಹರೀಶ್ ಗೌಡ, ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕೆ.ಶಿವಕುಮಾರ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಬಿ.ಬಿ.ಕಾವೇರಿ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ, ಕರ್ನಾಟಕ ವಾಣಿಜ್ಯ ಚಲನಚಿತ್ರ ಮಂಡಳಿ ಅಧ್ಯಕ್ಷ ನರಸಿಂಹಲು, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಐಜಿಪಿ ಡಾ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ವಿಷ್ಣುವರ್ಧನ ಮತ್ತಿತರರಿದ್ದರು.



ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲಾ, ನಟಿ ವೀಣಾ ಸುಂದರ್ ಇತರರು ವಿವಿಧ ಪ್ರಶಸ್ತಿಗಳನ್ನು ಸ್ವೀಕರಿಸಿದರು.


ಕೆ.ಪಿ.ಮಹದೇವಸ್ವಾಮಿಯವರ ಅಮೃತ ಮಹೋತ್ಸವ
ಸಮಾರಂಭಕ್ಕೆ ಆಗಮಿಸುತ್ತಿರುವ ನಾಡಿನ ಎಲ್ಲಾ ಮಹಾಸಂಸ್ಥಾನ ಮಠದ ಜಗದ್ಗುರುಗಳು
ಮತ್ತು ಎಲ್ಲಾ ಮಠಾಧೀಶರುಗಳನ್ನು ಹಾಗೂ ಎಲ್ಲಾ ಗಣ್ಯಾಧಿಗಣ್ಯರಿಗೆ ಆತ್ಮೀಯ ಸ್ವಾಗತ
ಶ್ರೀ ಎಂ.ಸಿ.ಶಿವಾನಂದ ಶರ್ಮ
ಸ್ಮಾರಕ ಪ್ರವೇಶದ್ವಾರ ಹಾಗೂ
ದಾಸೋಹ ಭವನ ಉದ್ಘಾಟನೆ
75 ಜನ್ಮೋತ್ಸವ
ಡಾ.ಶ್ರೀ ಶಿವಕುಮಾರ
ಮಹಾಸ್ವಾಮಿಗಳವರ ಬಯಲು
ರಂಗಮಂದಿರಗಳ ಉದ್ಘಾಟನೆ
ಸಂಘದ ಗೌರವ ಪ್ರಧಾನ ಕಾರ್ಯದರ್ಶಿ
ಶ್ರೀ ಕೆ.ಪಿ.ಮಹದೇವಸ್ವಾಮಿ ಅವರ ಅಮೃತ ಮಹೋತ್ಸವ
ಸಮಾರಂಭಕ್ಕೆ ಆಗಮಿಸುವ
ಹರಗುರು ಚರಮೂರ್ತಿಗಳು
ಹಾಗೂ ಗಣ್ಯರಿಗೆ
ಆತ್ಮೀಯ ಸ್ವಾಗತ
ಬಿ.ಎಂ.ಶಿವಮಲ್ಲಪ್ಪ
ಅಧ್ಯಕ್ಷರು, ಕೃಷಿಕ ಸಮಾಜ ಹಾಗೂ ಉಪಾಧ್ಯಕ್ಷರು,
ಅಖಿಲ ಭಾರತ ವೀರಶೈವ ಮಹಾಸಭಾ
ಮಾಲೀಕರು, ಶರಣ್ ಫ್ಯಾಷನ್,
ಕಾಲೇಜು ರಸ್ತೆ, ತಿ.ನರಸೀಪುರ.
ಮಹೇಂದ್ರ ಎಂ ಶೈವ
4 ನವೆಂಬರ್ 2025 * ಮಂಗಳವಾರ * ಬೆಳಗ್ಗೆ 10.30
ಸ್ಥಳ: ವಿದ್ಯೋದಯ ಶಿಕ್ಷಣ ಸಂಸ್ಥೆಗಳು, ತಿ.ನರಸೀಪುರ


ಶ್ರೀ ಕೆ.ಪಿ.ಮಹದೇವಸ್ವಾಮಿಯವರ ಅಮೃತ ಮಹೋತ್ಸವ
ಸಮಾರಂಭಕ್ಕೆ ಆಗಮಿಸುವ ಹರಗುರು ಚರಮೂರ್ತಿಗಳು
ಹಾಗೂ ಗಣ್ಯರಿಗೆ ಅಭಿನಂದಿಸಿ ಸ್ವಾಗತ ಕೋರುವ :
ಜಿ.ನಂಜುಂಡಸ್ವಾಮಿ ದೊಡ್ಡನಹುಂಡಿ
ಕೋಶಾಧ್ಯಕ್ಷರು
ಅಖಿಲ ಭಾರತ ವೀರಶೈವ ಮಹಾಸಭ ತಿ.ನರಸೀಪುರ
ಹಾಗೂ ಮಾಲೀಕರು ಶ್ರೀ ಕರಿಬಸವೇಶ್ವರ ರೈಸ್ ಮಿಲ್
4ನೇ ನವಂಬರ್ 2025 * ಮಂಗಳವಾರ * ಬೆಳಗ್ಗೆ:-10:30
ಸ್ಥಳ:- ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಆವರಣ

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಚಾಮರಾಜನಗರ ಜಿಲ್ಲಾ APMC ಅಧ್ಯಕ್ಷರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿ ಅಧಿಕಾರ ಸ್ವೀಕರಿಸುತ್ತಿರುವ

ಶ್ರೀ ಗುರುಸ್ವಾಮಿ MB

ಅವರಿಗೆ ಅಭಿನಂದನೆಗಳು

ಶುಭಕೋರುವವರು
ರವಿ, ಶಿವು, ಪಾಂಡು, ಬಿ.ಕೆ. ಬಡಾವಣೆ, ಮೈಸೂರು

ನಿಧನ




ಸರೋಜಮ್ಮ (ಸಾಕಮ್ಮ)
ಲೇಟ್. ರಾಮಲಿಂಗಯ್ಯನವರ ಧರ್ಮಪತ್ನಿ
ನಜರ್‌ಬಾದ್

ಇವರು 03-11-2025 ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು 04-11-2025 ರಂದು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಬೆಳಿಗ್ಗೆ11.30ಕ್ಕೆ ನೆರವೇರಿಸಲಾಗುವುದು.


ದುಃಖತಪ್ತರು : ಗಂಡುಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

23ನೇ ವರ್ಷದ ಪುಣ್ಯ ಸ್ಮರಣೆ



ಟಿ.ಎಸ್.ದಶರಥ್
ಮಾಲೀಕರು, ಶ್ರೀ ತ್ರಿಪುರಾಂಭ ಮಾರ್ಡನ್ ರೈಸ್ ಮಿಲ್, ಮೂಗೂರು

5ನೇ ವರ್ಷದ ಸವಿನೆನಪು




ಎಂ.ಹನುಮಂತಪ್ಪ
ಪತ್ನಿ ಮತ್ತು ಮಕ್ಕಳು ಹಾಗೂ ಕುಟುಂಬದವರು



ಹಸಿರು ನಮ್ಮ ಉಸಿರು

ಮೊದಲನೇ ವರ್ಷದ ಸವಿನೆನಪು




ಶ್ರೀಮಾನ್ ಯಜಮಾನ ಬಂದೀಗೌಡ್ರು

ಚಿಕ್ಕೆಗೌಡನ ಹುಂಡಿ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ
ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಹಚ್ಚ ಹಸಿರಾಗಿದೆ.
ನೀವಿಟ್ಟ ಹೆಜ್ಜೆಯು ನಮ್ಮ ಭವಿಷ್ಯದ ಬುನಾದಿ, ನಿಮ್ಮ ನೆನಪು
ನಮ್ಮೆಲ್ಲರ ಹೃದಯದಲ್ಲಿ ಚಿರಂತನ ನಿತ್ಯ ನೂತನ,
ನಿಮ್ಮ ಪುಣ್ಯ ಪವಿತ್ರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ಕರುಣಿಸಲಿ.

ಸದಾ ನಿಮ್ಮ ನೆನಪಿನಲ್ಲಿರುವ: ಮಗ ಮತ್ತು ಸೊಸೆ, ಬಿ ನಿಂಗೇಗೌಡ ಮತ್ತು ನಾಗರತ್ನ, ಹೆಣ್ಣುಮಕ್ಕಳು ಮತ್ತು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದ ಎಲ್ಲಾ ಸದಸ್ಯರು.

14ನೇ ವರ್ಷದ ಸವಿನೆನಪು



ನಿಧನ : 04.11.2011

ಶ್ರೀ ಬಿ.ಪಾಪಯ್ಯ ಕಂಟ್ರಾಕ್ಟರ್

ಮಾಜಿ ಅಧ್ಯಕ್ಷರು, ಗ್ರಾಮಾಭಿವೃದ್ಧಿ ಸಂಘ, ವಿನಾಯಕನಗರ (ಪಡುವಾರಹಳ್ಳಿ), ಮೈಸೂರು. ನಂ.61, 6ನೇ ಮೇನ್, ವಿನಾಯಕನಗರ, ಮೈಸೂರು–12.

ಸದಾ ನಿಮ್ಮ ನೆನಪಿನಲ್ಲಿರುವ

ಪತ್ನಿ: ಲೇಟ್‌ಶ್ರೀಮತಿ ಚಾಮಮ್ಮ, ಮಕ್ಕಳು: ಪಿ.ಮಾದಪ್ಪ, ಪಿ.ಬಸವರಾಜು ಮತ್ತು ಕುಟುಂಬವರ್ಗದವರು ಹಾಗೂ ಪಿ.ಎಸ್.ಭರತೇಶ್ ನಗರ ಪಾಲಿಕೆ ಮಾಜಿ ಸದಸ್ಯರು.
ಪಡುವಾರಹಳ್ಳಿ (ವಿನಾಯಕನಗರ)

PUBLIC NOTICE

My Client is intended to purchase below mentioned Schedule Property from **Smt. Jayalakshmi & others,** they have acquired the title of the Schedule Property through Partition Deed / Sale Deed / Gift Deed & with other transactions.

Any person having any right, title, interest, claim in or to the Schedule Property or any part thereof by way of any agreement, contract, lease, trust, inheritance, gift, possession, mortgage, exchange or any such deed/instrument of transfer, easement or otherwise, may submit their objection(s), claim(s) by direct or in writing with us at the under mentioned address through Registered Post along with the supporting documentary proof, within **Seven (7)** days from the date of this publication. Any objections received thereafter will not be binding on my Client and my Client shall proceed with the Sale.

SCHEDULE

Survey No. 110/1, measuring 9 Guntas, situated at Doddamaregowdanahalli Village, Ilvala Hobli, Mysore Taluk & District

Sd/- B.S.Leena Devi Papanna
Advocate, Roll No. KAR1558/05
Place: Mysore #9/1, V.V.Mohalla, Mysore,
Date: 3-11-2025 **Mob: 94491-35412**

ಕರ್ನಾಟಕ ಸರ್ಕಾರ
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು–ಮೈಸೂರು
ಕಾರ್ಯಪಾಲಕ ಅಭಿಯಂತರರವರ ಕಛೇರಿ, ನಂ–2 ವಿಭಾಗ, ಕಾಜಯೋ,
ವಿಜಯನಗರ 1ನೇ ಹಂತ, ಮೈಸೂರು–17 ದೂ:0821–2414090
ಇ–ಮೇಲ್ : eecada2mysore@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:04/2025–26 ದಿ:28.10.2025
(ಇ–ಟೆಂಡರ್–ಕಂ–ಬಹಿರಂಗ–ಹರಾಜು)

ಕಾಡಾ ಪ್ರಾಧಿಕಾರದ ವ್ಯಾಪ್ತಿಗೆ ಸಂಬಂಧಿಸಿದ ಸಾತನೂರು ಫಾರಂ, ಮಂಡ್ಯದಲ್ಲಿನ ಕೃಷಿ ಕ್ಷೇತ್ರದಲ್ಲಿ ಇರುವ ತೋಟಗಾರಿಕಾ ಉತ್ಪನ್ನಗಳಾದ ತೆಂಗು, ಮಾವು ಮತ್ತು ಸಪೋಟ ಬೆಳೆಗಳ ಫಸಲನ್ನು ರೂಢಿಸಿಕೊಳ್ಳಲು ಇ–ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಫಸಲಿನ ಬಹಿರಂಗ ಹರಾಜನ್ನು ದಿನಾಂಕ: 15.11.2025 ರಂದು ಬೆಳಗ್ಗೆ 11.30 ಗಂಟೆಗೆ ಸ್ಥಳ: ಸಾತನೂರು ಫಾರಂ, ಮಂಡ್ಯ, ಇಲ್ಲ ನಡೆಸಲಾಗುವುದು.

ಇ–ಪೋರ್ಟಲ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ಟೆಂಡರ್‌ಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಬಿಡ್‌ದಾರರು ಟೆಂಡರ್ ಅನ್ನು ಆನ್‌ಲೈನ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ:30.10.2025 ರಿಂದ ಬಿಡ್‌ದಾರರು ಟೆಂಡರ್ ಅನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 14.11.2025 ಸಂಜೆ 2.30 ಗಂಟೆಯವರೆಗೆ ಹಾಗೂ ಆನ್‌ಲೈನ್‌ನಲ್ಲಿ ಟೆಂಡರ್ ಅನ್ನು ತೆರೆಯುವ ದಿನಾಂಕ:15.11.2025 ಸಂಜೆ 3.00 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ನಂ.2 ವಿಭಾಗ, ಕಾಡಾ, ಕಾಜಯೋ, ಮೈಸೂರು.

ವಾಸಾಸಂಇ/ಸನಿ–ಮಂ/ಕೆಎಸ್ ಎಂಸಿ&ಎ/544/2025–26

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಕಸಬಾ ಹೋಬಳಿ, ಹೆಬ್ಬಾಡಿ ಗ್ರಾಮದ ಸರ್ವೆ ನಂ. 431/2ರ ಒಟ್ಟು ವಿಸ್ತೀರ್ಣ 7 ಎಕರೆ 32.8 ಗುಂಟೆ ಸ್ವತ್ತು ನನ್ನ ಕಕ್ಷಿದಾರರಾದ ಡಾ॥ ಜಿ. ಜನಾರ್ಧನ್ ಬಿನ್ ಲೇಟ್ ಜಿ. ಗೋವಿಂದರಾಜು ರವರಿಗೆ ಸೇರಿದ ಪಿತ್ರಾರ್ಜಿತವಾದ ಸ್ವತ್ತಾಗಿದ್ದು, ನನ್ನ ಕಕ್ಷಿದಾರರ ಸಹೋದರಿಯರಾದ ಶ್ರೀಮತಿ ಜಿ. ಗಾಯತ್ರಿದೇವಿ ಕೋಂ. ರಾಮಲಿಂಗೇಗೌಡ ಜೆ, ಶ್ರೀಮತಿ ಜಿ ಉಷಾ ಕೋಂ ಹೆಚ್. ರಾಮಕೃಷ್ಣೇಗೌಡ ಹಾಗೂ ಸಹೋದರನಾದ ಶ್ರೀ ಜಿ. ಪ್ರಸನ್ನಕುಮಾರ್ ಬಿನ್ ಲೇಟ್ ಜಿ. ಗೋವಿಂದ ರಾಜು ರವರುಗಳು ಒಟ್ಟಾಗಿ ಸೇರಿ, ಅಕ್ರಮ ಲಾಭ ಮಾಡುವ ದುರುದ್ದೇಶದಿಂದ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 20–06–2025 ರಂದು ಮೇಮೋರಂಡಮ್ ಆಫ್ ಅಂಡರ್‌ಸ್ಟ್ಯಾಂಡಿಗ್ (ಎಂ.ಓ.ಯು) ಅನ್ನು ಶ್ರೀ ಡಿ. ಶ್ರೀಹರಿ, ಮಾಲೀಕರು, ಜಿ.ಎಸ್.ಎಸ್. ಪ್ರಾಜೆಕ್ಟ್, ಮೈಸೂರು ರವರೊಂದಿಗೆ ಮಾಡಿಕೊಂಡಿರುತ್ತಾರೆ. ಸದರಿ ಮೇಲ್ಕಂಡ ಒಪ್ಪಂದದ ಕರಾರು ನನ್ನ ಕಕ್ಷಿದಾರರ ಗಮನಕ್ಕೆ ಬಂದ ತಕ್ಷಣ, ಮಾನ್ಯ ಆರನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ, ನ್ಯಾಯಾಲಯ, ಮೈಸೂರು ಇಲ್ಲಿ ಭಾಗಾಂಶ ಮತ್ತು ಇತರ ಪರಿಹಾರ ಕೋರಿ ಅಸಲು ದಾವಾ ಸಂಖ್ಯೆ: 1283/2025 ದಾವೆಯನ್ನು ಈ ಮೇಲ್ಕಂಡ ಪ್ರತಿವಾದಿಗಳ ವಿರುದ್ಧ ದಾಖಲು ಮಾಡಿರುತ್ತಾರೆ. ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿದ್ದು, ಅಸಲು ದಾವೆಯು ವಿಚಾರಣಾ ಹಂತದಲ್ಲಿ ಇರುತ್ತದೆ. ಆದ್ದರಿಂದ, ಸಾರ್ವಜನಿಕರು ಈ ಮೇಲ್ಕಂಡ ಪ್ರತಿವಾದಿಗಳ ಜೊತೆ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಕರಾರು, ಜಂಟಿ ಅಭಿವೃದ್ಧಿ ಕರಾರು, ಮಾರಾಟದ ಒಪ್ಪಂದದ ಕರಾರು, ಮೇಮೋರಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್ (ಎಂ.ಓ.ಯು) ಮುಂತಾದ ವ್ಯವಹಾರಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಿದೆ.

ಷೆಡ್ಯೂಲ್ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಕಸಬಾ ಹೋಬಳಿ, ಹೆಬ್ಬಾಡಿ ಗ್ರಾಮದ ಸರ್ವೆ ನಂ. 431/2ರ ಒಟ್ಟು ವಿಸ್ತೀರ್ಣ 7 ಎಕರೆ 32.8 ಗುಂಟೆ ಸ್ವತ್ತು ಮತ್ತು ಇದಕ್ಕೆ ಚೆಕ್ಕುಬಂಧಿ: ಪೂರ್ವಕ್ಕೆ: ತಾಜ್ ಪೌಲ್ಟ್ರಿಫಾರಂ ; ಪಶ್ಚಿಮಕ್ಕೆ: ಖಾಸಗಿ ಜಮೀನು ; ಉತ್ತರಕ್ಕೆ: ಶ್ರೀಮತಿ ಕಲ್ಪನ ಧರ್ಮಲಿಂಗುರವರ ಸ್ವತ್ತು ; ದಕ್ಷಿಣಕ್ಕೆ: ರಸ್ತೆ.

ಸಹಿ/– ರಾಜಾಚಾರಿ, ಬಿ.ಎ.ಎಲ್.ಎಲ್.ಬಿ., ಪಿಜಿಡಿ, ಹೆಚ್.ಆರ್.ಎಂ., ವಕೀಲರು, ಆರ್.ಸಿ. ಲಾ ಚೇಂಬರ್, 8ನೇ ಕ್ರಾಸ್, 3ನೇ ಮುಖ್ಯರಸ್ತೆ, ಜಯನಗರ, ಮೈಸೂರು. **Mob: 9663223228**

ದಿನಾಂಕ: 29–10–2025. ಸ್ಥಳ: ಮೈಸೂರು